ಸಂಪುಟ: 05 ಸಂಚಿಕೆ: 27 ಪುಟಗಳು: 08 ಶುಕ್ರವಾರ 11 ಏಪ್ರಿಲ್ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**
ಜೀವನವು ಒಂದು ಕಠಿಣ ಆಟ. ವ್ಯಕ್ತಿಯಾಗುವ ನಿಮ್ಮ ಜನ್ಮಸಿದ್ಧ ಹಕ್ಕನ್ನು ಉಳಿಸಿಕೊಳ್ಳುವ ಮೂಲಕ ಮಾತ್ರ ನೀವು ಅದನ್ನು ಗೆಲ್ಲಬಹುದು.

## ಬಹುಕಾಲದ ಬೇಡಿಕೆ ಮಂಗಳೂರು – ಸುಬ್ರಹ್ಮಣ್ಯ ರೈಲಿಗೆ ಚಾಲನೆ

**ಭಕ್ತರಿಗೆ ಅನುಕೂಲವಾಗುವ ವೇಳಾಪಟ್ಟಿ**



• ಉದಯವಾಹಿನಿ, ಮಂಗಳೂರು

ಮಂಗಳೂರಿಗರ ಬಹುಕಾಲದ ಬೇಡಿಕೆಯಾದ ಮಂಗಳೂರು – ಸುಬ್ರಹ್ಮಣ್ಯ ಪ್ಯಾಸೆಂಜರ್ ರೈಲು ಸಂಚಾರಕ್ಕೆ ಏಪ್ರಿಲ್ 12 ರಂದು (ಶುಕ್ರವಾರ) ಸಂಜೆ 4 ಗಂಟೆಗೆ ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ಸೋಮಣ್ಣ ಅವರು ಚಾಲನೆ ನೀಡಲಿದ್ದಾರೆ ಎಂದು ದಕ್ಷಿಣ ಕನ್ನಡ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಹೇಳಿದರು.

ಮಂಗಳೂರು ಸೆಂಟ್ರಲ್ ರೈಲು ನಿಲ್ದಾಣದಲ್ಲಿ ಸುಬ್ರಹ್ಮಣ್ಯ ಮಾರ್ಗ ವರೆಗಿನ ವಿಸ್ತರಣೆಯ ಈ ವಿಶೇಷ ಪ್ಯಾಸೆಂಜರ್ ರೈಲು ಸಂಚಾರಕ್ಕೆ ಹಸಿರು ನಿಶಾನೆ ತೋರಿಸಲಿದ್ದಾರೆ. ಈ ಸಂದರ್ಭ ಜಿಲ್ಲೆಯ ಜನಪ್ರತಿನಿಧಿಗಳು, ರೈಲ್ವೆ ವಿಭಾಗಗಳ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ. ಈ ರೈಲು ಸಂಚಾರದಿಂದ ಸುಬ್ರಹ್ಮಣ್ಯ, ಕಾಣಿಯೂರು, ಎಡಮಂಗಲ ಸೇರಿದಂತೆ ಸುತ್ತಮುತ್ತಲ ಪ್ರಯಾಣಿಕರಿಗೆ, ವಿದ್ಯಾರ್ಥಿಗಳಿಗೆ, ಉದ್ಯೋಗಿಗಳಿಗೆ ಸಹಕಾರಿಯಾಗಲಿದೆ. ಈ ರೈಲು ಕಡಿಮೆ ವೆಚ್ಚದಲ್ಲಿ ಪ್ರಯಾಣಿಸಲು ಸಾಧ್ಯವಾಗಲಿದೆ ಎಂದರು.

**ರೈಲಿನ ವೇಳಾಪಟ್ಟಿ**

ರೈಲು ನಂಬರ್ 56625 ಮಂಗಳೂರು ಸೆಂಟ್ರಲ್‌ನಿಂದ ನಸುಕಿನ 4 ಗಂಟೆಗೆ ಹೊರಟು 5.18 ಕಬಕ ಪುತ್ತೂರು, 6.30 ಕ್ಕೆ ಸುಬ್ರಹ್ಮಣ್ಯ ಮಾರ್ಗ ತಲುಪಲಿದೆ. ಅಲ್ಲಿಂದ ನಂಬರ್ 56626 ರೈಲು 7 ಗಂಟೆಗೆ ಹೊರಟು 7.48 ಕ್ಕೆ ಕಬಕ ಪುತ್ತೂರು, 9.30 ಕ್ಕೆ ಮಂಗಳೂರು ಸೆಂಟ್ರಲ್ ತಲುಪಲಿದೆ. ರೈಲು ನಂಬರ್ 56627 ಸಂಜೆ 5.45 ಕ್ಕೆ ಮಂಗಳೂರು ಸೆಂಟ್ರಲ್‌ನಿಂದ ಹೊರಟು ರಾತ್ರಿ 7.05ಕ್ಕೆ ಕಬಕ ಪುತ್ತೂರು, 8.10 ಕ್ಕೆ ಸುಬ್ರಹ್ಮಣ್ಯ ಮಾರ್ಗ ತಲುಪಲಿದೆ. ಅಲ್ಲಿಂದ ನಂಬರ್ 56628 ರೈಲು ರಾತ್ರಿ 8.40ಕ್ಕೆ ಹೊರಟು 9.28 ಕಬಕ ಪುತ್ತೂರು, 11.10 ಕ್ಕೆ ಮಂಗಳೂರು ಸೆಂಟ್ರಲ್ ತಲುಪಲಿದೆ. ಈ ಪ್ಯಾಸೆಂಜರ್ ರೈಲಿಗೆ ಈ ಮಾರ್ಗದ ಎಲ್ಲಾ ನಿಲ್ದಾಣಗಳಲ್ಲೂ ನಿಲುಗಡೆ ಇರಲಿದೆ. ಯಾತ್ರೆಗೆ ಬಂದ ಭಕ್ತರಿಗೆ ಈ ರೈಲು ಅನುಕೂಲವಾಗಲಿದೆ.

**13 ರಂದು ಕಬಡ್ಡಿ ಮ್ಯಾಟ್ ವಿತರಣೆ:** ಕ್ರೀಡಾ ಭಾರತಿ ದ.ಕ. ಜಿಲ್ಲೆ ಮತ್ತು ದ.ಕ.ಜಿಲ್ಲಾ ಅಮೆಚೂರ್ ಕಬಡ್ಡಿ ಅಸೋಸಿಯೇಷನ್ ಸಹಭಾಗಿತ್ವದಲ್ಲಿ ಸಂಸದರ ಪ್ರದೇಶಾಭಿವೃದ್ಧಿ ನಿಧಿ ಹಾಗೂ ಎನ್ ಎಂಪಿಎ ಇದರ ಸಿಎಸ್‌ಆರ್ ನಿಧಿಯಡಿ ಕೊಡಮಾಡುವ ಕಬಡ್ಡಿ ಮ್ಯಾಟ್ ವಿತರಣಾ ಸಮಾರಂಭ ಏ.13ರಂದು ಬೆಳಗ್ಗೆ 9.30ಕ್ಕೆ ಸ್ಪರ್ಶ ಕಲಾ ಮಂದಿರದಲ್ಲಿ ನಡೆಯಲಿದೆ. ಬಂಟ್ವಾಳ ಶಾಸಕ ರಾಜೇಶ್ ನಾಯ್ಕ ಅಧ್ಯಕ್ಷತೆಯಲ್ಲಿನಡೆಯುವ ಕಾರ್ಯಕ್ರಮದಲ್ಲಿ ಮಾಜಿ ಸಚಿವ ನಾಗರಾಜ ಶೆಟ್ಟಿ, ಎನ್‌ಎಂಪಿಎ ಅಧ್ಯಕ್ಷ ಡಾ.ವೆಂಕಟರಮಣ ಅಕ್ಕರಾಜು ಮತ್ತಿತರರು ಭಾಗವಹಿಸಲಿದ್ದಾರೆ ಎಂದರು.

## ಮುಡಾದಲ್ಲಿ ಮತ್ತೊಂದು ಖಾತೆ ಗೋಲ್‌ಮಾಲ್

• ಉದಯವಾಹಿನಿ, ಮೈಸೂರು

ಮುಡಾದಲ್ಲಿ 50:50 ಹಗರಣ ಆಯ್ತು. ಈಗ ಪೌತಿ ಖಾತೆ ಕರ್ಮಕಾಂಡ ಬಗೆದಷ್ಟು ಬಯಲಾಗುತ್ತಿದೆ. ನಕಲಿ ದಾಖಲೆ ಸೃಷ್ಟಿಸಿ ಮಾದರಿ ಮನೆಯ ಪೌತಿ ಖಾತೆಯನ್ನು ಅಧಿಕಾರಿಗಳು ಮಾಡಿರುವುದು ದಾಖಲಾತಿಗಳಿಂದ ಬೆಳಕಿಗೆ ಬಂದಿದೆ. ಮುಡಾ ವ್ಯವಸ್ಥಾಪಕ ಹಾಗೂ ತಹಶೀಲ್ದಾರ್ ಅಕ್ರಮವಾಗಿ ಪೌತಿ ಖಾತೆ ಮಾಡಿಕೊಟ್ಟಿದ್ದಾರೆ. ಈ ಸಂಬಂಧ ವ್ಯವಸ್ಥಾಪಕ ಸೋಮಸುಂದರ್ ಅವ್ರನ್ನ ಅಮಾನತುಗೊಳಿಸಿ ಮುಡಾ ಆಯುಕ್ತ ರಘುನಂದನ್ ಆದೇಶ ಹೊರಡಿಸಿದ್ದಾರೆ. ಅಲ್ಲದೇ ಮುಡಾ ವಿಶೇಷ ತಹಶೀಲ್ದಾರ್ ಕೆ.ವಿ ರಾಜಶೇಖರ್ ವಿರುದ್ಧವೂ ಶಿಸ್ತು ಕ್ರಮಕ್ಕೆ ಶಿಫಾರಸ್ಸು ಮಾಡಿದ್ದಾರೆ. 1982ರ ನವೆಂಬರ್ 2ರಂದು ಮೈಸೂರಿನ ಗೋಕುಲಂ 3ನೇ ಹಂತದಲ್ಲಿ ನಿರ್ಮಿಸಲಾಗಿದ್ದ ಮಾಡೆಲ್ ಹೌಸ್. ಮನೆ ಸಂಖ್ಯೆ 867 (30x40) ಅನ್ನು ಜಯಲಕ್ಷ್ಮೀಪುರಂನ ಲಿನಿಯನ್ ಶಾರದಾ ಜೋಸೆಫ್ ಎಂಬುವವರಿಗೆ ಮಂಜೂರು ಮಾಡಲಾಗಿತ್ತು. ಪೂರ್ಣ ಹಣ ಪಾವತಿಸಿಕೊಂಡು ಕರಾರು ಪತ್ರ, ದೃಢೀಕರಣ ಪತ್ರ ಸೇರಿದಂತೆ ಎಲ್ಲಾ ದಾಖಲೆಗಳನ್ನೂ ನೀಡಲಾಗಿತ್ತು. ಮನೆ ಮಂಜೂರಾತಿದಾರರು 1983ರ ಸೆಪ್ಟೆಂಬರ್ 3ರಂದು ಮರಣ ಹೊಂದಿದ್ದರು. ಆದ್ರೆ 2024ರ ಮಾರ್ಚ್ 26ರಂದು ಮೃತರ ಕಾನೂನುಬದ್ಧ ವಾರಸುದಾರ ಅಲ್ಲದ ಸಿವಿಲ್ ಮಾರ್ಕಸ್ ಜೋಸೆಫ್ ಎಂಬವರಿಗೆ ನಕಲಿ ವಂಶವೃಕ್ಷ, ಆಧಾರ್ ಸೃಷ್ಟಿಸಿ ಪೌತಿ ಖಾತೆ. ಮಾಡಿ ಕೊಟ್ಟಿದ್ದಾರೆ. ಇದು ದಾಖಲಾತಿಗಳಲ್ಲಿ ಸಾಬೀತಾಗಿದೆ.

## ಮರದ ಕುರ್ಚಿಯಲ್ಲಿ ಕೂರಿಸಿ ದಲಿತ ನಾಯಕನಿಗೆ ಅವಮಾನ

• ಉದಯವಾಹಿನಿ, ಉಡುಪಿ

ಗುಜರಾತಿನ ಅಹಮದಾಬಾದ್ ನಲ್ಲಿ ನಡೆದ ಎಐಸಿಸಿ ಅಧಿವೇಶನದಲ್ಲಿ ದಲಿತ ನಾಯಕ ಮಲ್ಲಿಕಾರ್ಜುನ ಖರ್ಗೆಯವರಿಗೆ ಗಾಂಧಿ ಕುಟುಂಬದ ಸದಸ್ಯರು ಅವಮಾನ ಮಾಡಿದ್ದಾರೆಂದು, ಕಾರ್ಕಳ ಬಿಜೆಪಿ ಶಾಸಕ ವಿ.ಸುನಿಲ್ ಕುಮಾರ್ ಆರೋಪಿಸಿದ್ದಾರೆ. ಕಾಂಗ್ರೆಸ್ಸಿನವರ ತುಷ್ಟೀಕರಣದ ರಾಜಕೀಯ ಮುಂದುವರಿದಿದೆ. ಅಧ್ಯಕ್ಷರೂ ಎನ್ನದೇ, ಹಿರಿಯರೂ ಎನ್ನದೇ, ಮರದ ಕುರ್ಚಿಯಲ್ಲಿ ಖರ್ಗೆಯವರನ್ನು ಕೂರಿಸಲಾಯಿತು ಎಂದು ಆರೋಪಿಸಿದರು. ಎಐಸಿಸಿ ಅಧಿವೇಶನದಲ್ಲಿ ವೇದಿಕೆಯ ಮಧ್ಯ ಭಾಗದಲ್ಲಿ ಮಲ್ಲಿಕಾರ್ಜುನ ಖರ್ಗೆಯವರನ್ನು ಸೋಫಾದಲ್ಲಿ ಕೂರಿಸದೇ, ಎಲ್ಲೋ ಮೂಲೆಯಲ್ಲಿ ಕೂರಿಸಿ ಅವಮಾನ ಮಾಡಲಾಯಿತು. ಇದು, ಸೋನಿಯಾ ಗಾಂಧಿ ಕುಟುಂಬ ದಲಿತರಿಗೆ ತೋರಿಸುವಂತಹ ಗೌರವ ಎಂದು ವ್ಯಂಗ್ಯವಾಡಿದ್ದಾರೆ. ನಮ್ಮ ದೇಶದ ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರ್ ಅವರಿಗೆ ಚುನಾವಣೆಗೆ ಟಿಕೆಟ್ ನೀಡದೇ ಅವಮಾನ ಮಾಡಲಾಯಿತು. ಇಲ್ಲಿ, ಅವರದೇ ಪಕ್ಷದ ಅಧ್ಯಕ್ಷರು ದಲಿತರು ಎನ್ನುವ ಕಾರಣಕ್ಕಾಗಿ ಅವಮಾನ ಮಾಡಿದರು. ಇವರೆಲ್ಲಾ ದಲಿತರ ಬಗ್ಗೆ ದೊಡ್ಡದೊಡ್ಡ ಮಾತುಗಳನ್ನು ಆಡುತ್ತಾರೆ ಎಂದು ಸುನಿಲ್ ಕುಮಾರ್ ಲೇವಡಿ ಮಾಡಿದ್ದಾರೆ.

## ಬೆಲೆ ಏರಿಕೆ ವಿರೋಧಿಸಿ ಕೇಂದ್ರ ಸರ್ಕಾರದ ವಿರುದ್ಧ ಸಮರ

• ಉದಯವಾಹಿನಿ, ಬೆಂಗಳೂರು

ಬೆಲೆ ಏರಿಕೆ ವಿರುದ್ಧ ಬಿಜೆಪಿ ಕಳೆದ ಕೆಲ ದಿನಗಳಿಂದಲೂ ಪ್ರತಿಭಟನೆ ಮಾಡುತ್ತಲೇ ಇದೆ. ಏ.10ರಂದು ಸಹ ಜನಾಕ್ರೋಶ ಯಾತ್ರೆ ಕೈಗೊಂಡಿತ್ತು. ಸದ್ಯ ಇದಕ್ಕೆ ಟಾಂಗ್ ನೀಡಲು ರಾಜ್ಯ ಸರಕಾರ ಕೇಂದ್ರದ ವಿರುದ್ಧ ಪ್ರತಿಭಟನೆ ನಡೆಸಲು ಮುಂದಾಗಿದೆ. ಇತ್ತೀಚೆಗೆ ಸಿಲಿಂಡರ್, ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಿಸಿದ ಕೇಂದ್ರ ಸರಕಾರದ ವಿರುದ್ಧ, ಏ. 17ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು. ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿರುವ ಕೇಂದ್ರ ಸರಕಾರದ ವಿರುದ್ಧ ರಾಜ್ಯ ಸರಕಾರ ಸಮರ ಸಾರಲಿದೆ. ಈ ಹೋರಾಟದಲ್ಲಿ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಭಾಗಿಯಾಗಲಿದ್ದಾರೆ ಎಂದು ಹೇಳಿದರು. ಬಿಜೆಪಿಯಿಂದಲೇ ಕೇಂದ್ರ ಸರಕಾರ ಬೆಲೆ ಏರಿಕೆ ಮಾಡಿದ್ದು ಬಿಜೆಪಿ ನಾಯಕರು ಪ್ರತಿಭಟನೆ ಆರಂಭಿಸಿದ ನಂತರ ಕೇಂದ್ರ ಸರಕಾರ ಸಿಲಿಂಡರ್ ಬೆಲೆಯನ್ನು 50ರೂ.ಗೆ ಏರಿಸಿದೆ. ಪೆಟ್ರೋಲ್, ಡೀಸೆಲ್ ಗೆ 2ರೂ. ಹೆಚ್ಚಿಸಿ ಪ್ರಕಟಣೆ ಹೊರಡಿಸಿದೆ. ಆದ್ರೆ, ಬಿಜೆಪಿ ನಾಯಕರು ನಮ್ಮ ವಿರುದ್ಧ ಹೋರಾಟ ಮಾಡುವುದನ್ನು ಬಿಟ್ಟು, ಕೇಂದ್ರ ಸರಕಾರದ ವಿರುದ್ಧದ ಸಮರ ಫಲಕ ಹಾಕಿಕೊಳ್ಳಬೇಕು ಎಂದು ಗುಡುಗಿದರು.

# ನಮ್ಮವನಲ್ಲ ರಾಣಾ ಪಾಕ್ ಪುರಾಣ

● ಮುಂಬೈ ದಾಳಿ ಮಾಸ್ಟರ್‌ಮೈಂಡ್ ತಹವ್ವೂರ್ ರಾಣಾ ಅರೆಸ್ಟ್ ● ಕೊನೆಗೂ ಭಾರತಕ್ಕೆ ಬಂದ ಮುಂಬೈ ದಾಳಿ ಉಗ್ರ ರಾಣಾ ● ವಿಮಾನ ದೆಹಲಿಗೆ ಬಂದು ಇಳಿಯುತ್ತಿದ್ದಂತೆ ರಾಣಾ ಬಂಧಿಸಿದ ಎನ್‌ಐಎ ● ಭಾರತಕ್ಕೆ ಹಸ್ತಾಂತರವಾದ ಭೂಗತ ಪಾತಕಿ ● ಪಾಕಿಸ್ತಾನ ಭಯೋತ್ಪಾದಕ ಮುಖವಾಡ ಮತ್ತೆ ಬಯಲು



**ದೊಡ್ಡ ಸ್ಕೆಚ್ ಮಾಡಿದ್ದು ಡೇವಿಡ್ ಹೆಡ್ಲಿ**

• ಉದಯವಾಹಿನಿ, ನವದೆಹಲಿ

ಮುಂಬೈ ದಾಳಿಯ ಮಾಸ್ಟರ್‌ಮೈಂಡ್ ತಹವ್ವೂರ್ ರಾಣಾ ದೆಹಲಿಗೆ ಬರುತ್ತಿದ್ದಂತೆಯೇ ಆತನನ್ನು ಎನ್‌ಐಎ ಬಂಧಿಸಿದೆ. 26/11 ಭಯೋತ್ಪಾದಕ ದಾಳಿಯ ಸಂಚುಕೋರ, ಭಾರತಕ್ಕೆ ಬೇಕಾಗಿದ್ದ ಮೋಸ್ಟ್ ವಾಂಟೆಡ್ ತಹವ್ವೂರ್ ಹುಸೇನ್ ರಾಣಾನನ್ನು ದೆಹಲಿಯ ವಿಮಾನ ನಿಲ್ದಾಣಕ್ಕೆ ಕರೆತರಲಾಯಿತು.

ವಿಶೇಷ ವಿಮಾನದಲ್ಲಿ ಅಮೆರಿಕದಿಂದ ಆತನನ್ನು ಗಡೀಪಾರು ಮಾಡಲಾಗಿತ್ತು. 64 ವಯಸ್ಸಿನ ತಹವ್ವೂರ್ ರಾಣಾನನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಬಂಧಿಸಿದೆ. ಅಮೆರಿಕದ ಲಾಸ್ ಏಂಜಲೀಸ್‌ನಿಂದ ಹೊರಟ ರಾಣಾ ಇದ್ದ ವಿಮಾನ ದೆಹಲಿಯ ಪಾಲಂ ತಾಂತ್ರಿಕ ಪ್ರದೇಶದಲ್ಲಿ ಇಳಿಯಿತು. ಪ್ರಾಥಮಿಕ ಔಪಚಾರಿಕತೆಯ ನಂತರ ಆತನನ್ನು ಎನ್‌ಐಎ ಪ್ರಧಾನ ಕಚೇರಿಗೆ ಕರೆದೊಯ್ಯುವ ಸಾಧ್ಯತೆಯಿದೆ. ಉಗ್ರನನ್ನು ದೆಹಲಿಯ ಪಟಿಯಾಲ ಹೌಸ್ ನ್ಯಾಯಾಲಯಕ್ಕೂ ಹಾಜರುಪಡಿಸಲಾಗುವುದು. ನಂತರ ಭಯೋತ್ಪಾದಕ ರಾಣಾನನ್ನು ದೆಹಲಿಯ ಹೆಚ್ಚಿನ ಭದ್ರತೆ ಕಲ್ಪಿಸಲಾಗಿರುವ ತಿಹಾರ್ ಜೈಲಿನಲ್ಲಿ ಇರಿಸಬಹುದು. ಅಂತಿಮವಾಗಿ ವಿಚಾರಣೆಯನ್ನು ಎದುರಿಸಲು ಮುಂಬೈಗೆ ಸ್ಥಳಾಂತರಿಸಬಹುದು ಎಂದು ಮೂಲಗಳು ತಿಳಿಸಿವೆ. ಉಗ್ರನ ಮೇಲೆ ಕ್ರಿಮಿನಲ್ ಪಿತೂರಿ, ಭಾರತ ಸರ್ಕಾರದ ವಿರುದ್ಧ ಯುದ್ಧ ಸಾರುವುದು, ಕೊಲೆ ಮತ್ತು ನಕಲಿ ದಾಖಲೆ ಸೃಷ್ಟಿ, ಕಾನೂನುಬಾಹಿರ ಚಟುವಟಿಕೆಗಳ (ತಡೆಗಟ್ಟುವಿಕೆ) ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ.

ರಾಣಾ ಹಿಂದಿರುಗುವ ಮುನ್ನ ಕೇಂದ್ರ ಗೃಹ ಸಚಿವ ಅಮಿತ್ ಶಾ, ವಿದೇಶಾಂಗ ಸಚಿವ ಎಸ್ ಜೈಶಂಕರ್ ಮತ್ತು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ನಡುವೆ ಸಭೆ ನಡೆದಿತ್ತು. ನಂತರ ಅಮಿತ್ ಶಾ ಅವರು, ಈ ಹಸ್ತಾಂತರವು ಪ್ರಧಾನಿ ನರೇಂದ್ರ ಮೋದಿಯವರ ರಾಜತಾಂತ್ರಿಕತೆಯ ದೊಡ್ಡ ಗೆಲುವು ಎಂದು ಬಣ್ಣಿಸಿದ್ದಾರೆ. ಅಮೆರಿಕಗೆ ಪ್ರಧಾನಿ ಮೋದಿ ಅವರ ಭೇಟಿಯ ಸಂದರ್ಭದಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಅತ್ಯಂತ ದುಷ್ಟ ರಾಣಾನನ್ನು ಭಾರತಕ್ಕೆ ಹಸ್ತಾಂತರಿಸಲು ಅನುಮೋದನೆ ನೀಡಲಾಗಿದೆ ಎಂದು ಘೋಷಿಸಿದ್ದರು. ಆದಾದ ಎರಡು ತಿಂಗಳ ನಂತರ ರಾಣಾನನ್ನು ಹಸ್ತಾಂತರಿಸಲಾಗಿದೆ.

**ದಾಳಿಯ ವಿಚಾರಣಾ ದಾಖಲೆ ಸಲ್ಲಿಕೆ:** 26/11 ಮುಂಬೈ ದಾಳಿಯ ಮಾಸ್ಟರ್ ಮೈಂಡ್ ಎಂದು ಹೇಳಲಾದ ತಹವ್ವೂರ್ ಹುಸೇನ್ ರಾಣಾ ಅಮೆರಿಕದಿಂದ ಭಾರತಕ್ಕೆ ಗಡಿಪಾರು ಮಾಡಲಾಗಿದ್ದು, ದೆಹಲಿ ನ್ಯಾಯಾಲಯಕ್ಕೆ ವಿಚಾರಣೆಯ ದಾಖಲೆಗಳು ಬಂದಿವೆ ಎಂದು ನ್ಯಾಯಾಲಯದ ಮೂಲಗಳು ತಿಳಿಸಿವೆ. 2008ರ ಮುಂಬೈ ದಾಳಿಯ ಪ್ರಮುಖ ಆರೋಪಿ ರಾಣಾ ಅರ್ಜಿಯನ್ನು ಅಮೆರಿಕದ ಸುಪ್ರೀಂ ಕೋರ್ಟ್ ತಿರಸ್ಕರಿಸಿದ್ದರಿಂದ ಗಡಿಪಾರುನಿಂದ ತಪ್ಪಿಸಿಕೊಳ್ಳುವ ಕೊನೆಯ ಯತ್ನ ವಿಫಲವಾದ ನಂತರ ಗುರುವಾರ ವಿಶೇಷ ವಿಮಾನದಲ್ಲಿ ಭಾರತಕ್ಕೆ ಕರೆತರಲಾಗುತ್ತಿದೆ.ದಾಖಲೆಗಳನ್ನು ಕಳುಹಿಸಲು ಮುಂಬೈ ನ್ಯಾಯಾಲಯದ ಸಿಬ್ಬಂದಿಗೆ ಜನವರಿ 28ರಂದು ನಿರ್ದೇಶನ ನೀಡಿದ್ದ ಜಿಲ್ಲಾ ನ್ಯಾಯಾಧೀಶ ವಿಮಲ್ ಕುಮಾರ್ ಯಾದವ್ ಅವರು ಇತ್ತೀಚೆಗೆ ದಾಖಲೆಗಳನ್ನು ಸ್ವೀಕರಿಸಿದ್ದಾರೆ. ಮುಂಬೈನಿಂದ ದಾಖಲೆಗಳನ್ನು ಹಿಂಪಡೆಯುವಂತೆ ಕೋರಿ ರಾಷ್ಟ್ರೀಯ ತನಿಖಾ ಸಂಸ್ಥೆ ಸಲ್ಲಿಸಿದ್ದ ಅರ್ಜಿಯ ಮೇರೆಗೆ ನ್ಯಾಯಾಧೀಶರು, ದಾಖಲೆಗಳನ್ನು ಕಳುಹಿಸಲು ಮುಂಬೈ ಕೋರ್ಟ್ ಸಿಬ್ಬಂದಿಗೆ ಸೂಚಿಸಿದ್ದರು. 26/11 ದಾಳಿಗೆ ಸಂಬಂಧಿಸಿದ ಹಲವಾರು ಪ್ರಕರಣಗಳು ಎರಡೂ ನಗರಗಳಲ್ಲಿ ಇರುವುದರಿಂದ ವಿಚಾರಣಾ ನ್ಯಾಯಾಲಯದ ದಾಖಲೆಗಳನ್ನು ಈ ಹಿಂದೆ ಮುಂಬೈಗೆ ಕಳುಹಿಸಲಾಗಿತ್ತು. 64 ವರ್ಷದ ರಾಣಾ, ದಾಳಿಯ ಪ್ರಮುಖ ಸಂಚುಕೋರರಲ್ಲಿ ಒಬ್ಬರಾದ ಡೇವಿಡ್ ಕೋಲ್ಮನ್ ಹೆಡ್ಲಿ ಅಲಿಯಾಸ್ ದಾವೂದ್ ಗಿಲಾನಿಯ ನಿಕಟವರ್ತಿ ಎನ್ನಲಾಗಿದೆ.

### ಮುಂಬೈ ದಾಳಿಯಲ್ಲಿ ಆತನ ಪಾತ್ರವೇನು

ಅಸಲಿಗೆ ಮುಂಬೈ ದಾಳಿಯಲ್ಲಿ ಆತನ ಪಾತ್ರ ತುಂಬಾ ದೊಡ್ಡದಿದೆ. ಮುಂಬೈ ಮೇಲೆ ದಾಳಿ ನಡೆಸಲು ಲಷ್ಕರ್ ಉಗ್ರರು ಸಂಚು ರೂಪಿಸಿದ್ದಾಗ, ಮುಂಬೈನ ಯಾವ ಜಾಗಗಳ ಮೇಲೆ ದಾಳಿ ನಡೆಸಬೇಕು ಎಂದು ಇಲ್ಲಿಗೆ ಬಂದು ಪರಿಶೀಲನೆ ಮಾಡಿ ಆ ಜಾಗಗಳ ಪಟ್ಟಿ ಕೊಟ್ಟವನೇ ಹೆಡ್ಲಿ. 2006ರಿಂದ 2008ರವರೆಗೆ ಸುಮಾರು ಏನಿಲ್ಲವೆಂದರೂ ಐದು ಬಾರಿ ಮುಂಬೈಗೆ ಬಂದು ಹೋಗಿದ್ದ ಆತ. ತನ್ನ ಅಮೆರಿಕ ಪಾಸ್ ಪೋರ್ಟ್ ನಿಂದ ಬಂದಿದ್ದ. ಅಷ್ಟರಲ್ಲಾಗಲೇ ಅಮೆರಿಕ ಈತನ ಹೆಸರು ಬದಲಾಯಿಸಿ ಡೇವಿಡ್ ಕೋಲ್ಮನ್ ಹೆಡ್ಲಿ ಎಂಬ ಹೆಸರಿನಲ್ಲಿ ಪಾಸ್ ಪೋರ್ಟ್ ಹಾಗೂ ಇನ್ನಿತರ ಅಮೆರಿಕದ ದಾಖಲೆಗಳನ್ನು ನೀಡಿತ್ತು.

### ಅವ ನಮ್ಮವನಲ್ಲ

ಮುಂಬೈ ದಾಳಿ ರೂವಾರಿ ತಹವ್ವೂರ್ ಹುಸೇನ್ ರಾಣಾ ಪಾಕಿಸ್ತಾನಿ ಪ್ರಜೆಯಲ್ಲ.. ಆತ ಕೆನಡಾ ಪ್ರಜೆ ಎಂದು ಪಾಕಿಸ್ತಾನ ಸರ್ಕಾರ ಹೇಳಿದೆ. ನೂರಾರು ಮಂದಿಯ ಸಾವಿಗೆ ಕಾರಣವಾದ 26/11 ಮುಂಬೈ ದಾಳಿ ಪ್ರಕರಣದ ಪ್ರಮುಖ ರೂವಾರಿಯಾಗಿರುವ ಆರೋಪಿ ತಹವ್ವೂರ್ ರಾಣಾ ಪಾಕಿಸ್ತಾನ ಮೂಲದವನೇ ಆಗಿದ್ದರೂ ಆತ ಕೆನಡಾ ಪ್ರಜೆ ಎಂದು ಹೇಳುವ ಮೂಲಕ ಪ್ರಕರಣದಿಂದ ಪಾಕಿಸ್ತಾನ ಅಂತರ ಕಾಯ್ದುಕೊಂಡಿದೆ. ಭಾರತದ ಮೇಲೆ ನಡೆದ ಅತ್ಯಂತ ಭಯಾನಕ ಭಯೋತ್ಪಾದಕ ದಾಳಿಗಳಲ್ಲಿ ಒಂದಾದ ಮುಂಬೈ ದಾಳಿ ಪ್ರಕರಣದ ಪ್ರಮುಖ ಆರೋಪಿ ತಹವ್ವೂರ್ ರಾಣಾನನ್ನು ಅಮೆರಿಕ ಭಾರತಕ್ಕೆ ಗಡಿಪಾರು ಮಾಡಿದೆ. ಇದೇ ವಿಚಾರವಾಗಿ ಮೊದಲ ಬಾರಿಗೆ ಪಾಕಿಸ್ತಾನ ವಿದೇಶಾಂಗ ಇಲಾಖೆ ಪ್ರತಿಕ್ರಿಯೆ ನೀಡಿದೆ. ತಹವ್ವೂರ್ ರಾಣಾ ಪಾಕಿಸ್ತಾನದವನಲ್ಲ.. ಆತ ಕೆನಡಾ ಪ್ರಜೆಯಾಗಿದ್ದಾನೆ. ಆತನಿಗೆ ಕೆನಡಾ ಪೌರತ್ವ ಇದೆ. ಕಳೆದ ಎರಡು ದಶಕಗಳಿಂದ ತಹವ್ವೂರ್ ರಾಣಾ ತನ್ನ ಪಾಕಿಸ್ತಾನಿ ದಾಖಲೆಗಳನ್ನು ನವೀಕರಿಸಿಲ್ಲ. ಹೀಗಾಗಿ ಆತ ಪಾಕಿಸ್ತಾನದ ಪ್ರಜೆಯಲ್ಲ.. ಕೆನಡಾದ ಪ್ರಜೆಯಾಗಿದ್ದಾನೆ ಎಂದು ಹೇಳಿದೆ.

### ರವಿ ಪೂಜಾರಿ

ಇವನನ್ನು ಸೆನೆಗಲ್‌ನಿಂದ 2020ರಲ್ಲಿ ಕರೆತರಲಾಯಿತು. ದಕ್ಷಿಣ ಆಫ್ರಿಕಾದಲ್ಲಿ ಈತನನ್ನು ಬಂಧಿಸಲಾಯಿತು. ಈತ ಭೂಗತ ಪಾತಕಿಯಾಗಿದ್ದು ಈತನ ವಿರುದ್ಧ 120ಕ್ಕೂ ಹೆಚ್ಚು ಪ್ರಕರಣಗಳಿದ್ದು ಜತೆಗೆ ಆಂಧ್ರ ಪ್ರದೇಶ, ಮಧ್ಯ ಪ್ರದೇಶ ಸೇರಿ ನಾನಾ ರಾಜ್ಯಗಳಲ್ಲೂ ಈತನ ವಿರುದ್ಧ ಕೊಲೆ, ಕೊಲೆಯತ್ನ, ಸುಲಿಗೆ, ಹಪ್ತಾ ವಸೂಲಿ, ಬೆದರಿಕೆ ಹಾಕಿದ ಪ್ರಕರಣಗಳು ದಾಖಲಾಗಿದೆ. ಬಾಲಿವುಡ್ ನಟರು ಮತ್ತು ರಾಜಕಾರಣಿಗಳಿಗೆ ಬೆದರಿಕೆ ಕರೆಗಳನ್ನು ಮಾಡುತ್ತಿದ್ದನು. ರವಿ ಪೂಜಾರಿಯನ್ನು ಕರೆತಂದಿದ್ದು ಒಂದು ದೊಡ್ಡ ಸಾಧನೆ. ರವಿ ಪೂಜಾರಿ ಉಡುಪಿ ಜಿಲ್ಲೆ ಮಲ್ಪೆ ಸಮೀಪದ ಕಲ್ಮಾಡಿ ಬಪ್ಪುತೋಟದ ನಿವಾಸಿಯಾಗಿ ಜನಿಸಿದ್ದ.

### ಹೆಡ್ಲಿಯನ್ನು ಭಾರತಕ್ಕೇಕೆ ಅಮೆರಿಕ ಹಸ್ತಾಂತರ ಮಾಡುತ್ತಿಲ್ಲ

**ಜಿ.ಕೆ. ಪಿಳ್ಳೆ ಕಳವಳ**

ಮುಂಬೈ ದಾಳಿಯಲ್ಲಿ ಹೆಡ್ಲಿ ರಾಣಾಗಿಂತ ದೊಡ್ಡ ಆರೋಪಿ. ಆದರೆ, ಅಮೆರಿಕ ಡಬಲ್ ಗೇಮ್ ಆಡುತ್ತಿದೆ. ನಿಜವಾದ ಅಪರಾಧಿಯನ್ನು ಬಿಟ್ಟುಕೊಡದೇ ಆತನ ಚಮಚಾನನ್ನು ಭಾರತಕ್ಕೆ ಹಸ್ತಾಂತರಿಸಿದೆ ಎಂದು ಆಗ ಮುಂಬೈ ದಾಳಿ ನಡೆದಾಗ ಕೇಂದ್ರ ಗೃಹ ಸಚಿವಾಲಯದ ಕಾರ್ಯದರ್ಶಿಯಾಗಿದ್ದ ಜಿಕೆ ಪಿಳ್ಳೈ ಅವರು ಈಗ ರಾಣಾ ಭಾರತಕ್ಕೆ ಹಸ್ತಾಂತರ ಆಗುವ ಸಂದರ್ಭದಲ್ಲಿ 'ದ ಹಿಂದೂ' ಪತ್ರಿಕೆಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

ಥೇಟ್ ಅಮೆರಿಕದವನಂತೆ ಇದ್ದಿದ್ದೇ ಪ್ಲಸ್ ಪಾಯಿಂಟ್!: ಡೇವಿಡ್ ಹೆಡ್ಲಿ ಹುಟ್ಟಿದ್ದು ಅಮೆರಿಕದ ವಾಷಿಂಗ್ಟನ್ ಡಿಸಿಯಲ್ಲಿ. ಆತನ ತಂದೆ ಪಾಕಿಸ್ತಾನದವ. ತಾಯಿ ಅಮೆರಿಕನ್. ಈತನ ತಂದೆ ಅಮೆರಿಕದಲ್ಲಿ ಪಾಕಿಸ್ತಾನದ ರಾಜತಾಂತ್ರಿಕ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾಗ ಅಮೆರಿಕದಲ್ಲಿರುವ ಸುಂದರಿಯೊಬ್ಬಳನ್ನು ಮದುವೆಯಾದ. ಆ ದಂಪತಿಗೆ ಜನಿಸಿದ ಮಗುವೇ ಹೆಡ್ಲಿ. ಈತನ ಜನ್ಮನಾಮ ದಾವೂದ್ ಸಯ್ಯದ್ ಗಿಲಾನಿ. ಹುಟ್ಟಿದ್ದು ಬೆಳೆದಿದ್ದು ವಿದ್ಯಾಭ್ಯಾಸ ಎಲ್ಲಾವೂ ಅಮೆರಿಕದಲ್ಲೇ ಆಗಿತ್ತು. ಹಾಗಾಗಿ, ಅಮೆರಿಕನ್ ಆಯಕ್ಸೆಂಟ್ ಇಂಗ್ಲೀಷ್ ಆತನಿಗೆ ಕರಗತವಾಗಿತ್ತು. ಅಮೆರಿಕನ್ ತಾಯಿಯ ಪ್ರಭಾವವೋ ಏನೋ ನೋಡಲು ಕೆಂಪಗಿದ್ದು ಥೇಟ್ ಅಮೆರಿಕನ್ ನಂತೆಯೇ ಕಾಣಿಸುತ್ತಿದ್ದ. ಹಾಗಾಗಿ, ಈತನ ಹೆಸರು ಗೊತ್ತಾದವರು ಮಾತ್ರ ಈತ ಅಮೆರಿಕನ್ ಅಲ್ಲ ಎಂಬುದನ್ನು ತಿಳಿದುಕೊಳ್ಳುತ್ತಿದ್ದರೇ ಹೊರತು, ಬೇರೆ ಯಾರಿಗೂ ಈತ ಯಾರು ಅನ್ನೋದೇ ಗೊತ್ತಾಗುತ್ತಿರಲಿಲ್ಲ.ಅಮೆರಿಕದಲ್ಲಿ ಹುಟ್ಟಿ ಬೆಳೆದಿದ್ದರಿಂದ ಈತನ ಹೆಸರಿನಲ್ಲಿ ಅಮೆರಿಕನ್ ಪಾಸ್ ಪೋರ್ಟ್ ಇತ್ತು. ಮುಂದೆ ವಿದ್ಯಾಭ್ಯಾಸ ಮುಗಿಸಿ ಆತ ಅಮೆರಿಕ ಸೇನೆಯಲ್ಲಿ ಕೆಲಸ ಮಾಡುತ್ತಿದ್ದ. ಆ ಸಂದರ್ಭದಲ್ಲಿ ಆತ ಪಾಕಿಸ್ತಾನ ಮೂಲದ ಲಷ್ಕರ್ – ಎ – ತೊಯ್ಬಾ ಜೊತೆಗೆ ನಂಟು ಗಳಿಸಿದ. ಅದು ಆತನನ್ನು ಪಾಕಿಸ್ತಾನಕ್ಕೆ ಸೆಳೆಯಿತು. ಅಲ್ಲಿ, ಲಷ್ಕರ್ ತೊಯ್ಬಾ ಜೊತೆಗೆ ಉತ್ತಮ ಒಡನಾಟ ಸಾಧಿಸಿದ ಆತ ಅವರಿಗೆ ಅಮೆರಿಕದಿಂದ ಡ್ರಗ್ಸ್ ಕಳ್ಳಸಾಗಣೆ ಮಾಡಿ ಉಗ್ರರಿಗೆ ಸಪ್ಲೈ ಮಾಡುವ ದಂಧೆ ಮಾಡಿಕೊಂಡಿದ್ದ.


# ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದಿಂದ 3 ಸ್ಥಳ ಪರಿಶೀಲನೆ ಪೂರ್ಣ

■ ಎಎಐ ವರದಿ ಬಳಿಕ ಪರಿಣತ ಸಂಸ್ಥೆಗಳಿಂದ ಅಧ್ಯಯನ ■ ಸ್ಥಳವನ್ನು ಅಂತಿಮಗೊಳಿಸಲಿದೆ ಸರ್ಕಾರ ಎಂದ ಸಚಿವ ಎಂಬಿ ಪಾಟೀಲ್

• ಉದಯವಾಹಿನಿ, ಬೆಂಗಳೂರು

ರಾಜಧಾನಿ ಬೆಂಗಳೂರು ಸಮೀಪ ನಿರ್ಮಿಸಲು ಉದ್ದೇಶಿಸಿರುವ ಎರಡನೇ ವಿಮಾನ ನಿಲ್ದಾಣ ಸಂಬಂಧ ಮೂರೂ ಸ್ಥಳಗಳ ಪರಿಶೀಲನೆ ನಡೆಸಿರುವ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದ (ಎಎಐ) ಉನ್ನತ ಮಟ್ಟದ ತಂಡವು ಇನ್ನು ಒಂದು ತಿಂಗಳಲ್ಲಿ ತನ್ನ ಅಭಿಪ್ರಾಯ ತಿಳಿಸುವ ಸಾಧ್ಯತೆ ಇದೆ. ಬಳಿಕ ಇದನ್ನು ವಿಸ್ತೃತ ಅಧ್ಯಯನಕ್ಕೆ ವಿಮಾನ ನಿಲ್ದಾಣಗಳ ಅಭಿವೃದ್ಧಿಪಡಿಸುವಂತಹ ಪರಿಣತ ಕಂಪನಿಗಳ ಮುಂದೆ ಕೊಂಡೊಯ್ಯಲಿದೆ. ಆ ಬಳಿಕ ಸರ್ಕಾರ ಸ್ಥಳವನ್ನು ಅಂತಿಮಗೊಳಿಸಲಿದೆ.

ಈ ಬಳಿಕ ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ ಬಿ ಪಾಟೀಲ್ ಮಾಹಿತಿ ನೀಡಿದ್ದಾರೆ. ಎಎಐ ತಂಡ ಬಂದು ಹೋಗಿರುವುದು ನಿಜ. ವಿಮಾನ ನಿಲ್ದಾಣವನ್ನು ಎಲ್ಲಿ ಮಾಡಿದರೆ ಸೂಕ್ತವೆನ್ನುವುದು ಪ್ರಯಾಣಿಕರ ದಟ್ಟಣೆ, ಕಾರ್ಗೋ ದಟ್ಟಣೆ ಮತ್ತು ಕೈಗಾರಿಕಾ ಅಗತ್ಯ ಮುಂತಾದ ಅಂಶಗಳನ್ನು ಅವಲಂಬಿಸಿದೆ ಎಂದು ಅವರು ತಿಳಿಸಿದ್ದಾರೆ. ಈಗ ದೇವನಹಳ್ಳಿ ಬಳಿ ಬೆಂಗಳೂರು ವಿಮಾನ ನಿಲ್ದಾಣವಿದೆ. 2033 ರವರೆಗೂ ಇಲ್ಲಿಂದ 150 ಕಿ.ಮೀ. ಅಂತರದಲ್ಲಿ ಇನ್ನೊಂದು ವಿಮಾನ ನಿಲ್ದಾಣ ಮಾಡಬಾರದು ಎನ್ನುವ ಷರತ್ತಿದೆ. ನಾವು ಈಗಿನಿಂದಲೇ ಪ್ರಾರಂಭಿಸಿದರೆ, 2030ರ ವೇಳೆಗೆ ಎರಡನೇ ವಿಮಾನ ನಿಲ್ದಾಣ ಅಭಿವೃದ್ಧಿ ಪ್ರಾರಂಭಿಸಬಹುದು. ಇಲ್ಲದೆ ಹೋದರೆ 2040ನೇ ಇಸವಿ ಬಂದರೂ ವಿಮಾನ ನಿಲ್ದಾಣ ಆಗುವುದಿಲ್ಲ ಎಂದು ಅವರು ವಿವರಿಸಿದ್ದಾರೆ.



### ರಾಯರೆಡ್ಡಿ ಮಾತನ್ನು ಪಕ್ಷ ಗಮನಿಸಲಿದೆ

ಕಾಂಗ್ರೆಸ್ಸಿನ ಹಿರಿಯ ನಾಯಕ ಮತ್ತು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಕರ್ನಾಟಕವು ಭ್ರಷ್ಟಾಚಾರದಲ್ಲಿ ನಂಬರ್ ಒನ್ ಆಗಿದೆ ಎಂದು ಹೇಳಿದ್ದಾರೆ. ಭ್ರಷ್ಟಾಚಾರದಲ್ಲಿ ಯಾರಾರು ಭಾಗಿಯಾಗಿದ್ದಾರೆ ಎನ್ನುವುದನ್ನೂ ಅವರು ಹೇಳಬೇಕಿತ್ತು. ಅವರ ಮಾತುಗಳನ್ನು ಪಕ್ಷವು ಗಮನಿಸಿದೆ. ಯಾರೂ ಪಕ್ಷಕ್ಕಿಂತ ದೊಡ್ಡವರಿಲ್ಲ ಎಂದು ಅವರು ಹೇಳಿದ್ದಾರೆ. ಅಹಮದಾಬಾದ್ ಎಐಸಿಸಿ ಅಧಿವೇಶನದಲ್ಲಿ ಪಕ್ಷವು ಬಡವರು, ದಲಿತರು, ಮಹಿಳೆಯರು ಮತ್ತು ಅಲ್ಪಸಂಖ್ಯಾತರನ್ನು ಗಮನದಲ್ಲಿಟ್ಟುಕೊಂಡು ನಿರ್ಣಯಗಳನ್ನು ತೆಗೆದುಕೊಂಡಿದೆ. ಒಬ್ಬರಿಗೆ ಒಂದೇ ಹುದ್ದೆ ಎನ್ನುವ ನಿಯಮಕ್ಕೆ ಪಕ್ಷದಲ್ಲಿ ಕೆಲವು ಅಪವಾದಗಳೂ ಇವೆ. ಅನುಭವ ಮತ್ತು ಹಿರಿತನಗಳ ಮೇಲೆ ಇಂತಹ ವಿನಾಯಿತಿ ಕೊಡಬೇಕಾಗುತ್ತದೆ ಎಂದು ಪಾಟೀಲ್ ಪ್ರತಿಪಾದಿಸಿದ್ದಾರೆ.

**2030ಕ್ಕೆ ನಿಲ್ದಾಣ ಅಭಿವೃದ್ಧಿ ಪ್ರಾರಂಭ**

**ಜಾಗಕೊಟ್ಟ ಮಾತ್ರಕ್ಕೆ ವಿಮಾನ ನಿಲ್ದಾಣ ಆಗಲ್ಲ:** ಹಿರಿಯ ನಾಯಕ ಟಿ ಬಿ ಜಯಚಂದ್ರ ಅವರು ತಮ್ಮ ಕ್ಷೇತ್ರವಾದ ಶಿರಾ ಸಮೀಪ ವಿಮಾನ ನಿಲ್ದಾಣ ಬರಲೆಂದು ಪ್ರಯತ್ನ ಶುರು ಮಾಡಿದ್ದಾರೆ. ಅಲ್ಲಿ ಜಿಲ್ಲಾ ಮಟ್ಟದ ವಿಮಾನ ನಿಲ್ದಾಣ ಮಾಡಬಹುದೇ ವಿನಾ ಅದು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಆಗುವುದಿಲ್ಲ. ಬಿಜೆಪಿಯ ಅರವಿಂದ ಬೆಲ್ಲದ್ ಕೂಡ ಉತ್ತರ ಕರ್ನಾಟಕಕ್ಕೆ ಅನುಕೂಲವಾಗುವ ಜಾಗದಲ್ಲಿ ಹೊಸ ವಿಮಾನ ನಿಲ್ದಾಣ ಬರಲಿ ಎನ್ನುತ್ತಿದ್ದಾರೆ.

ಕೇವಲ ಜಾಗವನ್ನು ಕೊಟ್ಟ ಮಾತ್ರಕ್ಕೆ ಎಲ್ಲಾವೂ ಆಗುವುದಿಲ್ಲ ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ. ವಿಜಯಪುರ ವಿಮಾನ ನಿಲ್ದಾಣ ಉದ್ಘಾಟನೆಗೆ ಸಜ್ಜಾಗಿದೆ. ಸುಪ್ರೀಂ ಕೋರ್ಟಿನಲ್ಲಿ ಪರಿಸರ ಇಲಾಖೆಯ ಅನುಮತಿ ಸಂಬಂಧ ಒಂದು ಪ್ರಕರಣವಿದೆ. ಅದು ಸದ್ಯದಲ್ಲೇ ಇತ್ಯರ್ಥಗೊಳ್ಳುವ ಲಕ್ಷಣಗಳಿವೆ. ಇದಾದರೆ, ಇನ್ನು 6 ತಿಂಗಳಲ್ಲಿ ಉದ್ಘಾಟನೆ ಆಗಲಿದೆ ಎಂದು ಅವರು ತಿಳಿಸಿದ್ದಾರೆ.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.99 ₹/L | ಬಂಗಾರ: ₹9,338/Gram24ct ₹8,560/Gram22ct | ಬೆಳ್ಳಿ: ₹97.00/Gram

# ಬಿಜೆಪಿ-ಜೆಡಿಎಸ್ 'ಹನಿಮೂನ್' ಮುಕ್ತಾಯ: ಸಚಿವ

• **ಉದಯವಾಹಿನಿ, ಚಿಂತಾಮಣಿ**

ಅಧಿಕಾರಕ್ಕಾಗಿ ಅವಕಾಶವಾದಿ ರಾಜಕಾರಣ ಮಾಡಿದ್ದ ಬಿಜೆಪಿ, ಜೆಡಿಎಸ್ ಹನಿಮೂನ್ ಮುಕ್ತಾಯ ಹಂತಕ್ಕೆ ಬಂದಿದೆ. ನಾನೊಂದು ತೀರ-ನೀನೊಂದು ತೀರದಂತೆ ನಡೆದು ಕೊಳ್ಳುತ್ತಿವೆ ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್ ಅಭಿಪ್ರಾಯಪಟ್ಟರು.

ನಗರದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನಿರ್ಮಾಣವಾಗಿರುವ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯದ ಕಟ್ಟಡವನ್ನು ಗುರುವಾರ ಉದ್ಘಾಟಿಸಿ ಮಾತನಾಡಿದರು.

ತತ್ವ-ಸಿದ್ಧಾಂತದಲ್ಲಿ ಜೆಡಿಎಸ್, ಬಿಜೆಪಿ ಉತ್ತರ, ದಕ್ಷಿಣ ಧೃವಗಳಾಗಿವೆ. ಕೇವಲ ಅಧಿಕಾರಕ್ಕಾಗಿ ಮಾಡಿಕೊಂಡಿದ್ದ ಹೊಂದಾಣಿಕೆ ಕೊನೆಯಾಗುತ್ತಿದೆ. ಬಿಜೆಪಿಗೆ ಕುಮಾರಸ್ವಾಮಿ ಅವರನ್ನು ಕಂಡರೆ ಭಯ. ಅವರ ಜತೆ ಹೊಂದಾಣಿಕೆ ಮುಂದುವರಿಸಿದರೆ ಮುಂದೆ ಎಲ್ಲವನ್ನು ಅವರೇ ಕಬಳಿಸುತ್ತಾರೆ ಎಂಬ ಭಯ ಕಾಡುತ್ತಿದೆ. ಜೆಡಿಎಸ್ ಅನ್ನು ದೂರವಿಟ್ಟು ಹೋರಾಟ ಮಾಡುತ್ತಿವೆ. ಬಂದ ದಾರಿಗೆ ಸುಂಕವಿಲ್ಲ ಎಂದು ಜೆಡಿಎಸ್ ಕೂಡ ಪ್ರತ್ಯೇಕವಾಗಿ ಹೋರಾಟ ಹಮಿಕೊಳುತ್ತಿದೆ ಎಂದರು. ನಗರದಲ್ಲಿ ಹಲವು ಅಭಿವೃದ್ಧಿ ಕಾರ್ಯಕ್ರಮ ಪ್ರಗತಿಯಲ್ಲಿವೆ.


ಉದಯವಾಹಿನಿ ಚಿತ್ರ

ಶೀಘ್ರದಲ್ಲೇ ಮತ್ತಷ್ಟು ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಗುವುದು. ಕಸ ಸಂಗ್ರಹಕ್ಕಾಗಿ ಪ್ರತಿ ವಾರ್ಡ್‌ಗೂ ಒಂದೊಂದು ವಾಹನ ಒದಗಿಸಲಾಗುತ್ತಿದೆ. ನಗರೋತ್ಥಾನ ಯೋಜನೆ ಕಾಮಗಾರಿ ಅಂತಿಮ ಹಂತಕ್ಕೆ ಬಂದಿದ್ದು ಶೀಘ್ರದಲ್ಲೇ ಚಾಲನೆ ನೀಡಲಾಗುವುದು. ಶಾಸಕರ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ಅಂಗವಿಕಲರಿಗೆ ದ್ವಿಚಕ್ರ ವಾಹನ ವಿತರಿಸಲಾಗುವುದು ಎಂದರು. ಕೇಂದ್ರ ಸರ್ಕಾರದ ಗ್ಯಾಸ್ ಸಿಲಿಂಡರ್, ಪೆಟ್ರೋಲ್, ಡೀಸೆಲ್, ಟೋಲ್ ಶುಲ್ಕ ಏರಿಕೆಗೆ ಏಕೆ ಜನಾಕ್ರೋಶವಿಲ್ಲ ಎಂದು ಪ್ರಶ್ನಿಸಿದರು. ಜನರ ಮುಂದೆ ವಿಷಯ ಮಂಡಿಸಲಾಗುವುದು ಎಂದರು. ಹಾಲಿನ ಬೆಲೆ ಏರಿಕೆ ಮಾಡಿರುವುದು ಸರ್ಕಾರದ ಸಂಪನ್ಮೂಲ ಸಂಗ್ರಹಕ್ಕೆ ಅಲ್ಲ. ರೈತರ ಅಭಿವೃದ್ಧಿಗಾಗಿ ಬೆಲೆ ಏರಿಕೆ ಪ್ರಸ್ತಾಪವನ್ನು ಕೆ.ಎಂ.ಎಫ್ ಸಲ್ಲಿಸಿತ್ತು. ಬೇರೆ ರಾಜ್ಯಗಳಿಗೆ ಹೋಲಿಸಿದರೆ ರಾಜ್ಯದಲ್ಲಿ ಹಾಲಿನ

> ತಾಲ್ಲೂಕಿನ ಯಗವಕೋಟೆ ಸರ್ಕಾರಿ ಶಾಲೆಯಲ್ಲಿ ಬಾಲಕನೊಬ್ಬನ ಕಣ್ಣಿಗೆ ಹಾನಿಯಾಗಿರುವುದು ವಿಷಾದಕರ. ಘಟನೆ ಬಗ್ಗೆ ಸಮಗ್ರ ತನಿಖೆ ನಡೆಸಿ ಸತ್ಯಾಸತ್ಯತೆ ತಿಳಿದುಕೊಂಡು ಸೋಮವಾರ ವರದಿ ನೀಡುವಂತೆ ಕ್ಷೇತ್ರ ಶಿಕ್ಷಣಾಧಿಕಾರಿ, ವೃತ್ತ ನಿರೀಕ್ಷಕರಿಗೆ ಸೂಚಿಸಲಾಗಿದೆ ಎಂದರು.

ಬೆಲೆ ಕಡಿಮೆ ಇದೆ. ರೈತರಿಗೆ ಅನುಕೂಲವಾಗಬಾರದು ಎಂದು ಜನಾಕ್ರೋಶ ಪ್ರತಿಭಟನೆ ನಡೆಸಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಶಾಲೆ ಶಿಕ್ಷಕಿ ಮೇಲೆ ಎಫ್.ಐ.ಆರ್ ಮಾಡಿರಬಹುದು. ಆದರೆ, ಸಂಬಂಧವೇ ಇಲ್ಲದ ಕ್ಷೇತ್ರ ಶಿಕ್ಷಣಾಧಿಕಾರಿ ಮತ್ತು ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ವಿರುದ್ಧ ಎಫ್.ಐ.ಆರ್ ಹಾಕಿಸಿರುವುದು ಸರಿಯೇ? ಪ್ರಕರಣವನ್ನು ರಾಜಕೀಯಕ್ಕೆ ಬಳಸಿಕೊಂಡು ಅಧಿಕಾರಿಗಳ ನೈತಿಕ ಬಲ ಕುಗ್ಗಿಸುವುದನ್ನು ಸಹಿಸುವುದಿಲ್ಲ ಎಂದರು.

ನಗರಸಭೆ ಅಧ್ಯಕ್ಷ ಆರ್.ಜಗನ್ನಾಥ್, ಹಿಂದುಳಿದ ವರ್ಗಗಳ ಇಲಾಖೆ ಅಧಿಕಾರಿಗಳು, ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಭಾಗವಹಿಸಿದ್ದರು.

# ಕೃಷಿ ಜಮೀನು ಪರಿವರ್ತನೆ ವಿರೋಧಿಸಿ ಪ್ರತಿಭಟನೆ


• **ಉದಯವಾಹಿನಿ, ಪಾವಗಡ**

ತಾಲ್ಲೂಕಿನ ವೆಂಕಟಾಪುರ ಬಳಿ ಹಲವು ವರ್ಷಗಳಿಂದ ವ್ಯವಸಾಯ ಮಾಡುತ್ತಿರುವ ಜಮೀನನ್ನು ನಿವೇಶನಗಳಾಗಿ ಪರಿವರ್ತಿಸುವ ಹುನ್ನಾರ ನಡೆಯುತ್ತಿದೆ ಎಂದು ಆರೋಪಿಸಿ ಗುರುವಾರ ರೈತರು ಸ್ಥಳದಲ್ಲಿ ಪ್ರತಿಭಟನೆ ನಡೆಸಿದರು.

ವೆಂಕಟಾಪುರದ 27 ಎಕರೆ ಸರ್ಕಾರಿ ಜಮೀನಿನಲ್ಲಿ ಏಳು ಮಂದಿ ರೈತರು 30 ವರ್ಷಗಳಿಂದ ಕೃಷಿ ಚಟುವಟಿಕೆ ನಡೆಸುತ್ತಿದ್ದಾರೆ.

ಜಮೀನು ಮಂಜೂರು ಮಾಡುವಂತೆ ಸುಮಾರು 20 ವರ್ಷಗಳ ಹಿಂದೆಯೇ ಅರ್ಜಿಯನ್ನೂ ಹಾಕಿದ್ದಾರೆ. ಆದರೆ ಏಕಾಏಕಿ ವ್ಯವಸಾಯ ಭೂಮಿಯನ್ನು ರೈತರಿಗೆ ಮಂಜೂರು ಮಾಡದೆ ನಿವೇಶನಗಳನ್ನಾಗಿ ಪರಿವರ್ತಿಸಲು ಅಧಿಕಾರಿಗಳು ಮುಂದಾಗಿರುವುದು ಖಂಡನೀಯ ಎಂದು ರಾಜ್ಯ ರೈತ ಸಂಘ, ಹಸಿರು ಸೇನೆ ಜಿಲ್ಲಾ ಘಟಕದ ಅಧ್ಯಕ್ಷ ಪೂಜಾರಪ್ಪ ಆರೋಪಿಸಿದರು.

ರೈತ ಸಂಘದ ಸದಸ್ಯ ಈಶ್ವರ್, ಗ್ರಾಮ ಪಂಚಾಯಿತಿ, ಕಂದಾಯ ಇಲಾಖೆ ಅಧಿಕಾರಿಗಳು ರೈತರು ಉಳುಮೆ ಮಾಡುತ್ತಿರುವ ಜಮೀನನ್ನು


ಉದಯವಾಹಿನಿ ಚಿತ್ರ

ಕಬಳಿಸಲು ಯತ್ನಿಸುತ್ತಿದ್ದಾರೆ. ಏಳು ಮಂದಿ ರೈತರಿಗೆ ಕೂಡಲೇ ಜಮೀನನ್ನು ಮಂಜೂರು ಮಾಡಬೇಕು ಎಂದರು.

ಕಂದಾಯ ಇಲಾಖೆ ಅಧಿಕಾರಿಗಳು ಜಮೀನನ್ನು ಉಳುಮೆ ಮಾಡುತ್ತಿರುವ ರೈತರಿಗೆ ಮಂಜೂರು ಮಾಡಿ ಆದೇಶ ಪತ್ರ ನೀಡಬೇಕು ಎಂದು ಒತ್ತಾಯಿಸಿದರು. ತಾಲ್ಲೂಕು ರೈತ ಸಂಘದ ಅಧ್ಯಕ್ಷ ಬ್ಯಾಡನೂರು ಶಿವು, ರೈತ ಮುಖಂಡ ಈಶ್ವರ್, ನಾಗೇಂದ್ರಪ್ಪ ಮಲ್ಲಿಕಾರ್ಜುನ, ಹನುಮಂತರಾಯಪ್ಪ, ಭಾರತಮ್ಮ, ಸುನಿತಾ ಲಕ್ಷ್ಮಿ, ಅಕ್ಕಲಪ್ಪ, ಕಿಲಾರ್ಲಹಳ್ಳಿ ಈರಣ್ಣ, ತಿಪ್ಪೇನಾಯ್ಕ, ಗೋಪಾಲ್, ಸತ್ಯಪ್ಪ, ಶ್ರೀನಿವಾಸ್ ಉಪಸ್ಥಿತರಿದ್ದರು.

# ಕುಡುಕರ ಅಡ್ಡೆಯಾದ ವಸತಿ ಗೃಹ

## ಪಾಳುಬಿದ್ದ ವಸತಿಗೃಹಗಳನ್ನು ತೆರವುಗೊಳಿಸಲು ನಾಗರಿಕರ ಆಗ್ರಹ

• **ಉದಯವಾಹಿನಿ, ಬಂಗಾರಪೇಟೆ**


ಅಧಿಕಾರಿಗಳ ಉಪಯೋಗಕ್ಕಾಗಿ, ಸಾರ್ವಜನಿಕರ ಅನುಕೂಲಕ್ಕಾಗಿ ಸರ್ಕಾರಿ ಜಾಗಗಳಲ್ಲಿ ವಸತಿ ಗೃಹಗಳು, ಕಚೇರಿಗಳನ್ನು ನಿರ್ಮಿಸಲಾಗುತ್ತದೆ. ಅವುಗಳ ಸರಿಯಾದ ನಿರ್ವಹಣೆ ಇಲ್ಲದಿದ್ದರೆ ಮಾತ್ರ ಅವು ಕುಡುಕರ, ಅನೈತಿಕ ಚಟುವಟಿಕೆಗಳ ಅಡ್ಡಗಳೇ ಸರಿ. ಪಟ್ಟಣದ ಕೋಲಾರ ಮುಖ್ಯ ರಸ್ತೆಯ ಕಾಂಗ್ರೆಸ್ ಭವನದ ಸಮೀಪ ಲೋಕೋಪಯೋಗಿ ಇಲಾಖೆ ಅಧಿಕಾರಿಗಳ ವಸತಿ ಗೃಹಗಳೇ ಇದಕ್ಕೆ ಸಾಕ್ಷಿ.

ಈ ಗೃಹಗಳು ಮೂರು ವರ್ಷಗಳಿಂದಲೂ ಪಾಳುಬಿದ್ದಿದ್ದು, ಭೂತ ಬಂಗಲೆಗಳಂತಾಗಿವೆ.

ಯಾರ ಉಪಯೋಗಕ್ಕೂ, ಉಪಭೋಗಕ್ಕೂ ಇಲ್ಲದೇ ಅಕ್ರಮ ಮತ್ತು ಅನೈತಿಕ ಚಟುವಟಿಕೆಗಳ ತಾಣವಾಗಿ ಮಾರ್ಪಟ್ಟಿವೆ. ಸರ್ಕಾರಿ ಅಧಿಕಾರಿಗಳು ಮತ್ತು ಸಿಬ್ಬಂದಿ ಕೇಂದ್ರ ಸ್ಥಳದಲ್ಲಿ ವಾಸವಿದ್ದರೆ ಸಾರ್ವಜನಿಕರಿಗೆ ಸುಲಭವಾಗಿ ದೊರೆಯುತ್ತಾರೆ.

ಇದರಿಂದ ಜನ ಸಾಮಾನ್ಯರ ಸರ್ಕಾರಿ ಕೆಲಸ-ಕಾರ್ಯಗಳು ಸುಲಲಿತವಾಗಿ ನಡೆಯುತ್ತವೆ ಎಂಬ ಉದ್ದೇಶದಿಂದ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಸರ್ಕಾರ ಇಲ್ಲಿ ವಸತಿ ಗೃಹಗಳನ್ನು ನಿರ್ಮಿಸಿದೆ.

ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾ


ಉದಯವಾಹಿನಿ ಚಿತ್ರ

ಧಿಕಾರಿ, ತಹಶೀಲ್ದಾರ್, ಪೊಲೀಸ್ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್ ಸೇರಿದಂತೆ ವಿವಿಧ ಅಧಿಕಾರಿಗಳಿಗೆ ಪಟ್ಟಣದ ಪ್ರಮುಖ ಭಾಗಗಳಲ್ಲಿ ಸ್ಥಳ ಮೀಸಲಿರಿಸಿ ಹಲವು ವರ್ಷಗಳ ಹಿಂದೆಯೇ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಆದರೆ, ಅವುಗಳ ಸೂಕ್ತ ನಿರ್ವಹಣೆಯಿಲ್ಲದೆ ಹಾಗೂ ಉಪಯೋಗಿಸುವವರೂ ಇಲ್ಲದೇ ಬಂಗಲೆಗಳು ಪಾಳು ಬಿದ್ದು ಹೋಗಿವೆ. ಸುಮಾರು 20-30 ವರ್ಷಗಳಿಂದ ಈ ಕಟ್ಟಡಗಳಲ್ಲಿ ಯಾವ ಅಧಿಕಾರಿಗಳೂ ವಾಸವಾಗಿಲ್ಲ. ಇದರಿಂದ ಈ

### ಕಚೇರಿ ಕಟ್ಟಡಗಳಿಗೆ ಬಳಕೆಯಾಲಿ

> **ಸ್ಥಳದ ಅಭಾವದಿಂದ ಸಿಡಿಪಿಒ ಕಚೇರಿ, ಕಾರ್ಮಿಕ ಇಲಾಖೆ, ಕೃಷಿ ಇಲಾಖೆ, ರೇಷ್ಮೆ ಇಲಾಖೆ, ಹಿಂದುಳಿದ ವರ್ಗಗಳ ಇಲಾಖೆ, ಅಬಕಾರಿ ಕಚೇರಿ ಸೇರಿದಂತೆ ಇನ್ನಿತರ ಸರ್ಕಾರಿ ಕಚೇರಿಗಳನ್ನು ಬಾಡಿಗೆ ಕಟ್ಟಡದಲ್ಲಿ ನಿರ್ವಹಿಸಲಾಗುತ್ತಿದೆ. ಇದರಿಂದ ಪ್ರತಿತಿಂಗಳು ಬಾಡಿಗೆಗಾಗಿ ಲಕ್ಷಾಂತರ ರೂಪಾಯಿ ವಿನಿಯೋಗಿಸಲಾಗುತ್ತಿದೆ. ಈ ಜಾಗವನ್ನು ಉಪಯೋಗಿಸಿಕೊಂಡು ಸರ್ಕಾರಿ ಕಚೇರಿಗಳನ್ನು ನಿರ್ಮಿಸಿದರೆ ಸರ್ಕಾರದ ಬೊಕ್ಕಸಕ್ಕೆ ಉಳಿತಾಯವಾಗುತ್ತದೆ. ಅಲ್ಲದೇ, ಈ ಭಾಗದಲ್ಲಿ ವಿದ್ಯಾರ್ಥಿಗಳಿಗಾಗಿ ಗ್ರಂಥಾಲಯ ನಿರ್ಮಿಸಿದರೂ ಅನುಕೂಲವಾಗುತ್ತದೆ. ಸಂಬಂಧಿಸಿದ ಅಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಳ್ಳಬೇಕು.**
>
> **-ಕಪಾಲಿ ಶಂಕರ್, ಪುರಸಭೆ ಸದಸ್ಯ**

ಕಟ್ಟಡಗಳು ಶಿಥಿಲಾವಸ್ಥೆ ತಲುಪಿದ್ದು, ಕುಡುಕರಿಗೆ, ಇಸ್ಪೀಟು ಆಡುವವರಿಗೆ ಉಪಯೋಗವಾಗುತ್ತಿವೆ.

ಕಾಂಗ್ರೆಸ್ ಭವನಕ್ಕೆ ಹೊಂದಿಕೊಂಡಿರುವ ಈ ವಸತಿಗೃಹ ಕಟ್ಟಡಗಳು ಪಾಳು ಬಿದ್ದಿದ್ದು, ಕೆಲವಕ್ಕೆ ಬಾಗಿಲುಗಳಿಲ್ಲ, ಕೆಲವಕ್ಕೆ ಕಿಟಕಿಗಳಿಲ್ಲ. ಸುತ್ತಮುತ್ತಲ ಕಚೇರಿಗಳಿಗೆ ವಿವಿಧ ಕೆಲಸ ಕಾರ್ಯಗಳಿಗಾಗಿ ಬರುವ ಸಾರ್ವಜನಿಕರು ಇವುಗಳನ್ನು ಶೌಚಾಲಯಕ್ಕೆ ಮತ್ತು ಕಸ ಎಸೆಯುವುದಕ್ಕೆ ಕೂಡ ಬಳಸಿಕೊಳ್ಳುತ್ತಿದ್ದಾರೆ.

ಸರ್ಕಾರ ಸಾಕಷ್ಟು ಹಣ ಖರ್ಚು ಮಾಡಿ ನಿರ್ಮಿಸಿರುವ ವಸತಿ ಗೃಹಗಳು ಅಧಿಕಾರಿಗಳ ಉಪ

> **ವಸತಿಗೃಹಗಳು ಸಂಪೂರ್ಣವಾಗಿ ಶಿಥಿಲಗೊಂಡಿರುವ ಕಾರಣ ವಾಸ ಮಾಡಲು ಯೋಗ್ಯವಾಗಿಲ್ಲ. ಇವುಗಳನ್ನು ನೆಲಸಮ ಮಾಡಲು ಪ್ರಸ್ತಾವನೆ ಸಲ್ಲಿಸಿದ್ದು, ಅನುಮತಿ ನೀಡಿದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು**
>
> **-ರವಿ ಕುಮಾರ್, ಲೋಕೋಪಯೋಗಿ ಇಲಾಖೆ ಇಂಜಿನಿಯರ್**

ಯೋಗಕ್ಕೆ ಬರಬೇಕು. ಆಗ ಸಾರ್ವಜನಿಕರಿಗೂ ಅದರಿಂದ ಅನುಕೂಲ.

ಸಂಬಂಧಪಟ್ಟ ಅಧಿಕಾರಿಗಳ ಈ ವಸತಿ ಗೃಹಗಳನ್ನು ಪರಿಶೀಲಿಸಿ, ಅಗತ್ಯ ದುರಸ್ಥಿ ಕಾರ್ಯಗಳನ್ನು ಕೈಕೊಂಡು ಅಧಿಕಾರಿಗಳ ವಾಸಕ್ಕೆ ಯೋಗ್ಯಗೊಳಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸುತ್ತಿದ್ದಾರೆ.

ಅಡಿಅಡಿಗೂ ಚಿನ್ನದ ಬೆಲೆಯಿರುವ ಈ ಸ್ಥಳವನ್ನು ಪಾಳುಗೆಡವಿರುವುದು ಸರ್ಕಾರಕ್ಕೂ ನಷ್ಟ. ಹಾಗಾಗಿ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳನ್ನು ದುರಸ್ಥಿಗೊಳಿಸಿ ವಾಸಕ್ಕೆ ಮುಕ್ತಗೊಳಿಸಬೇಕು ಇಲ್ಲವೇ ತೆರವುಗೊಳಿಸಿ ಸಾರ್ವಜನಿಕರಿಗೆ ಉಪಯೋಗವಾಗುವ ಹಾಗೆ ಮಾಡಬೇಕು ಎಂಬುದು ಸ್ಥಳೀಯರ ಒತ್ತಾಯವಾಗಿದೆ.

# ರೈಲ್ವೆ ಮೇಲ್ಸೆತುವೆಗೆ ಭೂಮಿಪೂಜೆ

• **ಉದಯವಾಹಿನಿ, ತಿಪಟೂರು**

ಶಾರದ ನಗರದ ರೈಲ್ವೆ ಮೇಲೆತುವೆ 45.5 ಕೋಟಿ ಕಾಮಗಾರಿಗೆ ಕೇಂದ್ರ ಜಲಶಕ್ತಿ ಹಾಗೂ ರೈಲ್ವೆ ಖಾತೆಗಳ ರಾಜ್ಯ ಸಚಿವ ವಿ.ಸೋಮಣ್ಣ ಭೂಮಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ನನೆಗುದಿಗೆ ಬಿದ್ದಿರುವ ರೈಲ್ವೆ ಯೋಜನೆಗಳನ್ನು ಪೂರ್ಣಗೊಳಿಸಲು ಕೇಂದ್ರ ಸರ್ಕಾರ 2 ಸಾವಿರ ಕೋಟಿ ಅನುದಾನ ನೀಡಿದೆ. ಎರಡು ವರ್ಷದಲ್ಲಿ 90 ಕೋಟಿ ವೆಚ್ಚದಲ್ಲಿ ತುಮಕೂರು ರೈಲ್ವೆ ನಿಲ್ದಾಣ ಅಭಿವೃದ್ಧಿಪಡಿಸಿ ಶಿವಕುಮಾರ ಸ್ವಾಮೀಜಿ ಹೆಸರು ನಾಮಕರಣ ಮಾಡಲಾಗುವುದು ಎಂದರು. ಶೀಘ್ರ ಹೊನ್ನವಳ್ಳಿ ರಸ್ತೆ ಮೇಲ್ವೇತುವೆ, ಹಿಂಡಿಸ್ಕೆರೆ ರೈಲ್ವೆ ಕ್ರಾಸಿಂಗ್ ಮೇಲ್ಸೇತುವೆ ಕಾಮಗಾರಿ ಕೈಗೆತ್ತಿಕೊಂಡು ಒಂದೂವರೆ ವರ್ಷದಲ್ಲಿ ಜನರ ಬಳಕೆಗೆ ನೀಡಲಾಗುವುದು. ತಿಪಟೂರಿಗೆ ಅಗತ್ಯ ಕೈಗಾರಿಕೆಗಳ ಸ್ಥಾಪನೆಗೆ ಕೇಂದ್ರ ಕೈಗಾರಿಕ ಸಚಿವ ಎಚ್.ಡಿ ಕುಮಾರಸ್ವಾಮಿ ಬಳಿ ಪ್ರಸ್ತಾವನೆ ಸಲ್ಲಿಸಿ ಕೈಗಾರಿಕೆಗೆಗಳ ಸ್ಥಾಪನೆಗೆ ಕ್ರಮಕೈಗೊಳ್ಳಲಾಗುವುದು ಎಂದು ಹೇಳಿದರು.

ತಿಪಟೂರು ದುದ್ದ ರೈಲ್ವೆ ಮಾರ್ಗಕ್ಕೆ ಸರ್ವೆ ಮಾಡಲು


ಉದಯವಾಹಿನಿ ಚಿತ್ರ

ಅಧಿಕಾರಿಗಳಿಗೆ ಸೂಚಿಸಿದ್ದೇವೆ. ಬೆಂಗಳೂರು- ತುಮಕೂರು ನೆಲಮಂಗಲ ರಸ್ತೆಯಲ್ಲಿ ಒಂದು ವರ್ಷದಲ್ಲಿ ಸುಮಾರು 290 ಮಂದಿ ಅಪಘಾತದಲ್ಲಿ ಮೃತಪಟ್ಟಿದ್ದಾರೆ.

ಇಲ್ಲಿ ಆರು ಪಥದ ರಸ್ತೆ ಮಂಜೂರು ಮಾಡಲಾಗಿದೆ. ಹಾಸನ- ತಿಪಟೂರು-ಹಿರಿಯೂರು ಮಾರ್ಗದ ಗ್ರೀನ್ ಕಾರಿಡಾರ್ ಹೆದ್ದಾರಿ ಯೋಜನೆ ಮಂಜೂರಾಗಿದ್ದು, ಶೀಘ್ರ ಟೆಂಡರ್ ಕರೆಯಲಾಗುವುದು ಎಂದರು.

**ಕ್ಷಮೆಯಾಚನೆ:** 'ಶಾಸಕ ಕೆ.ಷಡಕ್ಷರಿ ಅವರಿಗೆ ಕಾರ್ಯಕ್ರಮದ ಬಗ್ಗೆ ತಡವಾಗಿ ಆಹ್ವಾನ ತಲುಪಿರುವ ಬಗ್ಗೆ ಮಾಹಿತಿಯಿದ್ದು ಅವರ ಕ್ಷಮೆ ಕೋರುತ್ತೇನೆ. ನಾನು ಷಡಕ್ಷರಿ ಸ್ನೇಹಿತರು ರಾಜಕೀಯವೇ ಬೇರೆ ಅಭಿವೃದ್ಧಿ ವಿಚಾರದಲ್ಲಿ ನಾವೆಲ್ಲ ಒಂದೇ' ಎಂದರು.

# 25 ಕೋಟಿಯಲ್ಲಿ ರಸ್ತೆ ಕಾಮಗಾರಿ: ಶಾಸಕ ಸಮೃದ್ಧಿ ಮಂಜುನಾಥ್

• **ಉದಯವಾಹಿನಿ, ಮುಳಬಾಗಿಲು**

ತಾಲ್ಲೂಕಿನಲ್ಲಿ ಹದಗೆಟ್ಟಿರುವ ರಸ್ತೆಗಳ ದುರಸ್ತಿ ಕಾಮಗಾರಿಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. 25 ಕೋಟಿ ಅನುದಾನದಲ್ಲಿ 24 ಕಿಲೋಮೀಟರ್ ರಸ್ತೆ ಡಾಂಬರೀಕರಣ ಮಾಡಲಾಗುತ್ತಿದೆ ಎಂದು ಶಾಸಕ ಸಮೃದ್ಧಿ ಮಂಜುನಾಥ್ ತಿಳಿಸಿದರು.

ತಾಲ್ಲೂಕಿನ ಕಾಶೀಪುರ ಗೇಟ್‌ನಿಂದ ರೆಡ್ಡಿಹಳ್ಳಿವರೆಗಿನ 3 ಕಿ.ಮೀ ರಸ್ತೆ ಡಾಂಬರೀಕರಣಕ್ಕೆ ಗುರುವಾರ ಚಾಲನೆ ನೀಡಿ ಮಾತನಾಡಿದರು. ಈಗಾಗಲೇ ಕೆ.ಬೈಯಪಲ್ಲಿ ರಸ್ತೆ, ತಾಯಲೂರು, ಪುಂಗನೂರು, ಶ್ರೀನಿವಾಸಪುರ ರಸ್ತೆಗಳ ಡಾಂಬರೀಕರಣ ಮುಗಿಸಲಾಗಿದೆ. ಈಗ ಕೆಜಿಎಫ್ ರಸ್ತೆ ಡಾಂಬರೀಕರಣ ಮಾಡಲಾಗುತ್ತಿದ್ದು, ಗುಣಮಟ್ಟದ ಕಾಮಗಾರಿ ನಡೆಸಲು ಗುತ್ತಿಗೆದಾರರಿಗೆ ಸೂಚಿಸಲಾಗಿದೆ ಎಂದು ಹೇಳಿದರು.

**ಕಾರ್ಯಕರ್ತರಿಗೆ ಹೆಚ್ಚಿನ ಮನ್ನಣೆ:** ಮುಂದಿನ

**ಕಾರ್ಯಕರ್ತರಿಗೆ ಹೆಚ್ಚಿನ ಮನ್ನಣೆ**


ಉದಯವಾಹಿನಿ ಚಿತ್ರ

ತಿಂಗಳು ಡಿಸಿಸಿ ಬ್ಯಾಂಕ್, ಕೋಮಲ್ ಚುನಾ ವಣೆಗಳು ಬರುತ್ತಿವೆ.

ಡಿಸಿಸಿ ಬ್ಯಾಂಕ್ ನಿರ್ದೇಶಕ ಸ್ಥಾನಕ್ಕೆ ಕಳೆದ ಬಾರಿ ನಲ್ಲೂರ ರಘುಪತಿ ರೆಡ್ಡಿ ಸ್ಪರ್ಧಿಸಿ ಸೋತಿದ್ದರು. ಆದ್ದರಿಂದ ಈ ಬಾರಿ ಅವರಿಗೆ ಟಿಕೆಟ್ ನೀಡಲಾಗುತ್ತದೆ.

ಉಳಿದಂತೆ ಕೋಮಲ್‌ನಲ್ಲಿ ಪೂರ್ವ, ಪಶ್ಚಿಮ ವಿಭಾಗಗಳಲ್ಲಿ ಪೂರ್ವ ಕ್ಷೇತ್ರಕ್ಕೆ ಕಾಡೇನಹಳ್ಳಿ ನಾಗರಾಜ್, ಚಾಮರೆಡ್ಡಿಹಳ್ಳಿ ಡಾ. ಪ್ರಕಾಶ್, ಕಲ್ಲುಪಲ್ಲಿ ಪ್ರಕಾಶ್, ಡೆಕ್ಕನ್ ಶ್ರೀನಿವಾಸ್,

> **ಕೆಲವು ಯುವಕರು ಫೇಸ್ಬುಕ್, ವಾಟ್ಸಾಪ್‌ಗಳಲ್ಲಿ ತಾಲ್ಲೂಕಿನ ಹದಗೆಟ್ಟ ರಸ್ತೆಗಳ ಬಗ್ಗೆ ಕಮೆಂಟ್ ಮಾಡಿದ್ದರು. ಅದನ್ನೂ ಪರಿಗಣಿಸಿ, ರಸ್ತೆಗಳ ದುಸ್ಥಿತಿ ಬಗ್ಗೆ ಸರ್ಕಾರದ ಗಮನಕ್ಕೆ ತಂದು ವಿಶೇಷ ಅನುದಾನದಲ್ಲಿ ರಸ್ತೆಗಳ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗಿದೆ ಎಂದರು.**

ಪಶ್ಚಿಮ ಕ್ಷೇತ್ರದಲ್ಲಿ ಬಿ.ವಿ.ಸಾಮೇಗೌಡ, ಬಿಎಂಸಿ ವೆಂಕಟರಾಮೇಗೌಡ, ಗೊಲ್ಲಹಳ್ಳಿ ಜಗದೀಶ್ ಆಕಾಂಕ್ಷಿಗಳಾಗಿದ್ದಾರೆ.

ಆಗಸ್ಟ್ ತಿಂಗಳಲ್ಲಿ ಜಿ.ಪಂ ಮತ್ತು ತಾ.ಪಂ ಚುನಾವಣೆ ಬರಲಿದ್ದು ಪಕ್ಷದ ಕಾರ್ಯಕರ್ತರಿಗೆ ಹೆಚ್ಚಿನ ಮನ್ನಣೆ ನೀಡಲಾಗುತ್ತದೆ ಎಂದು ಹೇಳಿದರು. ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಕಾಡೇನಹಳ್ಳಿ ನಾಗರಾಜ್, ಸಾಮೇಗೌಡ ಮತ್ತಿತರರು ಇದ್ದರು.

# ತಾಂತ್ರಿಕ ಶಿಕ್ಷಣದಲ್ಲೂ ರಾಜ್ಯ ಮುಂದು: ಜಿ.ಪರಮೇಶ್ವರ

• **ಉದಯವಾಹಿನಿ, ತುಮಕೂರು**

ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತ ಮುನ್ನಡೆದಿದ್ದು, ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ ಅಭಿಪ್ರಾಯಪಟ್ಟರು.

ನಗರದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಜಿಪಿಟಿ ಹಳೆಯ ವಿದ್ಯಾರ್ಥಿಗಳ ಸಂಘ ನೂತನವಾಗಿ ನಿರ್ಮಿಸಿರುವ 'ಕಲ್ಪವೃಕ್ಷ' ಸಭಾಂಗಣವನ್ನು ಗುರುವಾರ ಉದ್ಘಾಟಿಸಿ ಮಾತನಾಡಿದರು. ದೇಶದಲ್ಲಿ ತಾಂತ್ರಿಕ ಪದವಿ ನೀಡುವಲ್ಲಿ ಕರ್ನಾಟಕ ನಾಲ್ಕನೇ ಸ್ಥಾನದಲ್ಲಿದೆ. ಗುಣಮಟ್ಟದ ತಾಂತ್ರಿಕ ಶಿಕ್ಷಣ ನೀಡುವಲ್ಲೂ ರಾಜ್ಯ ಮುಂದಿದ್ದು, ನಾಸಾದಲ್ಲಿ ಶೇ 20ರಷ್ಟು ಭಾರತದ ವಿಜ್ಞಾನಿಗಳಿದ್ದಾರೆ. ಹಾಗಾಗಿ ಜಗತ್ತಿನ ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತವನ್ನು ಗುರುತಿಸಲಾಗುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜವಾಹರ್‌ಲಾಲ್ ನೆಹರೂ ಉದ್ಘಾಟಿಸಿರುವ



ಉದಯವಾಹಿನಿ ಚಿತ್ರ

ತುಮಕೂರಿನ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಸಾವಿರಾರು ಯುವಕರಿಗೆ ಭವಿಷ್ಯ ಕಲ್ಪಿಸಿದೆ ಎಂದರು. ರಾಜ್ಯದ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ 1.50 ಲಕ್ಷ ವಿದ್ಯಾರ್ಥಿಗಳ ಪ್ರವೇಶಕ್ಕೆ ಅವಕಾಶವಿದ್ದು, 60 ಸಾವಿರ ಮಂದಿ ದಾಖಲಾಗುತ್ತಿದ್ದಾರೆ. ತಕ್ಷಣಕ್ಕೆ ಕೆಲಸ ಸಿಗುವ ಕೋರ್ಸ್ ಆಗಿರುವುದರಿಂದ ಆಸಕ್ತಿ ತೋರಬೇಕು ಎಂದು ಹೇಳಿದರು.

ಸ್ವಾಮಿ ವೀರೇಶಾನಂದ, ತಾಂತ್ರಿಕ ವಿದ್ಯೆ ಕೇವಲ ಉದ್ಯೋಗಕ್ಕಾಗಿ ಮಾತ್ರವಲ್ಲ. ಹಲವಾರು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಮಾರ್ಗವೂ ಆಗಬೇಕು ಎಂದರು.

> **ವಿದ್ಯೆ ಬದುಕಿಗೆ ಬೆಳಕು ತೋರುವ ಶಕ್ತಿ. ಹಳೆಯ ವಿದ್ಯಾರ್ಥಿಗಳು ತಾವು ಕಲಿತ ಶಿಕ್ಷಣ ಸಂಸ್ಥೆಯ ಬಗ್ಗೆ ತೋರಿದ ಬದ್ಧತೆ ನಿಜಕ್ಕೂ ಪ್ರೇರಣಾದಾಯಕ. ಶ್ರಮ, ನಿಷ್ಠೆ, ಗುರು ಭಕ್ತಿಯಿಂದ ಜೀವನದಲ್ಲಿ ಏನನ್ನಾದರೂ ಸಾಧಿಸಬಹುದು**
>
> **-ನಿರ್ಮಲಾನಂದನಾಥ ಸ್ವಾಮೀಜಿ, ಆದಿ ಚುಂಚನಗಿರಿ ಮಠದ ಪೀಠಾಧ್ಯಕ್ಷ**

ಶಾಸಕ ಜಿ.ಬಿ.ಜ್ಯೋತಿಗಣೇಶ್, ಕಾಲೇಜು ಪ್ರಾಂಶುಪಾಲ ಅನಿಲ್ ಕುಮಾರ್, ಜಿಪಿಟಿ ಹಳೆಯ ವಿದ್ಯಾರ್ಥಿಗಳ ಸಂಘದ ಸಂಸ್ಥಾಪಕ ಸಿ.ಎಸ್.ಪ್ರಕಾಶ್, ಅಧ್ಯಕ್ಷ ಎನ್.ಗೋಪಾಲ ಕೃಷ್ಣ, ಕಾರ್ಯದರ್ಶಿ ಸಿ.ಎಸ್.ರಮೇಶ್, ಡಿಸಾ ಇಂಡಿಯಾ ಉಪಾಧ್ಯಕ್ಷ ಸ್ಟೇಪಿಸ್ ಉದಯ್ ಕುಮಾರ್ ಉಪಸ್ಥಿತರಿದ್ದರು.

# ಕೃಷಿ ಸಾಹಿತ್ಯ ಸಮ್ಮೇಳನ ಆಯೋಜನೆಗೆ ಸಿದ್ಧತೆ

• **ಉದಯವಾಹಿನಿ, ತಿಪಟೂರು**

ತಾಲ್ಲೂಕಿನ ಕನ್ನಡ ಸಾಹಿತ್ಯ ಪರಿಷತ್ ಕೃಷಿ ಸಾಹಿತ್ಯ ಸಮ್ಮೇಳನದ ಆಯೋಜಿಸುವ ಬಗ್ಗೆ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆ ನಡೆಸಿತು.

ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಅಧ್ಯಕ್ಷ ಬಸವರಾಜಪ್ಪ ಮಾತನಾಡಿ, ಯುವ ಪೀಳಿಗೆ ಕೃಷಿಯಿಂದ ವಿಮುಖವಾಗುತ್ತಿರುವ ಅಂಶ ಹಾಗೂ ರೈತರ ಸಮಸ್ಯೆಗಳಿಗೆ ಚಿಂತಿಸುವ, ಪರಿಹಾರ ಹುಡುಕುವ ನಿಟ್ಟಿನೊಂದಿಗೆ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ ಎಂದರು.

ಸಾಹಿತಿ ಕೃಷ್ಣಮೂರ್ತಿ ಬಿಳಿಗೆರೆ ಮಾತನಾಡಿ, ರೈತರಿಗಾಗಿ ಶಿಬಿರ, ಕಾರ್ಯಗಾರಗಳನ್ನು ಆಯೋಜಿಸಿ, ಸಂಪನ್ಮೂಲ ವ್ಯಕ್ತಿಗಳಿಂದ ರೈತರಿಗೆ ಪಹಣಿ, ಚಕ್ಕಬಂಧಿ, ಸರ್ವೆ ಮತ್ತಿತ್ತರ ವಿಷಯಗಳ ಬಗ್ಗೆ ಸಮಗ್ರ ಮಾಹಿತಿ ಹಂಚಿಕೆ ಕಾರ್ಯಕ್ರಮ ರೂಪಿಸುವ ಆಯಾಮವಾಗಿದೆ ಎಂದರು. ಸಾಹಿತಿ ಕೃಷ್ಣಮೂರ್ತಿ ಬಿಳಿಗೆರೆ ಮಾತನಾಡಿ, ರೈತರಿಗಾಗಿ ಶಿಬಿರ, ಕಾರ್ಯಗಾರಗಳನ್ನು ಆಯೋಜಿಸಿ, ಸಂಪನ್ಮೂಲ ವ್ಯಕ್ತಿಗಳಿಂದ ರೈತರಿಗೆ ಪಹಣಿ, ಚಕ್ಕಬಂಧಿ,


ಉದಯವಾಹಿನಿ ಚಿತ್ರ

ಸರ್ವೆ ಮತ್ತಿತ್ತರ ವಿಷಯಗಳ ಬಗ್ಗೆ ಸಮಗ್ರ ಮಾಹಿತಿ ಹಂಚಿಕೆ ಕಾರ್ಯಕ್ರಮ ರೂಪಿಸುವ ಆಯಾಮವಾಗಿದೆ ಎಂದರು. ರೈತ ಸಂಘದ ದೇವರಾಜ್ ತೀಮ್ಲಾಲಾಪುರ ಮಾತನಾಡಿ, ರೈತ ಕುಟುಂಬಗಳಿಗೆ ಹೆಣ್ಣು ಕೊಡುವವರ ಸಂಖ್ಯೆ ಕ್ಷೀಣಿಸುತ್ತಿದೆ. ಕೃಷಿಕ ಕುಟುಂಬಗಳ ಮಕ್ಕಳ ಮದುವೆ ಜಾಗತಿಕ ಸಮಸ್ಯೆಗಳಲ್ಲಿ ಸಿಲುಕಿದೆ. ಇದರ ಬಗ್ಗೆ ವಿಶೇಷ ಗಮನಹರಿಸಬೇಕಿದೆ ಎಂದರು.

ಸಭೆಯಲ್ಲಿ ತೆಂಗು, ಕೊಬ್ಬರಿಗೆ ಪ್ರಾಧಾನ್ಯ, ತೆಂಗಿನ ಜೊತೆ ಬೇರೆ ಬೇರೆ ಬೆಳೆಗಳನ್ನು ಬೆಳೆಯುವುದು, ರೈತರಿಗೆ ಸರ್ಕಾರದ ಸವಲತ್ತು, ಸಹಾಯಧನಗಳ ಬಗ್ಗೆ ಮಾಹಿತಿ ಹಂಚಿಕೆ, ಬೆಳೆಗಳಿಗೆ ತಗಲುವ ರೋಗ, ಮಾರುಕಟ್ಟೆ ವ್ಯವಸ್ಥೆ, ರಾಶಿ ಪೂಜೆ, ಹೊನ್ನಾರು ಮುಂತಾದವುಗಳ ಬಗ್ಗೆ ಚರ್ಚಿಸಲಾಯಿತು.

## ಮಂಡ್ಯ ಜಿಲ್ಲೆಯಲ್ಲಿ 15 ಪರೀಕ್ಷಾ ಕೇಂದ್ರಗಳು: 144 ಸೆಕ್ಷನ್ ಜಾರಿ

# ಸಿಇಟಿ: 6,401 ವಿದ್ಯಾರ್ಥಿಗಳು ನೋಂದಣಿ

• **ಉದಯವಾಹಿನಿ, ಮಂಡ್ಯ**

ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಜಿಲ್ಲೆಯಲ್ಲಿ ಏಪ್ರಿಲ್ 16 ಮತ್ತು 17ರಂದು ನಡೆಯುವ ಸಿ.ಇ.ಟಿ ಪರೀಕ್ಷೆಯಲ್ಲಿ ಯಾವುದೇ ಲೋಪದೋಷ ಉಂಟಾಗದಂತೆ ಸೂಕ್ತ ಕ್ರಮ ಕೈಗೊಳ್ಳಿ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಸಿ. ಶಿವಾನಂದಮೂರ್ತಿ ಹೇಳಿದರು. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ನಡೆದ ಸಿ.ಇ.ಟಿ - 2025ರ ಪೂರ್ವ ತಯಾರಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಸಿ.ಇ.ಟಿ.ಯಲ್ಲಿ 6,401 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಒಟ್ಟು 15 ಪರೀಕ್ಷಾ ಕೇಂದ್ರಗಳಿದ್ದು, ಮಂಡ್ಯ ತಾಲ್ಲೂಕಿನಲ್ಲಿ 12, ಕೆ.ಆರ್. ಪೇಟೆ ತಾಲ್ಲೂಕಿನಲ್ಲಿ 3 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆ ಪತ್ರಿಕೆಯನ್ನು ಕೊಂಡೊಯ್ಯಲು ತಹಶೀಲ್ದಾರ್ ಬಿ.ಇ.ಒ, ಪ್ರಾಂಶುಪಾಲರನ್ನು ಒಳಗೊಂಡ ತ್ರಿ ಸದಸ್ಯ ಸಮಿತಿ ರಚಿಸಲಾಗಿದೆ ಎಂದು ಹೇಳಿದರು. ಜಿಲ್ಲಾ ಖಜಾನೆಯಿಂದ ಪ್ರಶ್ನೆ ಪತ್ರಿಕೆಗಳನ್ನು ಸುರಕ್ಷಿತವಾಗಿ ಪರೀಕ್ಷಾ ಕೇಂದ್ರಗಳಿಗೆ ತಲುಪಿಸಲು ಮಾರ್ಗಾಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಪರೀಕ್ಷಾ ಕೇಂದ್ರದ ಸುತ್ತ 144 ಸೆಕ್ಷನ್


ಉದಯವಾಹಿನಿ ಚಿತ್ರ

ಜಾರಿಗೊಳಿಸಿ ನಿಷೇಧಾಜ್ಞೆ ಹೊರಡಿಸಲಾಗುವುದು. ಯಾವುದೇ ಖಾಸಗಿ ವ್ಯಕ್ತಿಗಳು 200 ಮೀಟರ್ ವ್ಯಾಪ್ತಿಯಲ್ಲಿ ಸಂಚರಿಸುವಂತಿಲ್ಲ, ಸುತ್ತಮುತ್ತ ಯಾವುದೇ ಜೆರಾಕ್ಸ್ ಅಂಗಡಿಗಳು ತೆರೆಯುವಂತಿಲ್ಲ ಎಂದು ಸೂಚನೆ ನೀಡಿದರು. ವಿದ್ಯಾರ್ಥಿಗಳಿಗೆ ಕುಡಿಯುವ ನೀರು, ಸೂಕ್ತ ಅಸನಗಳು, ಕೊಠಡಿಯಲ್ಲಿ ಗಡಿಯಾರ ಸೇರಿದಂತೆ ಮೂಲಸೌಕರ್ಯಗಳನ್ನು ಕಲ್ಪಿಸಬೇಕು. ಪರೀಕ್ಷಾ ಕೊಠಡಿಯ ಸುತ್ತಮುತ್ತಲಿನ ಪ್ರದೇಶವನ್ನು ಸ್ವಚ್ಛಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. 24 ವಿದ್ಯಾರ್ಥಿಗಳಿಗೆ ಒಬ್ಬರು ಮೇಲ್ವಿಚಾರಕ ರನ್ನು ನೇಮಿಸಲಾಗಿದೆ. ಪ್ರತಿ ಪರೀಕ್ಷಾ ಕೇಂದ್ರಗಳಿಗೂ ಆರೋಗ್ಯ ಸಿಬ್ಬಂದಿ ನಿಯೋಜಿಸಲಾಗುವುದು. ವಿದ್ಯುತ್ ವ್ಯತ್ಯಯ ಉಂಟಾಗದಂತೆ ಕ್ರಮವಹಿಸಲಾಗುವುದು. ಪರೀಕ್ಷಾ ಕೇಂದ್ರಗಳಲ್ಲಿ ಯಾವುದೇ ಲೋಪಗಳಾಗದಂತೆ ಭದ್ರತೆ ಕಲ್ಪಿಸಲಾಗುವುದು ಎಂದು ತಿಳಿಸಿದರು.

### 15 ಕೇಂದ್ರಗಳಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಕೆ'


**ಸಿ.ಇ.ಟಿ ನಡೆಯುವ 15 ಕೇಂದ್ರಗಳಲ್ಲೂ ಸಿ.ಸಿ.ಟಿ.ವಿ ಕ್ಯಾಮೆರಾ ಕಡ್ಡಾಯ. ಎಲ್ಲಾ ಕೊಠಡಿಯ ವಿಡಿಯೋಗಳು ಜಿಲ್ಲಾಧಿಕಾರಿ ಕಚೇರಿಯಲ್ಲಿ ಪ್ರದರ್ಶನಗೊಳ್ಳುತ್ತಿರುತ್ತವೆ. ಆದ್ದರಿಂದ ಕೊಠಡಿ ಮೇಲ್ವಿಚಾರಕರು ಜಾಗೃತೆಯಿಂದ ಕಾರ್ಯನಿರ್ವಹಿಸಿ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ ಎಚ್ಚರಿಕೆ ನೀಡಿದರು. ಪರೀಕ್ಷಾರ್ಥಿಗಳು ರಿಸ್ಟ್ ವಾಚ್ ಕ್ಯಾಲ್ಕುಲೇಟರ್ ಮೊಬೈಲ್ ಹಾಗೂ ಇತ್ಯಾದಿ ಎಲೆಕ್ಟ್ರಾನಿಕ್ ಸಾಧನಗಳನ್ನು ಪರೀಕ್ಷಾ ಕೊಠಡಿಗೆ ತರುವಂತಿಲ್ಲ. ಪರೀಕ್ಷಾ ಕೊಠಡಿಗೆ ವಿದ್ಯಾರ್ಥಿಗಳು ಬಿಡುವ ಮೊದಲು ಅವರ ಪ್ರವೇಶ ಪತ್ರವನ್ನು ಸ್ಕ್ಯಾನ್ ಮಾಡಿ ವಿದ್ಯಾರ್ಥಿಗಳ ಗುರುತು ಖಾತರಿಯಾದ ನಂತರ ಪ್ರವೇಶ ನೀಡತಕ್ಕದ್ದು ಎಂದರು.**

# ರಸ್ತೆ ಕಾಮಗಾರಿ ವಿಳಂಬ; ಅಪಘಾತ ಹೆಚ್ಚಳ

• **ಉದಯವಾಹಿನಿ, ಸಂತೇಬಾಚಹಳ್ಳಿ**

ದುರಸ್ತಿ ಹೆಸರಿನಲ್ಲಿ ರಸ್ತೆ ಕಿತ್ತು ವರ್ಷ ಕಳೆದಿದೆ. ಇದರಿಂದ ನಿತ್ಯ ವಾಹನ ಬಿದ್ದು, ಸವಾರರು ಗಾಯಗೊಳ್ಳುತ್ತಿದ್ದಾರೆ. ಇಷ್ಟಾದರೂ ಇತ್ತ ತಿರುಗಿ ನೋಡದ ಅಧಿಕಾರಿಗಳು ಮತ್ತು ಗುತ್ತಿಗೆದಾರರ ವಿರುದ್ಧ ವಿವಿಧ ಗ್ರಾಮಗಳ ಗ್ರಾಮಸ್ಥರು ಆಕ್ರೋಶಗೊಂಡಿದ್ದಾರೆ.

ಕೆ.ಆರ್.ಪೇಟೆ ತಾಲ್ಲೂಕಿನ ಸಂತೇಬಾಚಹಳ್ಳಿ ಹೋಬಳಿಯ ಹರಿಯಾಲದಮ್ಮ ದೇವಸ್ಥಾನದಿಂದ 20 ಕಿ.ಮೀ. ದೂರವಿರುವ ಸಂತೇಬಾಚಹಳ್ಳಿಗೆ ರಸ್ತೆ ಅಧ್ವಾನವಾಗಿ ಹೋಗಿದೆ. ಹಲಸನಹಳ್ಳಿ ಗೇಟ್ ಬಳಿ 300 ಮೀಟರ್ ಹಾಗೂ ದೊಡ್ಡಸೋಮನಹಳ್ಳಿ ಗೇಟ್ 350 ಮೀಟರ್ ಬಳಿ ರಸ್ತೆಗಳು ಗುಂಡಿ ಬಿದ್ದು ವಾಹನ ಸವಾರರು ಪರದಾಡುತ್ತಿದ್ದಾರೆ. ಕೆ.ಸಿ.ನಾರಾಯಣಗೌಡ ಸಚಿವರಾಗಿದ್ದಾಗ ಜನರು ಆಕ್ರೋಶ ಹೊರಹಾಕಿದ್ದರು. ಕೂಡಲೇ ಎಚ್ಚೆತ್ತ ನಾರಾಯಣಗೌಡರು ಟೆಂಡರ್ ಕರೆದು ಕಾಮಗಾರಿಗೆ ಸೂಚನೆ ನೀಡಿದ್ದರು. ಆದರೆ, ಚುನಾವಣೆ ನೆಪವೊಡ್ಡಿದ್ದ ಗುತ್ತಿಗೆದಾರ ದುರಸ್ತಿಗೆಂದು ರಸ್ತೆ ಕಿತ್ತು ಹಾಕಿ ಸುಮ್ಮನಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ. ರಸ್ತೆ ಕಿತ್ತಿರುವ ಪರಿಣಾಮ ವಾಹನ ಮುಂದೆ ಸಾಗಲು ಹರಸಾಹಸ ಪಡುತ್ತಿದ್ದಾರೆ. ಕಲ್ಲು ರಸ್ತೆಯ ಮಧ್ಯದಲ್ಲೇ ಅನಿವಾರ್ಯವಾಗಿ ಸಾಗುವ ಸ್ಥಿತಿಯಿದ್ದು, ದ್ವಿಚಕ್ರ ವಾಹನಗಳು ನಿತ್ಯ ಬೀಳುತ್ತವೇ ಇವೆ. ಸವಾರರಷ್ಟೇ ಅಲ್ಲ ಹಿಂಬದಿ ಸವಾರರು ಅದರಲ್ಲೂ



ಉದಯವಾಹಿನಿ ಚಿತ್ರ

ಮಹಿಳೆಯರು, ಮಕ್ಕಳು ಜೀವ ಕೈಯಲ್ಲಿ ಹಿಡಿದು ಕುಳಿತ್ತಿರುತ್ತಾರೆ. ಹದಗೆಟ್ಟ ರಸ್ತೆ ದಾಟಿದರೆ ಸಾಕು ಎನ್ನುವಷ್ಟು ಕಂಗೆಟ್ಟು ಹೋಗಿರುತ್ತಾರೆ ಸವಾರರು.

ಪಕ್ಕದಲ್ಲೇ ಅರಣ್ಯ ಪ್ರದೇಶವಿದ್ದು ಅಪಘಾತವಾದಾಗ ಸಹಾಯಕ್ಕೆ ಕೂಗಿದರೂ ಒಬ್ಬರು ಇರುವುದಿಲ್ಲ. ರಾತ್ರಿ ವೇಳೆಯಲ್ಲಿ ದರೋಡೆ ನಡೆಯುತ್ತಿರುವುದರಿಂದ ಜನರು ಸಂಜೆ ಆದರೆ ಸಾಕು ಈ ರಸ್ತೆಯಲ್ಲಿ ಸಾಗಲು ಹೆದರಿಕೆ ಆಗುತ್ತಿದೆ ಎನ್ನುತ್ತಾರೆ ವಾಹನ ಸವಾರರು. ಸಂತೇಬಾಚಹಳ್ಳಿ ಹಾಗೂ ಕಿಕ್ಕೇರಿ ಸೇರಿ ಶ್ರವಣಬೆಳಗೊಳ ರಾಜ್ಯ ಹೆದ್ದಾರಿಗೆ ಮಾರ್ಗ ಕಲ್ಪಿಸುವ ಪ್ರಮುಖ ರಸ್ತೆ ಇದಾಗಿದೆ. ಹರಿಯಲದಮ್ಮ ದೇವಸ್ಥಾನದಿಂದ ಆಚಮನಹಳ್ಳಿ, ಹಳೇಹತ್ತಿಗುಪ್ಪೆ, ದೊಡ್ಡಸೋಮನಹಳ್ಳಿ, ದೊಡ್ಡಹಾರನಹಳ್ಳಿ, ಚಿಕ್ಕಸೋಮನಹಳ್ಳಿ, ಆದಿಹಳ್ಳಿ, ಗೊರವಿ ಸೇರಿ ವಿವಿಧ ಹಳ್ಳಿಗಳ ರೈತರು ಇದೆ ರಸ್ತೆಯಲ್ಲಿ ಹೋಬಳಿ ಕೇಂದ್ರದ ನೆಮ್ಮದಿ ಕೇಂದ್ರ, ಮಾರುಕಟ್ಟೆ, ಬ್ಯಾಂಕ್ ಸೇರಿ ವಿವಿಧ ವ್ಯವಹಾರಕ್ಕೆ ತೆರಳಲು ಮುಖ್ಯವಾದ ರಸ್ತೆ ಇದಾಗಿದೆ. ಆದ್ದರಿಂದ ದುರಸ್ತಿ ಆದಷ್ಟು ಬೇಗವಾಗಲಿ ಎನ್ನುತ್ತಾರೆ ವಾಹನ ಸವಾರ ಕೆ.ಪಿ.ಪ್ರಭಾಕರ್.

## ಮಿನಿ ನ್ಯೂಸ್

### ಸಾಲಬಾಧೆ: ರೈತ ಆತ್ಮಹತ್ಯೆ

• **ಉದಯವಾಹಿನಿ, ಗೌರಿಬಿದನೂರು**

ತಾಲ್ಲೂಕಿನ ತೊಂಡೇಬಾವಿಯಲ್ಲಿ ಸಾಲಬಾಧೆ ತಾಳಲಾರದೆ ರೈತರೊಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಗುರುವಾರ ನಡೆದಿದೆ.

ಮೃತರನ್ನು ಯುವ ರೈತ ಪವನ್ ಕುಮಾರ್ (22) ಎಂದು ಗುರುತಿಸಲಾಗಿದೆ. ವ್ಯವಸಾಯಕ್ಕಾಗಿ ಸಹಕಾರಿ ಬ್ಯಾಂಕ್‌ನಲ್ಲಿ ಎರಡೂವರೆ ಲಕ್ಷ ಮತ್ತು ಸಂಬಂಧಿಕರ ಹತ್ತಿರ ಕೈಸಾಲ ಮಾಡಿಕೊಂಡಿದ್ದರು. ಬೆಳೆಗೆ ಉತ್ತಮ ಬೆಲೆ ಸಿಗದೆ ಮನನೊಂದಿದ್ದರು. ಜಮೀನಿನಲ್ಲಿರುವ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಘಟನಾ ಸ್ಥಳಕ್ಕೆ ತಹಶೀಲ್ದಾರ್ ಮಹೇಶ್ ಎಸ್.ಪತ್ರಿ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಪ್ರಕರಣ ದಾಖಲಾಗಿದೆ.

### ಗ್ಯಾರಂಟಿಗಾಗಿ ಬೆಲೆ ಏರಿಕೆ: ಶಾಸಕ

• **ಉದಯವಾಹಿನಿ, ಬಾಗೇಪಲ್ಲಿ**

ರಾಜ್ಯ ಕಾಂಗ್ರೆಸ್ ಸರ್ಕಾರ ಪಂಚ ಗ್ಯಾರಂಟಿ ಮೂಲಕ ಜನರಿಗೆ ಉಚಿತ ಸೌಲಭ್ಯ ಕಲ್ಪಿಸಿದೆ. ಇದರ ಆರ್ಥಿಕ ಹೊರೆ ನಿಭಾಯಿಸಲು ಹಾಲು, ಡೀಸೆಲ್ ಬೆಲೆ ಏರಿಕೆ ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ ಎಂದು ಶಾಸಕ ಸುಬ್ಬಾರೆಡ್ಡಿ ಹೇಳಿದರು. ಮ್ಯಾಜಿಕ್ ಮಾಡಿ ಸರ್ಕಾರ ಈ ಹಣ ಹೊಂದಿಸಲು ಸಾಧ್ಯವೇ? ಜನರಿಗೆ ಸೌಲಭ್ಯ ಕಲ್ಪಿಸಲು ಸರ್ಕಾರ ತೆರಿಗೆ ಮೂಲಕ ಹಣ ಹೊಂದಿಸಬೇಕಾಗುತ್ತದೆ ಎಂದು ಹೇಳಿದರು. ಅಗತ್ಯ ವಸ್ತುಗಳ ಬೆಲೆ ಏರಿಕೆ ಬಗ್ಗೆ ಬಿಜೆಪಿ ಪ್ರತಿಭಟನೆ ರಾಜಕೀಯ ದುರುದ್ದೇಶದಿಂದ ಕೂಡಿದೆ. ಬಿಜೆಪಿಗೆ ಪ್ರತಿಭಟನೆ ಮಾಡುವ ನೈತಿಕತೆ ಇಲ್ಲ. ಕೇಂದ್ರ ಸರ್ಕಾರ ಟೋಲ್ ಏರಿಕೆ ಮಾಡಿದೆ. ಇದರ ವಿರುದ್ಧ ಬಿಜೆಪಿಯವರು ಪ್ರತಿಭಟನೆ ಮಾಡಲಿ ಎಂದರು.

### ಮುದ ನೀಡಿದ ಮಳೆ

• **ಉದಯವಾಹಿನಿ, ತುರುವೇಕೆರೆ**

ಪಟ್ಟಣದಾದ್ಯಂತ ಗುರುವಾರ ಗುಡುಗು, ಮಿಂಚು ಸಹಿತ ಉತ್ತಮ ಮಳೆಯಾಯಿತು. ಗುರುವಾರ ಸಂಜೆ ದಿಢೀರನೆ ಜಿಟಿಜಿಟಿ ಹನಿಯಂತೆ ಪ್ರಾರಂಭವಾದ ಮಳೆ ಕ್ರಮೇಣ ಬಿರುಸಿನಲ್ಲಿ ಅರ್ಧ ತಾಸು ಸುರಿಯಿತು. ಎರಡು ದಿನಗಳಿಂದ ಬಿಸಿಲಿನ ತಾಪದಿಂದ ಹೈರಾಣಾಗಿದ್ದ ಜನರಿಗೆ ಮಳೆ ಮುದ ನೀಡಿತು. ಮಳೆ ನಿಂತರೂ ತುಂತುರು ಹನಿ ಬೀಳುತ್ತಲೇ ಇತ್ತು. ಬೈಕ್, ಇನ್ನಿತರ ವಾಹನ ಸವಾರರು ಮಳೆಯಲ್ಲೇ ಸಾಗಿದರು. ಕೆಲವರು ಕೊಡೆ ಆಶ್ರಯಿಸಿದರು. ಉತ್ತಮ ಮಳೆಯಿಂದ ರಸ್ತೆ ಮತ್ತು ಚರಂಡಿಗಳಲ್ಲಿ ನೀರು ಹರಿಯಿತು. ಮಳೆಯಿಂದ ಪಟ್ಟಣದ ತಾಲ್ಲೂಕು ಕಚೇರಿ ವೃತ್ತ, ಮಾಯಸಂದ್ರ, ತಿಪಟೂರು, ಬಾಣಸಂದ್ರ ಮತ್ತು ದಬ್ಬೇಘಟ್ಟ ರಸ್ತೆ ಬದಿಯಲ್ಲಿ ವ್ಯಾಪಾರ ಮಾಡುತ್ತಿದ್ದ ವ್ಯಾಪಾರಿಗಳು ವಸ್ತುಗಳನ್ನು ಮಳೆಯಿಂದ ರಕ್ಷಿಸಿಕೊಳ್ಳಲು ಪರದಾಡಿದರು.

ಪಟ್ಟಣಕ್ಕೆ ಹೊಂದಿಕೊಂಡಂತಿರುವ ಹಾವಾಳ, ತಾವರೇಕೆರೆ, ಕೊಟ್ಟೂರನ ಕೊಟ್ಟಿಗೆಯಲ್ಲಿ ಸಣ್ಣ ಪ್ರಮಾಣದ ಸೋನೆ ಮಳೆ ಬಿದ್ದಿದೆ. ಈ ಮಳೆಯಿಂದ ಮುನಿಯೂರು ಗದ್ದೆ ಬಯಲಿನಲ್ಲಿ ಭತ್ತ ನಾಟಿ ಮಾಡಿದ್ದ ರೈತರಿಗೆ ಅನುಕೂಲವಾಗಿದೆ ಎಂದು ರೈತರೊಬ್ಬರು ತಿಳಿಸಿದರು.

### ಕೃಷಿಹೊಂಡದಲ್ಲಿ ಈಜಲು ಹೋಗಿ ಬಾಲಕ ಸಾವು

• **ಉದಯವಾಹಿನಿ, ಚಿಕ್ಕನಾಯಕನಹಳ್ಳಿ**

ತಾಲ್ಲೂಕಿನ ತಮ್ಮಡಿಹಳ್ಳಿ ಗ್ರಾಮದ ರಾಜಶೇಖರ್ ಅವರ ಮಗ ಪ್ರೀತಮ್ (13) ಅವರ ಜಮೀನಿನಲ್ಲಿದ್ದ ಕೃಷಿ ಹೊಂಡದಲ್ಲಿ ಈಜಲು ಹೋಗಿ ಮೃತಪಟ್ಟಿದ್ದಾರೆ. ಪ್ರೀತಮ್ ಪೋಷಕರು ಹೊಲದಲ್ಲಿ ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದರು. ಮಧ್ಯಾಹ್ನದ ಊಟ ತೆಗೆದುಕೊಂಡು ಹೋದ ಪ್ರೀತಮ್ ಇನ್ನೊಂದು ಹೊಲಕ್ಕೆ ಹೋಗುವುದಾಗಿ ಪೋಷಕರಿಗೆ ತಿಳಿಸಿ ಕೃಷಿ ಹೊಂಡದಲ್ಲಿ ಈಜು ಕಲಿಯಲು ಹೋಗಿದ್ದಾನೆ. ಅಲ್ಲಿಯೇ ಮೃತಪಟ್ಟಿದ್ದಾನೆ. ಸಂಜೆಯಾದರು ಬಾರದಾಗ ಪೋಷಕರು ಕೃಷಿಹೊಂಡದ ಬಳಿ ಹೋದಾಗ ಪ್ರಕರಣ ಬೆಳಕಿಗೆ ಬಂದಿದೆ. ಹಂದನಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ವಾರಾಣಸಿಯಲ್ಲಿ ಅತ್ಯಾಚಾರ: ಮೈಸೂರಿನಲ್ಲಿ ಮೌನ ಪ್ರತಿಭಟನೆ

• **ಉದಯವಾಹಿನಿ, ಮೈಸೂರು**

ಉತ್ತರ ಪ್ರದೇಶದ ವಾರಾಣಸಿಯಲ್ಲಿ 19 ವರ್ಷದ ಯುವತಿ ಮೇಲೆ ಅತ್ಯಾಚಾರ ನಡೆಸಿರುವುದನ್ನು ಖಂಡಿಸಿ ಗಂಧದಗುಡಿ ಫೌಂಡೇಷನ್ ಅಧ್ಯಕ್ಷ ಆರ್ಯನ್ ಹಳೇ ಜಿಲ್ಲಾಧಿಕಾರಿ ಕಚೇರಿ ಬಳಿ ಗುರುವಾರ ಏಕಾಂಗಿಯಾಗಿ ಮೌನ ಪ್ರತಿಭಟನೆ



ನಡೆಸಿದರು. ಯುವತಿಯನ್ನು ಅಪಹರಿಸಿ ಒಂದು ವಾರದಲ್ಲಿ 23 ಪುರುಷರು ಸಾಮೂಹಿಕವಾಗಿ ಅತ್ಯಾಚಾರವೆಸಗಿದ ಹೃದಯ ವಿದ್ರಾವಕ ಘಟನೆ ನಡೆದಿದೆ. ಈ ಸಂಬಂಧ ಏ.6ರಂದು ಲಾಲ್‌ಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಆರೋಪಿಗಳಿಗೆ ಕೂಡಲೇ ಗಲ್ಲು ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಿದರು.

### ಒಡೆದ ನೀರಿನ ಪೈಪ್ ಸಂಚಾರಕ್ಕೆ ತೊಂದರೆ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಗುಂಡ್ಲುಪೇಟೆ**

ಪಟ್ಟಣದ 1ನೇ ವಾರ್ಡ್ ಎಚ್.ಎಸ್.ಮಹದೇವಪ್ರಸಾದ್ ನಗರದ ಮುಖ್ಯ ರಸ್ತೆಯಲ್ಲಿ ಕುಡಿಯುವ ನೀರಿನ ಪೈಪ್ ಒಡೆದು ರಸ್ತೆಗೆ ಹೊಂದುಕೊಂಡಂತೆ ಹಳ್ಳ ಸೃಷ್ಟಿಯಾಗಿದೆ. ಇದರಿಂದ ನಿವಾಸಿಗಳ ಓಡಾಟಕ್ಕೆ ತೊಂದರೆಯಾಗಿದೆ.

ಪ್ರತಿನಿತ್ಯ ಈ ಮಾರ್ಗವಾಗಿ ಬೈಕ್, ಕಾರುಗಳಲ್ಲಿ ಸಂಚಾರಿಗಳು, ಮಕ್ಕಳು, ವಯೋವೃದ್ಧರು ಓಡಾಡುತ್ತಿದ್ದಾರೆ. ರಾತ್ರಿ ವೇಳೆ ಹಳ್ಳದೊಳಗೆ ಬೀಳುವ ಆತಂಕ ಎದುರಾಗಿದೆ. ಆದ್ದರಿಂದ ಸಂಬಂಧಪಟ್ಟ ಪುರಸಭೆ ಮುಖ್ಯಾಧಿಕಾರಿಗಳು ಇತ್ತ ಗಮನ ಹರಿಸಿ ಒಡೆದ ಪೈಪ್‌ಲೈನ್ ದುರಸ್ತಿಗೆ ಕ್ರಮ ಕೈಗೊಂಡು ಸಾರ್ವಜನಿಕರ ಸುಗಮ ಸಂಚಾರಕ್ಕೆ ಅವಕಾಶ ಮಾಡಿಕೊಡಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ.

1ನೇ ವಾರ್ಡ್ ಎಚ್.ಎಸ್.ಮಹದೇವಪ್ರಸಾದ್ ನಗರದ ಕೆಲವಡೆ ಕಸಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದು, ಚರಂಡಿಗಳು ತುಂಬಿ ದುರ್ವಾಸನೆ ಬೀರುತ್ತಿದೆ. ಪ್ರಸ್ತುತ ಬೇಸಿಗೆ ಹಿನ್ನಲೆ ಪುರಸಭೆಯವರು ಕೂಡಲೇ ಚರಂಡಿ ಹೂಳು ತೆಗೆಸಬೇಕೆಂದು ಕಾವಲು ಪಡೆ ತಾಲ್ಲೂಕು ಅಧ್ಯಕ್ಷ ಎ.ಅಬ್ದುಲ್ ಮಾಲಿಕ್ ಆಗ್ರಹಿಸಿದರು.

ಅಂತರಾಳದಿಂದ..
EDITORIAL

# ಮಸೂದೆಗಳಿಗೆ ಅಂಕಿತ ಒಕ್ಕೂಟ ತತ್ವ ಮರುಸ್ಥಾಪಿಸಿದ ಸುಪ್ರೀಂ ತೀರ್ಪು

ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ಅವರು ವಿಧಾನಸಭೆ ಅಂಗೀಕರಿಸಿದ 10 ಮಸೂದೆಗಳನ್ನು ರಾಷ್ಟ್ರಪತಿಯವರ ಪರಿಶೀಲನೆಗೆ ಕಳುಹಿಸುವುದಕ್ಕಾಗಿ ತಡೆಹಿಡಿದಿರುವ ಕ್ರಮವು ಕಾನೂನುಬಾಹಿರ ಮತ್ತು ಲೋಪದಿಂದ ಕೂಡಿದೆ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಒಕ್ಕೂಟ ವ್ಯವಸ್ಥೆಯ ಮೌಲ್ಯ ಮತ್ತು ಸಂವಿಧಾನವೇ ಸರ್ವೋಚ್ಚ ಎಂಬುದನ್ನು ಎತ್ತಿಹಿಡಿದಿರುವ ಈ ತೀರ್ಪು ಒಂದು ಮೈಲಿಗಲ್ಲು. ತಾವು ಕಾನೂನು ಮತ್ತು ರಾಜ್ಯ ಸರ್ಕಾರಕ್ಕಿಂತ ಮಿಗಿಲು ಎಂಬ ರೀತಿಯಲ್ಲಿ ರಾಜ್ಯಪಾಲರು ಮಾತನಾಡಿದ್ದಾರೆ ಮತ್ತು ನಡೆದುಕೊಂಡಿದ್ದಾರೆ; ಇದು ರಾಜ್ಯಪಾಲ ಹುದ್ದೆಗೆ ತಕ್ಕದ್ದಲ್ಲದ ನಡವಳಿಕೆ ಎಂಬುದಕ್ಕೆ ಸುಪ್ರೀಂ ಕೋರ್ಟ್ ಮುದ್ರೆ ಬಿದ್ದಂತಾಗಿದೆ. ರವಿ ಅವರನ್ನು ಮತ್ತು ಅಸಾಂವಿಧಾನಿಕ ಹಾಗೂ ತೊಡಕು ಉಂಟುಮಾಡುವ ರೀತಿಯಲ್ಲಿ ನಡೆದುಕೊಂಡ ಇತರ ಕೆಲವು ರಾಜ್ಯಗಳ ರಾಜ್ಯಪಾಲರನ್ನು ಬೆಂಬಲಿಸಿದ ಕೇಂದ್ರ ಗೃಹ ಸಚಿವಾಲಯಕ್ಕೂ ಇದು ಅನ್ವಯವಾಗುತ್ತದೆ. ಸಂವಿಧಾನದ 142ನೇ ವಿಧಿ ಅಡಿಯಲ್ಲಿ ಇರುವ ವಿಶೇಷಾಧಿಕಾರ ಬಳಸಿರುವ ನ್ಯಾಯಾಲಯವು ಮಸೂದೆಗಳಿಗೆ ಸಂಬಂಧಿಸಿ ರವಿ ಅವರು ಕೈಗೊಂಡ ಎಲ್ಲಾ ನಿರ್ಧಾರಗಳನ್ನು ಬದಿಗೊತ್ತಿದೆ.



ರಾಜ್ಯಪಾಲರಿಗೆ ಮರು ಸಲ್ಲಿಕೆಯಾದ ದಿನಾಂಕದಂದೇ ಈ 10 ಮಸೂದೆಗಳು ಅಂಗೀಕಾರವಾಗಿವೆ ಎಂದು ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಮತ್ತು ಆರ್. ಮಹಾದೇವನ್ ಅವರ ಪೀಠವು ಹೇಳಿದೆ. ಈ ಮೂಲಕ, ಸಂವಿಧಾನದ ಗಂಭೀರ ಉಲ್ಲಂಘನೆಯನ್ನು ಸರಿಪಡಿಸಿದೆ. ಅಸಾ ಧಾರಣ ಸನ್ನಿವೇಶಗಳಲ್ಲಿ ಅಸಾಧಾರಣವಾದ ಪರಿಹಾರಗಳನ್ನು ಕಂಡುಕೊಳ್ಳುವುದು ಅನಿವಾರ್ಯವಾಗುತ್ತದೆ. ರಾಜ್ಯಪಾಲರು ಮಸೂದೆಗಳಿಗೆ ಅಂಕಿತ ಹಾಕಲು ಸಮಯದ ಗಡುವನ್ನು ನಿಗದಿ ಮಾಡುವ ಉತ್ತಮ ಕೆಲಸವನ್ನೂ ನ್ಯಾಯಾಲಯ ಮಾಡಿದೆ. ಮಸೂದೆಗೆ ಅಂಕಿತ ಹಾಕುವುದನ್ನು ತಡೆಹಿಡಿದು, ಅದನ್ನು ರಾಷ್ಟ್ರಪತಿಯವರ ಪರಿಶೀಲನೆಗೆ ಕಳುಹಿಸುವುದಿದ್ದರೆ ಅದಕ್ಕೂ ಒಂದು ತಿಂಗಳ ಗಡುವು ನಿಗದಿ ಮಾಡಲಾಗಿದೆ. ಮಸೂದೆಗೆ ಅಂಕಿತ ಹಾಕದಿರಲು ರಾಜ್ಯಪಾಲರು ತೀರ್ಮಾನಿಸಿದರೆ ಅದನ್ನು ಮೂರು ತಿಂಗಳೊಳಗೆ ಸದನಕ್ಕೆ ಮರಳಿಸಬೇಕು ಎಂದು ಕೋರ್ಟ್ ಹೇಳಿದೆ.

ರಾಜ್ಯ ವಿಧಾನಸಭೆಯು ಮರುಪರಿಶೀಲನೆ ಬಳಿಕ ಎರಡನೆಯ ಬಾರಿಗೆ ರಾಜ್ಯಪಾಲರಿಗೆ ಮಸೂದೆಯನ್ನು ಕಳುಹಿಸಿಕೊಟ್ಟರೆ, ಅದಕ್ಕೆ ಒಂದು ತಿಂಗಳೊಳಗೆ ಅಂಕಿತ ಹಾಕಬೇಕು. ಈ ಗಡುವಿಗೆ ಬದ್ಧರಾಗದೇ ಇದ್ದರೆ ನ್ಯಾಯಾಲಯದ ಪರಿಶೀಲನೆಗೆ ಒಳಪಡ ಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನೂ ನೀಡಲಾಗಿದೆ. ಉನ್ನತ ಸಾಂವಿಧಾನಿಕ ಹುದ್ದೆಯಲ್ಲಿರುವ ವ್ಯಕ್ತಿಯು ವಾಡಿಕೆಯಂತೆ ಮಾಡಬೇಕಾದ ಕೆಲಸಕ್ಕೆ ಕೂಡ ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸಬೇಕಾಗಿ ಬಂದದ್ದು ಮತ್ತು ಎಚ್ಚರಿಕೆ ಕೊಡಬೇಕಾಗಿ ಬಂದದ್ದು ವಿಷಾದನೀಯ ಸ್ಥಿತಿ. ರವಿ ಮತ್ತು ಇತರ ಕೆಲವು ರಾಜ್ಯಪಾಲರು ಸಂವಿಧಾನದ ಉಲ್ಲಂಘನೆಯನ್ನು ಪದೇ ಪದೇ ಮಾಡಿದ್ದಾರೆ. ರಾಜ್ಯಪಾಲರ ನಡವಳಿಕೆಗೆ ಸಂಬಂಧಿಸಿ ಹಲವು ಆದೇಶಗಳು, ಸಲಹೆಗಳು ಮತ್ತು ಅಭಿಪ್ರಾಯಗಳನ್ನು ಕಿವಿಗೆ ಹಾಕಿಕೊಳ್ಳದ ಕಾರಣಕ್ಕೆ ನ್ಯಾಯಾಲಯವು ಕಠಿಣ ನಿರ್ಧಾರವನ್ನು ಕೈಗೊಳ್ಳಬೇಕಾಗಿ ಬಂದಿದೆ.

ಶಾಸನ ರೂಪಿಸುವ ವಿಚಾರದಲ್ಲಿ ಶಾಸನಸಭೆಗೆ ಹೆಚ್ಚಿನ ಅಧಿಕಾರ ಇರುತ್ತದೆಯೇ ವಿನಾ ಕೇಂದ್ರ ಸರ್ಕಾರ ನೇಮಕ ಮಾಡಿದ, ಚುನಾಯಿತರಲ್ಲದ ರಾಜ್ಯಪಾಲರಿಗೆ ಅಲ್ಲ. ಪರೋಕ್ಷ ಪರಮಾಧಿಕಾರ ಅಥವಾ ಸಂಪೂರ್ಣ ಪರಮಾಧಿಕಾರ ಎಂಬುದು ರಾಜ್ಯಪಾಲರಿಗೆ ಇಲ್ಲ ಎಂಬುದನ್ನು ನ್ಯಾಯಾಲಯವು ಹಲವು ಬಾರಿ ಹೇಳಿದೆ. ರಾಜ್ಯಪಾಲರು 'ಸಂಸದೀಯ ಪ್ರಜಾಸತ್ತೆಯ ಸ್ಥಾಪಿತ ನಿಯಮಗಳನ್ನು ಗೌರವಿಸಬೇಕು; ಶಾಸನಗಳ ಮೂಲಕ ವ್ಯಕ್ತವಾಗುವ ಜನರ ಇಚ್ಛೆಯನ್ನು ಗೌರವಿಸಬೇಕು; ಮತ್ತು ಜನರಿಗೆ ಉತ್ತರದಾಯಿಯಾಗಿರುವ ಚುನಾಯಿತ ಸರ್ಕಾರವನ್ನು ಗೌರವಿಸಬೇಕು' ಎಂದು ನ್ಯಾಯಾಲಯವು ಹೇಳಿದೆ.

ಕೇಂದ್ರ ಸರ್ಕಾರದ ರಾಜಕೀಯ ಏಜೆಂಟ್ ರೀತಿ ನಡೆದುಕೊಂಡು ಸರ್ಕಾರದ ಅಧಿಕಾರವನ್ನು ಕಸಿದುಕೊಳ್ಳುವ ಅವಕಾಶ ರಾಜ್ಯಪಾಲರಿಗೆ ಇಲ್ಲ. ನ್ಯಾಯಾಲಯವು ಹೇಳಿರುವ ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ಎಲ್ಲ ರಾಜ್ಯಪಾಲರು ಅರ್ಥ ಮಾಡಿಕೊಳ್ಳಬೇಕು. ಒಕ್ಕೂಟ ತತ್ವಗಳು ಗಂಭೀರ ಅಪಾಯದಲ್ಲಿದ್ದ ಹೊತ್ತಿನಲ್ಲಿ ಅವುಗಳನ್ನು ರಕ್ಷಿಸುವ ಕೆಲಸವನ್ನು ನ್ಯಾಯಾಲಯವು ಮಾಡಿದೆ. ನ್ಯಾಯಾಲಯವು ಇಷ್ಟೊಂದು ಗಂಭೀರವಾಗಿ ದೋಷ ಹೊರಿಸಿದ ಬಳಿಕವೂ ತಮ್ಮ ಹುದ್ದೆಯಲ್ಲಿ ಮುಂದುವರಿಯಬೇಕೇ ಎಂಬುದರ ಕುರಿತು ರಾಜ್ಯಪಾಲ ರವಿ ಅವರು ಯೋಚಿಸಬೇಕು.

# ಕಸ್ತೂರಬಾರವರ 156ನೇ ಜನ್ಮಜಯಂತಿ

## ಹೆಣ್ಣುಮಕ್ಕಳಿಗೆ ಅವರ ದಾಂಪತ್ಯ ಜೀವನದ ಆದರ್ಶಗಳು ಪರಿಚಯವಾಗಬೇಕು



ಕೃಷ್ಣಪ್ಪ, ಲೇಖಕರು
• ಉದಯವಾಹಿನಿ, ವಿಶೇಷ

ಶ್ರೀಮತಿ ಕಸ್ತೂರಬಾ ಗಾಂಧಿ ಯವರು ಏ. 11,1869ರಂದು ಗುಜರಾತಿನ ಪೋರಬಂದರ್ ನಲ್ಲಿ ಸುಸಂಸ್ಕೃತ ಕುಟುಂಬದಲ್ಲಿ ಜನಿಸಿದರು. ಕಸ್ತೂರ ಬಾರವರು ಶಾಲೆಗೆ ಹೋಗಿ ಶಿಕ್ಷಣ ಪಡೆಯಲಿಲ್ಲ. ಆದರೆ ಸಂಸ್ಕಾರದಲ್ಲಿ ಶಿಕ್ಷಣ ಶ್ರೀಮಂತರಾಗಿದ್ದರು. ಅವರಿಗೆ 13 ವರ್ಷ ವಯಸ್ಸಾಗಿದ್ದಾಗ ಗಾಂಧೀಜಿ ಅವರೊಂದಿಗೆ ವಿವಾಹವಾಯಿತು. ಗಾಂಧೀಜಿ ಯವರಿಗಿಂತ ಆರು ತಿಂಗಳು ದೊಡ್ಡವರು ಕಸ್ತೂರಬಾ.

ಕಸ್ತೂರಬಾಗಾಂಧಿಯಲ್ಲಿ ಅಪಾರವಾದ ಧೈರ್ಯ, ಆತ್ಮವಿಶ್ವಾಸಗಳಿದ್ದವು.

ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿದ್ದಾಗಲೇ ಮದುವೆಯಾದ ಪತಿ-ಪತ್ನಿಯರು ತಮ್ಮ ವಿವಾಹವನ್ನು ನೋಂದಾಯಿಸಬೇಕು ಎಂಬ ಅವಮಾನಕರ ಕಾನೂನಿನ ವಿಷಯದಲ್ಲಿ ಗಾಂಧೀಜಿ ಯವರು ಮಹಿಳೆಯರನ್ನು ಒಗ್ಗೂಡಿಸಿ ಅದನ್ನು ವಿರೋಧಿಸುವ ಚಳುವಳಿ ಪ್ರಾರಂಭಿಸಿದಾಗ ಕಸ್ತೂರಬಾರವರು ತಾವಾಗಿ ಆ ಚಳುವಳಿಯಲ್ಲಿ ಭಾಗವಹಿಸಿದರು. ಮುಂದೆಯೂ ಅವರು ಹಲವಾರು ಸಂದರ್ಭ ಗಳಲ್ಲಿ ಸೆರೆಮನೆವಾಸ ಅನುಭವಿಸಿ ಪತಿಗೆ ತಕ್ಕ ಪತ್ನಿ ಎನಿಸಿದರಲ್ಲದೇ ಸಹಸ್ರಾರು ಸಂಖ್ಯೆ ಮಹಿಳೆಯರಿಗೆ ಸ್ವಾತಂತ್ರ್ಯ ಸಮರದಲ್ಲಿ ಭಾಗಿಯಾಗಲು ಪ್ರೇರಣೆ ನೀಡಿದರು. ಸಾಬರಮತಿ ಆಶ್ರಮ, ಸೇವಾ ಗ್ರಾಮಗಳಲ್ಲಿ ಕಸ್ತೂರಬಾ ಗಾಂಧಿ ಯವರು ಆಶ್ರಮ ವಾಸಿಗಳನ್ನು ತಾಯಿಯಂತೆ ನೋಡಿಕೊಂಡರು.

ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಭೋಜನ, ಸ್ವದೇಶಿ ವ್ರತ ಮೊದಲಾದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು.




ಮದ್ಯಪಾನ ವಿರೋಧಿ ಕಾರ್ಯ ಕ್ರಮ, ವಿದೇಶಿ ವಸ್ತು ಗಳ ಬಹಿಷ್ಕಾರ, ಅಸಹಕಾರ ಚಳುವಳಿಗಳಲ್ಲಿ ಭಾಗಿಯಾದರು. ಮಹಿಳೆಯರಿಗೆ ಚರಕದಿಂದ ನೂಲು ತೆಗೆಯುವುದನ್ನು ಹೇಳಿಕೊಟ್ಟು ಸ್ವದೇಶಿ ವಸ್ತುಗಳನ್ನು, ವಸ್ತ್ರಗಳನ್ನು ಬಳಸುವಂತೆ ಪ್ರೇರೇ ಪಿಸಿದರು. ಆದಿವಾಸಿಗಳಲ್ಲಿ ಅತಿ ಯಾಗಿದ್ದ ಮದ್ಯ ಪಾನದ ದುಶ್ಚಟವನ್ನು ತಪ್ಪಿಸಲು ಅಪಾರವಾಗಿ ಶ್ರಮಿಸಿದರು.

1942ರಲ್ಲಿ ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಎಂಬ ಚಳುವಳಿ ದೇಶದ ಉದ್ದಗಲಕ್ಕೂ ವ್ಯಾಪಿಸಿತು. ಕಸ್ತೂರಬಾ ಗಾಂಧಿಯವರು ಆ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗಿಯಾದರು. ಬ್ರಿಟಿಷ್ ಸರ್ಕಾರ ಪತಿ-ಪತ್ನಿಯರಿಬ್ಬರನ್ನೂ ಬಂಧಿಸಿ ಸೆರೆಮನೆಗೆ ಕಳಿಸಿದ್ದು,ಅಲ್ಲಿ ಅವರ ಆರೋಗ್ಯ ಕ್ಷೀಣಿಸತೊಡಗಿತು. ಸರ್ಕಾರ ವೈದ್ಯಕೀಯ ನೆರವನ್ನು ನೀಡಿಲ್ಲವಾದ್ದರಿಂದ ಕಸ್ತೂರಬಾರವರು ಫೆಬ್ರವರಿ 22, 1944 ರಂದು ಸೆರೆಮನೆಯಲ್ಲಿಯೇ ತೀರಿಕೊಂಡರು. ಮಹಾನ್ ಚೇತನ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಸಹಧರ್ಮಿಣಿಯಾಗಿ, ನಿಸ್ವಾರ್ಥತೆ, ತ್ಯಾಗ, ಸೇವೆಗಳ ಪ್ರತೀ ಕವಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಪಾಲ್ಗೊಂಡು, ಮಾತೃಭೂಮಿಗೆ ತನ್ನನ್ನು ತಾನು ಪೂರ್ಣವಾಗಿ ಅರ್ಪಿಸಿಕೊಂಡ ಧೀರ ಮಹಿಳೆ ಕಸ್ತೂರಬಾ ಗಾಂಧಿ ಯವರ ಬದುಕು ಭಾರತೀಯರ ಮಹಿಳೆಯರಿಗೆ ಆದರ್ಶಪ್ರಾಯವಾಗಿದೆ. ಗಾಂಧೀಜಿಯವರು ತಮ್ಮ ಆತ್ಮಚರಿತ್ರೆಯಲ್ಲಿ ಕಸ್ತೂರ ಬಾರವರನ್ನು ನನ್ನ ಬದುಕಿನ ಸ್ಫೂರ್ತಿಯ ಚಿಲುಮೆ ಎಂದು ಬಣ್ಣಿಸಿದ್ದಾರೆ. ವಿಶ್ವಮಾನ್ಯ ವ್ಯಕ್ತಿಯೊಬ್ಬರ ಪತ್ನಿಯಾಗಿ ಪತಿಗೆ ಪ್ರೇರಕಶಕ್ತಿಯಾಗಿ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿ, ತ್ಯಾಗ, ಸಹಕಾರ, ಸರಳತೆಗಳ ಮೂಲಕ ಆಶ್ರಮ ಜೀವ ನದಲ್ಲಿ ಗಾಂಧೀಜಿ ಯವರನ್ನು ಅನುಸರಿಸಿ ಗಾಂಧೀಜಿ ಯವರ ಸಹಚಾರಿಣಿಯಾಗಿ, ವಿಶ್ವವಿಖ್ಯಾತ ಆದರ್ಶ ಸ್ತ್ರೀ ಎನಿಸಿದವರು ಕಸ್ತೂರಬಾ ಗಾಂಧಿ ಯವರು. ಇಂತಹ ಆದರ್ಶಸ್ತ್ರೀ ರವರ 156ನೇ ವರ್ಷದ ಜನ್ಮದಿನದಂದು ನಾವುಗಳು ನೆನೆಯುತ್ತಾ ಅವರ ಆತ್ಮಕ್ಕೆ ಶಾಂತಿ, ಸದ್ಗತಿ ದೊರಕಲಿ ಎಂದು ಪ್ರಾರ್ಥಿಸೋಣ.

# ಗುರುಗಳ ದರ್ಶನ ಪಡೆದ ಮಾಜಿ ಪಿಎಂ ಎಚ್ ಡಿ ದೇವೇಗೌಡರು

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಬೆಂಗಳೂರಿನ ಜಯನಗರದ ಐದನೇ ಬಡಾವಣೆಯಲ್ಲಿರುವ ನಂಜನಗೂಡು ಶ್ರೀರಾಘವೇಂದ್ರ ಸ್ವಾಮಿಗಳ ಮಠಕ್ಕೆ ಈ ದಿನ ಗುರುವಾರದ ಪ್ರಯುಕ್ತ ಶ್ರೀರಾಘವೇಂದ್ರ ಸ್ವಾಮಿಗಳ ದರ್ಶನ ಪಡೆದು ಶ್ರೀ ಗುರು ರಾಯರ ಬೃಂದಾವನದ ಮುಂಭಾಗದಲ್ಲಿ ಅರ್ಚಕರಾದ ಶ್ರೀ ನಂದಕಿಶೋರ್ ಆಚಾರ್ಯರು ಸಂಕಲ್ಪವನ್ನು ಮಾಡಿಸಿದರು. ನಂತರ ಶ್ರೀ ದೇವೇಗೌಡರು ಪ್ರಾರ್ಥನೆಯನ್ನು ಮಾಡಿ ದೀಪಗಳನ್ನು ಬೆಳಗಿಸಿ ಮಂಗಳಾರತಿಯನ್ನು ಸ್ವೀಕರಿಸಿದರು. ಈ ಸಂದರ್ಭದಲ್ಲಿ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಆರ್. ಕೆ. ವಾದೀಂದ್ರಾಚಾರ್ಯರು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರಿಗೆ ಶ್ರೀ ರಾಘವೇಂದ್ರ ಸ್ವಾಮಿಗಳ ಶೇಷವಸ್ತ್ರ, ಪರಿಮಳ ಪ್ರಸಾದ, ಫಲಮಂತ್ರಾಕ್ಷತೆ ಕೊಟ್ಟು ಆಶೀರ್ವದಿಸಿದರು.

# ಬೇಸಿಗೆಯಲ್ಲಿ ನೆತ್ತಿಯ ಸೋಂಕು ಹೆಚ್ಚಾಗಲು ಕಾರಣವೇನು?

ನಿವಾರಿಸುವುದು ಹೇಗೆ?

ಬೇಸಿಗೆಯಲ್ಲಿ ಹೆಚ್ಚಿದ ಶಾಖ, ಬೆವರು ಮತ್ತು ತೇವಾಂಶದಿಂದಾಗಿ ನೆತ್ತಿಯ ಸೋಂಕುಗಳು ಹೆಚ್ಚಾಗಿ ಕಂಡುಬರುತ್ತವೆ. ಅತಿಯಾದ ತೇವಾಂಶ, ನೆತ್ತಿಯನ್ನು ಸರಿಯಾಗಿ ಸ್ವಚ್ಛವಾಗಿಟ್ಟುಕೊಳ್ಳದಿರುವುದು ಬ್ಯಾಕ್ಟೀರಿಯಾ, ಶಿಲೀಂಧ್ರಗಳು ಮತ್ತು ಇತರ ರೋಗಕಾರಕಗಳ ಬೆಳವಣಿಗೆಗೆ ಸೂಕ್ತವಾದ ವಾತಾವರಣವನ್ನು ಸೃಷ್ಟಿಸುತ್ತದೆ. ಈ ಸೋಂಕುಗಳನ್ನು ಸರಿಯಾಗಿ ನಿರ್ವಹಿಸದಿದ್ದರೆ ತುರಿಕೆ, ಕೆಂಪು, ಸಿಪ್ಪೆ ಸುಲಿಯುವುದು ಮತ್ತು ಕೂದಲು ಉದುರುವಿಕೆಗೆ ಕಾರಣವಾಗಬಹುದು.

ವಿಶೇಷ ಶಾಂಪೂಗಳಿಂದ ನಿಯಮಿತವಾಗಿ ತೊಳೆಯುವುದು, ವೈಯಕ್ತಿಕ ಸ್ವಚ್ಛಗೊಳಿಸುವ ವಸ್ತುಗಳನ್ನು ಹಂಚಿಕೊಳ್ಳದಿರುವುದು, ನೆತ್ತಿಯನ್ನು ಅತಿಯಾದ ಸೂರ್ಯನ ಬೆಳಕಿಗೆ ಒಡ್ಡಿಕೊಳ್ಳದಿರುವುದು ಮೊದಲಾದ ಕ್ರಮಗಳನ್ನು ಅನುಸರಿಸುವುದರಿಂದ ಸೋಂಕಿನ ತೀವ್ರತೆಯನ್ನು ಕಡಿಮೆಗೊಳಿಸಬಹುದು. ಇವು ಬೇಸಿಗೆಯಲ್ಲಿ ಆರೋಗ್ಯಕರ ನೆತ್ತಿಯನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ.

### ಬೇಸಿಗೆಯಲ್ಲಿ ನೆತ್ತಿಯ ಚರ್ಮದ ಸೋಂಕಿಗೆ ಕಾರಣಗಳು

**ಅತಿಯಾದ ಬೆವರು ಮತ್ತು ನೆತ್ತಿಯ ಎಣ್ಣೆ:** ಬೇಸಿಗೆಯಲ್ಲಿ, ಚರ್ಮದ ಮೇಲ್ಮೈ ಬಿಸಿಯಾಗುತ್ತದೆ, ಇದು ನೆತ್ತಿಯ ಬೆವರು ಮತ್ತು ಎಣ್ಣೆ ಉತ್ಪಾದನೆಯನ್ನು ಹೆಚ್ಚಿಸುತ್ತದೆ. ಬೆವರಿನಿಂದ ಉತ್ಪತ್ತಿಯಾಗುವ ಎಣ್ಣೆ ಜಿಗುಟಾಗಿರುತ್ತದೆ ಮತ್ತು ಕೂದಲು ಕಿರುಚೀಲಗಳ ಬೆಳವಣಿಗೆಗೆ ಅಡ್ಡಿಮಾಡುವುದಲ್ಲದೆ ಬ್ಯಾಕ್ಟೀರಿಯಾ ಮತ್ತು ಶಿಲೀಂಧ್ರಗಳ ಬೆಳವಣಿಗೆ ಹೆಚ್ಚಾಗುತ್ತದೆ.

**ಶಿಲೀಂಧ್ರ, ನೆತ್ತಿಯ ಸೋಂಕುಗಳು:** ಹೆಚ್ಚಿದ ಶಾಖ ಮತ್ತು ತೇವಾಂಶವು ಕ್ಯಾಂಡಿಡಾ ಮತ್ತು ಮಲಸೇಜಿಯಾ ಶಿಲೀಂಧ್ರಗಳ ಬೆಳವಣಿಗೆಗೆ ಕಾರಣವಾಗುತ್ತದೆ. ಇದು ತಲೆಹೊಟ್ಟು, ಸೆಬೊ ಹೋರ್ಯಿಕ್ ತರಹದ ಡರ್ಮಟೈಟಿಸ್ ಅಥವಾ ಟಿನಿಯಾ ಕ್ಯಾಪಿಟಿಸ್ ಎಂದು ಕರೆಯಲ್ಪಡುವ ರಿಂಗ್ವರ್ಮ್ ಶಿಲೀಂಧ್ರಕ್ಕೆ ಕಾರಣವಾಗುತ್ತದೆ.



**ಬ್ಯಾಕ್ಟೀರಿಯಾದ ನೆತ್ತಿಯ ಸೋಂಕುಗಳು:** ಹೆಚ್ಚಿನ ತಾಪಮಾನ ಸೆಕೆ ಹೆಚ್ಚಳವು ಸ್ಟ್ಯಾಫಿಲೋಕೊಕಸ್ ಬ್ಯಾಕ್ಟೀರಿಯಾದ ಹೆಚ್ಚಳಕ್ಕೆ ಕಾರಣವಾಗುತ್ತದೆ ಇದು ನೆತ್ತಿಯ ಕೂದಲಿನ ಬೇರುಗಳನ್ನು ಉಬ್ಬಿಸುತ್ತದೆ, ಇದು ಫೋಲಿಕ್ಯುಲೈಟಿಸ್ ಉರಿಯೂತ ಮತ್ತು ನೆತ್ತಿಯ ಮೇಲ್ಮೈಯಲ್ಲಿ ಕಾಣಿಸಿ ಕೊಳ್ಳುವ ಕೀವು ತುಂಬಿದ ಕಜ್ಜಿಗಳಿಗೆ ಕಾರಣವಾಗುತ್ತದೆ.

**ಸರಿಯಾಗಿ ಶುಚಿ ಗೊಳಿಸದಿರುವುದು:** ಅಗತ್ಯವಿರುವಷ್ಟು ಬಾರಿ ಕೂದಲನ್ನು ತೊಳೆಯದಿರುವುದು, ಹೇರ್ ಬ್ರಷ್ಗಳನ್ನು ಸ್ವಚ್ಛಗೊಳಿಸದಿರುವುದು, ನೆತ್ತಿಯಲ್ಲಿರುವ ಜಿಡ್ಡನ್ನು ಸರಿಯಾಗಿ ಶುಚಿಗೊಳಿಸದಿರುವುದು ನೆತ್ತಿಯ ಚರ್ಮದ ಸೋಂಕಿನ ಸಾಧ್ಯತೆಯನ್ನು ಹೆಚ್ಚಿಸುತ್ತದೆ.

**ಸೂರ್ಯನಿಗೆ ದೀರ್ಘಕಾಲ ಒಡ್ಡಿಕೊಳ್ಳುವುದು:** ಹೆಚ್ಚು ಸೂರ್ಯನ ಬೆಳಕು ನೆತ್ತಿಯನ್ನು ಬಿಸಿ ಮಾಡುತ್ತದೆ, ಇದು ಸುಟ್ಟಗಾಯಗಳಿಗೆ ಕಾರಣವಾಗಬಹುದು, ಇದು ನೆತ್ತಿಯ ಚರ್ಮದ ಸೋಂಕು ಪ್ರವೇಶಿಸಲು ಅನುವು ಮಾಡಿಕೊಡುತ್ತದೆ. ಚರ್ಮದ ರಕ್ಷಣಾತ್ಮಕ ತಡೆಗೋಡೆಯನ್ನು ದುರ್ಬಲಗೊಳಿಸುತ್ತದೆ ಮತ್ತು ಸುಡುವಿಕೆಗೆ ಹೆಚ್ಚು ಒಡ್ಡಿಕೊಳ್ಳುತ್ತದೆ.?

**ಅಲರ್ಜಿಗಳು:** ಕೆಲವು ಕೂದಲಿನ ಉತ್ಪನ್ನಗಳು ತುರಿಕೆ ಮತ್ತು ಅಲರ್ಜಿಯ ಪ್ರತಿಕ್ರಿಯೆಗಳಿಗೆ ಕಾರಣವಾಗಬಹುದು. ಉರಿಯೂತ ಮತ್ತು ನೆತ್ತಿಯ ಕಿರಿಕಿರಿಯು ಸೋಂಕುಗಳಿಗೆ ಕಾರಣವಾಗಬಹುದು.

**ಯಾವಾಗ ವೈದ್ಯರನ್ನು ಭೇಟಿಯಾಗಬೇಕು?:** ತುರಿಕೆಯೊಂದಿಗೆ ಕೆಂಪು, ಊತ, ಕೂದಲು ಉದುರುವಿಕೆ ಅಥವಾ ಕೀವು ತುಂಬಿದ ಹುಣ್ಣುಗಳು ಕಾಣಿಸಿಕೊಂಡಾಗ ಚರ್ಮರೋಗ ತಜ್ಞರನ್ನು ಭೇಟಿ ಮಾಡುವುದು ಸೂಕ್ತ. ಮೇಲಿನ ಪರಿಹಾರಗಳನ್ನು ಅನುಸರಿಸಿದ ನಂತರವೂ ನೀವು ನೆತ್ತಿಯ ಸೋಂಕನ್ನು ಎದುರಿಸುತ್ತಿದ್ದರೆ ಕೂಡಲೇ ವೈದ್ಯರನ್ನು ಭೇಟಿಯಾಗಿ.

# 7ನೇ ವೇತನ ಆಯೋಗ ರಾಜ್ಯ ಸರ್ಕಾರಿ ನೌಕರರಿಗೆ ವಿಸ್ತರಿದಂತೆ ನಮಗೂ ಕೊಡಿ: ರಾಜ್ಯಾಧ್ಯಕ್ಷ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ಅಧಿಕಾರಿ ಮತ್ತು ನೌಕರರ ಸಂಘ, ರಾಜ್ಯದ ನಗರ ಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಪೌರ ನೌಕರರ ಸಂಘದ ಜಂಟಿ ಸಭೆ. ಕರ್ನಾಟಕ ರಾಜ್ಯದ ಮಹಾನಗರ ಪಾಲಿಕೆ ನೌಕರರ ಸಂಘದ ಅಧ್ಯಕ್ಷರಾದ ಎ.ಅಮೃತ್ ರಾಜ್‌ರವರು, ಪದಾಧಿಕಾರಿಗಳು, ಪೌರ ನೌಕರರ ಸಂಘದ ಅಧ್ಯಕ್ಷರು ಪದಾಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು. ಇದೇ ಸಂದರ್ಭದಲ್ಲಿ ಎ.ಅಮೃತ್ ರಾಜ್ ರವರು ಮಾತನಾಡಿ 7ನೇ ವೇತನ ಆಯೋಗದ ಸೌಲಭ್ಯವನ್ನು ರಾಜ್ಯ ಸರ್ಕಾರಿ ನೌಕರರಿಗೆ ವಿಸ್ತರಿದಂತೆ, ಮಹಾನಗರ ಪಾಲಿಕೆ ಮತ್ತು ಪುಸಭೆ, ನಗರ ಸಭೆ, ಪಟ್ಟಣ ಪಂಚಾಯಿತಿ ನೌಕರರಿಗೆ ಯಥಾವತ್ತಾಗಿ ಸರ್ಕಾರದ ಆರ್ಥಿಕ ಇಲಾಕೆಯಿಂದಲೇ ಪಾವತಿಸಲು ಅನುದಾನವನ್ನು ಬಿಡುಗಡೆ ಮಾಡುವುದು.

ಮಹಾನಗರ ಪಾಲಿಕೆ ಪುರಸಭೆ, ನಗರ ಸಭೆ, ಪಟ್ಟಣ ಪಂಚಾಯಿತಿ ನೌಕರರುಗಳಿಗೆ, ಎಸ್‌ಎಫ್‌ಸಿ ವೇತನ ನಿಧಿಯಲ್ಲಿ ಶೇ 20 ರಿಂದ 15 % ಪ್ರತಿಶತ ಅನುದಾನ ಕಡಿತಮಾಡಿ, ವೇತನ ಅನುದಾನ ಬಿಡುಗಡೆಮಾಡಿ, ಈ ವ್ಯತ್ಯಾಸದ ಮೊತ್ತವನ್ನು ಸ್ಥಳೀಯ ಸಂಸ್ಥೆಗಳ ನಿಧಿಯಿಂದಲೇ ಬಳಸಿ, ವೇತನ ಪಾವತಿಸುವಂತೆ ಹೊರಡಿಸಿ ನಡವಳಿ ಆದೇಶವನ್ನು ಹಿಂಪಡೆದು, ಸರ್ಕಾರದ ಆರ್ಥಿಕ ಇಲಾಖೆಯಿಂದಲೇ ಸಂಪೂರ್ಣ ವೇತನ ಭರಿಸುವುದು.

ರಾಜ್ಯ ಸರ್ಕಾರಿ ನೌಕರರಿಗೆ ಜಾರಿ ಮಾಡಿರುವ ಆರೋಗ್ಯ ಸಂಜೀವಿನಿ ಯೋಜನೆಯನ್ನು ಕರ್ನಾಟಕ ರಾಜ್ಯ ಪುರಸಭೆ, ನಗರ ಸಭೆ, ಪಟ್ಟಣ ಪಂಚಾಯ್ತಿ ಮತ್ತು ಮಹಾನಗರ ಪಾಲಿಕೆ ಅಧಿಕಾರಿ ನೌಕರರಿಗೂ ಜಾರಿ ಮಾಡಲು ಮನವಿ. ರಾಜ್ಯ ಸರ್ಕಾರಿ ನೌಕರರಿಗೆ ಜಾರಿ ಮಾಡಿರುವ KGID, GPFನ್ನು ಎಲ್ಲಾ ಸ್ಥಳೀಯ ಸಂಸ್ಥೆಗಳಾದ ಕರ್ನಾಟಕ ರಾಜ್ಯ ಪುರಸಭೆ, ನಗರ ಸಭೆ, ಪಟ್ಟಣ ಪಂಚಾಯ್ತಿ ಮತ್ತು ಮಹಾನಗರ ಪಾಲಿಕೆ ಅಧಿಕಾರಿ ನೌಕರರಿಗೂ ಜಾರಿ ಮಾಡಲು ಮನವಿ.

> ಅಂತೀಮವಾಗಿ ನಮ್ಮ ಸಂಘದ ವತಿಯಿಂದ ನೀಡಿರುವ ಬೇಡಿಕೆಗಳನ್ನು ಈಡೇರಿಸದೆ ಇದ್ದಲ್ಲಿ ದಿನಾಂಕ: 26-05-2025 ರಂದು ಸಾಂಧರ್ಬಿಕ ರಜೆ ಹಾಕಿ, ನ್ಯಾಯಯುತ ಬೇಡಿಕೆ ಪಡೆಯುವ ಹಿತದೃಷ್ಠಿಯಿಂದ ಕೆಲಸ ಕಾರ್ಯಗಳನ್ನು ಅನಿರ್ಧಿಷ್ಟಾವಧಿಗೆ ಸ್ಥಗಿತಗೊಳಿಸಿ, ನ್ಯಾಯಯುತ ಬೇಡಿಕೆಗಾಗಿ ಅನಿವಾರ್ಯ ಕಾರಣಗಳಿಂದ ಹೋರಾಟ ವನ್ನು ಹಮ್ಮಿಕೊಳ್ಳಲು ತೀರ್ಮಾನಿಸಲಾಗಿದೆ ಎಂದು ಹೇಳಿದರು.

ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ನು ತಿದ್ದುಪಡಿ ಕರಡು ಅಧಿಸೂಚನೆ ಕೂಡಲೇ ಪ್ರಕಟಿಸಲು ಮನವಿ ಮಾಡಲಾಯಿತು. ಹಂತ ಹಂತ ಹೋರಾಟದ ಬಗ್ಗೆ ಸಭೆಯ ನಿರ್ಣಯ ಮಾಡಲಾಯಿತು.

ದಿನಾಂಕ: 12-04-2025 ರಿಂದ ಕಛೇರಿಗಳಲ್ಲಿ ಕಪ್ಪು ಪಟ್ಟಿ (ಬಲತೋಳಿಗೆ) ಧರಿಸಿ ನ್ಯಾಯಯುತ ಬೇಡಿಕೆ ಪಡೆಯಲು ಅನಿವಾರ್ಯ ಕಾರಣಗಳಿಂದ ಹೋರಾಟ ಮಾಡಲು ತೀರ್ಮಾನಿಸಲಾಯಿತು. ನಮ್ಮ ಸಂಘದ ವತಿಯಿಂದ ವಿವಿಧ ಬೇಡಿಕೆಗಳನ್ನು ಈಡೇರಿಸಲು ಈಗಾಗಲೇ ಸರ್ಕಾರಕ್ಕೆ ನೀಡಿರುವ ಮನವಿ ಪತ್ರವನ್ನು, ರಾಜ್ಯದ ಉಸ್ತುವಾರಿ ಸಚಿವರುಗಳಿಗೆ/ ಶಾಸಕರಿಗೆ/ ಜಿಲ್ಲಾಧಿಕಾರಿಗಳಿಗೆ ಮತ್ತು ಸಂಘ ಸಂಸ್ಥೆಗಳಿಗೆ ಸಹ ಮನವಿ ಪತ್ರ ಸಲ್ಲಿಸಲು ತೀರ್ಮಾನಿಸಲಾಯಿತು.

# ರಾಮಾಯಣ



## ಸುಮಂತ್ರನು ಕೈಕೇಯಾದೇವಿಗೆ ಹೇಳಿದ ನೀತಿ

• ಹಿಂದಿನ ಸಂಚಿಕೆಯಿಂದ 78ನೆಯ ಅಧ್ಯಾಯ

ನಿನ್ನ ತಾಯಿಯ ಕೆಡುಕುಬುದ್ಧಿಯನ್ನು ನಾನು ಪೂರ್ವದಲ್ಲಿ ಕೇಳಿದ್ದೇನೆ. ನಿನ್ನ ತಂದೆಯಾದ ಕೇಕಯರಾಯನು ತಪಸ್ಸನ್ನು ಮಾಡುತ್ತಿರಲು ವರದನೆಂಬ ಒಬ್ಬ ಮುನೀಶ್ವರನು ಪ್ರಸನ್ನನಾಗಿ ಆತನನ್ನು ಏನಾಗಬೇಕೆಂದು ಕೇಳಿದನು. ನಿನ್ನ ತಂದೆಯು ತನಗೆ ಮೃಗಪಕ್ಷಿ ಮೊದಲಾದ ಸಮಸ್ತ ಪ್ರಾಣಿಗಳ ಭಾಷೆಗಳೂ ತಿಳಿಯುವಂತೆ ವರವನ್ನು ಕೊಡಬೇಕೆಂದು ಕೇಳಿದನು. ವರದಮುನೀಶ್ವರನು ಆ ವರವನ್ನು ಕೊಟ್ಟು ಮೃಗಪಕ್ಷಿಗಳ ಭಾಷೆಗಳನ್ನು ನಿನ್ನ ತಂದೆ ಒಬ್ಬನೇ ತಿಳಿದುಕೊಳ್ಳಬೇಕಲ್ಲದೆ ಮತ್ತೊಬ್ಬರಿಗೆ ಹೇಳಿದರೆ ಆ ಕ್ಷಣದಲ್ಲೇ ಮರಣವಾಗುವುದೆಂದು ಹೇಳಿದನು. ಅದರಿಂದ ನಿನ್ನ ತಂದೆಯಾದ ಕೇಕಯರಾಯನು ಪಶುಪಕ್ಷಿಮೃಗಗಳ ಭಾಷೆಗಳನ್ನು ತಿಳಿದಿದ್ದನು. ಒಂದಾನೊಂದು ದಿವಸ ನಿನ್ನ ತಾಯಿ ಸಮೀಪದಲ್ಲಿದ್ದಾಗ ಒಂದು ಪಿಪೀಲಿಕಾಪಂತ್ರಿ, ಧ್ವನಿಗೈಯುತ್ತಿತ್ತು. ನಿನ್ನ ತಂದೆಯು ಆ ಧ್ವನಿಯನ್ನು ಕೇಳಿ ಆ ಭಾಷೆಯನ್ನು ಬಲ್ಲ ಕಾರಣದಿಂದ ನಕ್ಕನು. ಅದನ್ನು ನೋಡಿ ನಿನ್ನ ತಾಯಿ ತನ್ನನ್ನು ಪರಿಹಾಸಮಾಡಿದವೆಂದು ಕೋಪಿಸಿಕೊಂಡು ಆತನನ್ನು ಕುರಿತು ' ನೀನು ನನ್ನನ್ನು ಪರಿಹಾಸ ಮಾಡಿದ ಕಾರಣವೇನು? ಅದನ್ನು ನನಗೆ ತಿಳಿಯಹೇಳು ಎಂದು ಕೇಳಿದಳು. ಕೇಕೆಯರಾಯನು ಆಕೆಯನ್ನು ಕುರಿತು ಪ್ರಿಯೆ, ನಾನು ನಿನ್ನನ್ನು ಪರಿಹಾಸಮಾಡಲಿಲ್ಲ. ಮತ್ತೊಂದು ಕಾರಣದಿಂದ ನಕ್ಕನು, ಆ ಕಾರಣವನ್ನು ನಿನ್ನ ಸಂಗಡ ಹೇಳಿದರೆ ಈ ಕ್ಷಣದಲ್ಲಿಯೇ ನನಗೆ ಮರಣವಾಗುವುದು. ಇದರಲ್ಲಿ ಸಂಶಯವಿಲ್ಲ ಎಂದು ಹೇಳಿದನು. ನಿನ್ನ ತಾಯಿ ಆತನನ್ನು ಕುರಿತು 'ನೀನು ಬದುಕಿದರೂ ಸರಿ, ಬದುಕದಿದ್ದರೂ ಸರಿ. ನನಗೆ ಹೇಳಲೇಬೇಕು' ಎಂದು ಒತ್ತಾಯಪಡಿಸಿದಳು. ಕೇಕಯರಾಯನು ಭೀತಿಯಿಂದ ತನಗೆ ವರವನ್ನು ಕೊಟ್ಟ ವರದಮುನೀಶ್ವರನಿಗೆ ಆ ವೃತ್ತಾಂತವನ್ನು ಹೇಳಿ ಏನು ಮಾಡಬೇಕೆಂದು ಕೇಳಲು ಆತನು ಎಲ್ಲೆ ಅರಸನೆ, ನಿನ್ನ ಸ್ತ್ರೀಯು ಹೇಗಾದರೂ ನಾಶವಾಗಿ ಹೋಗಲಿ, ತಿಳಿದ ಭಾಷೆಯನ್ನು ಹೇಳಿ ವೃಥಾ ಶರೀರ ತ್ಯಾಗವನ್ನು ಮಾಡಬೇಡ. ಇದೇ ನಿನಗೆ ಹಿತೋಪದೇಶ ' ಎಂದು ಹೇಳಿದನು. ನಿನ್ನ ತಂದೆಯು ಮಹಾಪ್ರಸಾದವೆಂದು ಸಂತೋಷಪಟ್ಟು ನಿನ್ನ ತಾಯಿಯನ್ನು ಪರಿತ್ಯಾಗಮಾಡಿ ಅನೇಕಕಾಲ ಸುಖದಿಂದ ರಾಜ್ಯವನ್ನಾಳಿಕೊಂಡಿದ್ದಾನೆ ! ನಿನ್ನ ತಾಯಿಯಹಾಗೆ ನೀನು ಮಾಡಬಾರದ ಕೃತ್ಯವನ್ನು ಬೇಕಾಗಿ ಮಾಡಬೇಡ. ನಿನ್ನ ಪತಿಯಾದ ದಶರಥರಾಯನ ಮಾತನ್ನು ಕೇಳು. ಎಲೈ ಕೈಕೇಯಾದೇವಿಯೆ?, ನೀನು ಜನ್ಮಾಂತರದಲ್ಲಿ ಮಾಡಿದ ಪಾಪಬುದ್ಧಿಯಿಂದ ಈ ಪ್ರಕಾರದಲ್ಲಿ ದುರ್ಬುದ್ಧಿಯನ್ನು ಒಟ್ಟ ದಶರಥರಾಯನಿಗೂ ಲೋಕದಲ್ಲಿ ಅಪಕೀರ್ತಿಯನ್ನು ತರುತ್ತಿದ್ದೀಯೆ. ಈ ರಾಜನು ನಿನಗೆ ಕೊಟ್ಟ ವರಗಳು ತಪ್ಪದಹಾಗೆ ಮತ್ತೊಂದು ಪ್ರಕಾರದಲ್ಲಿ ನಿನಗೆ ಸಂತೋಷವನ್ನು ವುಂಡರೀಕಾಕ್ಷನೂ ಮಹಾಧರ್ಮಿಷ್ಠನೂ ಜ್ಯೇಷ್ಠ ಪುತ್ರನೂ ಕ್ಷತ್ರಿಯಧರ್ಮವನ್ನು ಪರಿಪಾಲಿಸುವಂಥವನೂ ಆದ ಶ್ರೀರಾಮನಿಗೆ ದಶರಥರಾಯನು ಪಟ್ಟಾಭಿಷೇಕವನ್ನು ಮಾಡಲಿ. ಹಾಗಲ್ಲದೆ ಆತನು ವನಕ್ಕೆ ತೆರಳಿದರೆ ಲೋಕದಲ್ಲಿ ನಿನಗೆ ಎಂದೆಂದಿಗೂ ಸ್ಥಿರವಾದ ಅವಕೀರ್ತಿಯು ಬರುವುದು. ನೀನು ಅಂಥ ಅಪಕೀರ್ತಿಗೊಳಗಾಗಬೇಡ. ಶ್ರೀರಾಮನು ರಾಜ್ಯಾಧಿಪತ್ಯವನ್ನು ಮಾಡಲಿ! ಆತನ ಹೊರತು ಮತ್ತೊಬ್ಬನು ರಾಜ್ಯವರಿಪಾಲನಕ್ಕೆ ಸಮರ್ಥನಲ್ಲ. ಆತನು ರಾಜ್ಯಭಾರವನು ೦ ವಹಿಸಿದಮೇಲೆ ದಶರಥರಾಯನು ವನವಾಸಕ್ಕೆ ಹೋಗುವನು. ಇಕ್ಷ್ವಾಕುವಂಶದ ರಾಜರು ತಮ್ಮ ಮಕ್ಕಳು ಪ್ರಬುದ್ಧ ರಾದರೆ ಅವರಿಗೆ ಪಟ್ಟವನ್ನು ಕಟ್ಟಿ ತಾವು ವಾನಪ್ರಸ್ಥಾಶ್ರಮಕ್ಕೆ ಹೋಗುವರೆಂಬ ವಂಶಮರ್ಯಾದೆಯು ತಪ್ಪಲಾರದು '' ಎಂದು ನುಡಿದನು. ಹೀಗೆ ಮನ್ನಣೆಯ ಮಾತುಗಳಿಂದಲೂ ಅನೇಕ ನಿಷ್ಠುರವಚನಗಳಿಂದಲೂ ನಯಭಯ ಗಳಿಂದಲೂ ಬೋಧಿಸಿದ ಸುಮಂತ್ರನ ಮಾತನ್ನು ಕೇಳಿ ಕೈಕೇಯಾದೇವಿಯು ಸ್ವಲ್ಪವಾದರೂ ಮನಗರಗದೆಯೂ ಮುಖಕಾಂತಿಗುಂದದೆಯೂ ಶ್ರೀರಾಮನಿಗೆ ವನವಾಸವೂ ತನ್ನ ಮಗನಿಗೆ ಪಟ್ಟಾಭಿಷೇಕವೂ ಆಗಬೇಕೆಂದೇ ನಿಶ್ಚಯಿಸಿ ಆತನಿಗೆ ಪ್ರತ್ಯುತ್ತರವನ್ನು ಕೊಡದೆ ಸುಮ್ಮನಿದಳು.

ಮುಂದುವರಿಯುವುದು...

# ಮಹಾವೀರರ ಜೀವನ ಮತ್ತು ಬೋಧನೆಗಳು



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

ವರ್ಧಮಾನ್ ಮಹಾವೀರ್ ವೈದಿಕ ಧರ್ಮದ ವಿರುದ್ಧ ಧ್ವನಿ ಎತ್ತಿದರು. ಅವರು ವೇದಗಳನ್ನು, ಬ್ರಾಹ್ಮಣರನ್ನು ಖಂಡಿಸಿದರು, ಮನುಷ್ಯನ ಸಾಮರ್ಥ್ಯಕ್ಕೆ ಒತ್ತು ನೀಡಿದರು.


ಅವರು ಬೋಧಿಸಿದ ಧರ್ಮವನ್ನು ಜೈನ ಧರ್ಮ ಎಂದು ಕರೆಯಲಾಗುತ್ತಿತ್ತು, ಇದು ಭಾರತೀಯ ಸಂಸ್ಕೃತಿಯ ಮೇಲೆ ಆಳವಾದ ಪ್ರಭಾವವನ್ನು ಬೀರಿತು.

**ಆರಂಭಿಕ ಜೀವನ:** ವರ್ಧಮಾನ್ ಮಹಾವೀರರು ಕ್ರಿ.ಪೂ. 599 ರಲ್ಲಿ (ಕೆಲವರ ಪ್ರಕಾರ ಕ್ರಿ.ಪೂ. 540) ಮಗಧದ ವೈಸಾಲಿ ಬಳಿಯ ಜ್ಞಾತ್ರಿಕ ಕುಟುಂಬದಲ್ಲಿ ಜನಿಸಿದರು. ಅವರ ತಂದೆ ರಾಜ ಚೇತಕ ಮತ್ತು ತಾಯಿತ್ರಿಸಲಾ. ಅವರ ಮೂಲ ಹೆಸರು ವರ್ಧಮಾನ್. ಕಾಲಾನಂತರದಲ್ಲಿ ಅವರು ಮಹಾವೀರ ಎಂದು ಪ್ರಸಿದ್ಧರಾದರು. ಜೈನ ಗ್ರಂಥಗಳಿಂದ ಅವನನ್ನು ನಟಪುತ್ರ, ಕಸವ ಮತ್ತು ವೇಶಲಿಯ ಎಂದು ಕರೆಯಲಾಗುತ್ತಿತ್ತು ಎಂದು ತಿಳಿದುಬಂದಿದೆ.

**ಮದುವೆ:** ಬೆಳೆಯುತ್ತಿರುವ ವಯಸ್ಸಿನಲ್ಲಿ ಮಹಾವೀರ್ ಯೋಸಾಡಾಳನ್ನು ಮದುವೆಯಾಗಿ ಪ್ರಿಯದರ್ಶಿನಿ ಎಂಬ ಹೆಸರಿನ ಮಗಳನ್ನು ಹೊಂದಿದ್ದಳು. ಆದರೂ ಅವನು ತನ್ನನ್ನು ಈ ಲೌಕಿಕ ಜೀವನಕ್ಕೆ ಸೀಮಿತಗೊಳಿಸಲಾಗಲಿಲ್ಲ. ಆಡಳಿತದ ಜವಾಬ್ದಾರಿ ವಹಿಸಿ ಕೊಳ್ಳಲು ಇಷ್ಟವಿರಲಿಲ್ಲ. ಅವರು ಯಾವಾಗಲೂ ಚಿಂತನಶೀಲ ಮನಸ್ಥಿತಿಯಲ್ಲಿದ್ದರು. ಪ್ರಾಪಂಚಿಕ ಆನಂದವು ಅವನನ್ನು ತೃಪ್ತಿಪಡಿಸಲು ಸಾಧ್ಯವಾಗಲಿಲ್ಲ.

**ಔಷಧಿಯಾಗಿ ಜೀವನ:** ಮಹಾವೀರ್ ಮನೆಯಿಂದ ಹೊರಬಂದು ಭಾರತದ ಅನೇಕ ಸ್ಥಳಗಳಲ್ಲಿ ಬೆತ್ತಲೆಯಾಗಿ ಆಶ್ಚರ್ಯಚಕಿತನಾದನು. ಅವರು ಭಾರೀ ತಪಸ್ಸನ್ನು ಆಶ್ರಯಿಸಿದರು. ಅವನ ಕೂದಲು, ಉಗುರುಗಳು ಬೆಳೆದವು. ಅವನು ಎಂದಿಗೂ ಹಲ್ಲುಜ್ಜಲಿಲ್ಲ. ಜನರು ಅವನ ಮೇಲೆ ನಾಯಿಯನ್ನು ಕೂರಿಸಿದರು, ಅದು ಅವನ ದೇಹವನ್ನು ಕತ್ತರಿಸಿತು ಆದರೆ ಅವನು ಯಾವುದೇ ಔಷಧಿಯನ್ನು ತೆಗೆದುಕೊಳ್ಳಲಿಲ್ಲ. ಅವರು ನಿಜವಾದ ಜ್ಞಾನದ ಹುಡುಕಾಟದಲ್ಲಿ ಸ್ಥಳದಿಂದ ಸ್ಥಳಕ್ಕೆ ತೆರಳಿದರು.

**ಜ್ಞಾನ ಸಾಧನೆ:** ಮಹಾವೀರ್ ರಿಜ್ಜು ಪಾಲಿಕಾ ನದಿಯ ದಡದಲ್ಲಿ ಧ್ಯಾನ ಮಾಡಿದರು, ನಿಜವಾದ ಜ್ಞಾನವನ್ನು ಪಡೆದರು, ನಿರ್ಗ್ರಂಥ ಅಥವಾ 'ಜಿನ' ಎಂದು ಕರೆಯಲ್ಪಟ್ಟರು. ಅವರನ್ನು ನಿರ್ಗ್ರಂಥ' ಎಂದೂ ಕರೆಯುತ್ತಿದ್ದರು. ಮುಂದೆ, ಅವರು ಈ ಜ್ಞಾನವನ್ನು ಭಾರತದ ಜನ ರಲ್ಲಿ ಬೋಧಿಸಲು ನಿರ್ಧರಿಸಿದರು.



**ಜೈನ ಧರ್ಮ ಮತ್ತು ಮರಣದ ಉಪದೇಶ:** ಮಹಾವೀರನು ಮೊದಲು ಮಗಧದ ಪ್ರಾಚೀನ ರಾಜಧಾನಿಯಾದ ರಾಜಗೃಹಕ್ಕೆ ಹೋದನು. ಅಲ್ಲಿ ಅವರು ಹನ್ನೊಂದು ಬ್ರಾಹ್ಮಣರನ್ನು ಜೈನ ಧರ್ಮಕ್ಕೆ ಪರಿವರ್ತಿ ಸಿದರು. ಮಗಧದ ರಾಜ ಅಜಾತಶತ್ರು ಜೈನ ಧರ್ಮವನ್ನು ಸ್ವೀಕರಿಸಿದ. ಮಹಾವೀರರು ಜೈನ ಧರ್ಮ ವನ್ನು ಮಗಧ, ಅವಂತಿ, ವೈಶಾಲಿ, ಅಂಗ, ಮಿಥಿಲ, ಶ್ರಾವಸ್ತಿ ಮತ್ತು ಇತರ ಅನೇಕ ಸ್ಥಳಗಳಲ್ಲಿ ಬೋಧಿಸಿದರು ಮತ್ತು ಪಾವಾದಲ್ಲಿ 526 ಬಿಸಿ (ಅಥವಾ 486 ಬಿ.ಸಿ.)ನಲ್ಲಿ ತಮ್ಮ ಜೀವನವನ್ನು ಉಸಿರಾಡಿದರು.

**ಮಹಾವೀರನ ಬೋಧನೆಗಳು:** ಮಹಾವೀರರು ಭಾರತದ ವಿವಿಧ ಭಾಗಗಳಲ್ಲಿ ಜೈನ ಧರ್ಮವನ್ನು ಬೋಧಿಸಿದರು. ಅವರ ಬೋಧನೆಗಳು ಸರಳವಾಗಿದ್ದವು. ಸಾಮಾನ್ಯ ಜನರು ಅವರ ಬೋಧನೆಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುತ್ತಾರೆ.


**ತ್ರಿರತ್ನ:** ಮಹಾವೀರ್ ಶುದ್ಧ, ನಿಯಂತ್ರಿತ ಜೀವನಕ್ಕೆ ಒತ್ತು ನೀಡಿದರು. ಅದನ್ನು ಸಾಧಿಸಲು ಅವರು ತ್ರಿರತ್ನ (ಮೂರು ಆಭರಣಗಳು) ತತ್ವವನ್ನು ಪ್ರತಿಪಾದಿಸಿದರು. ಅವುಗಳೆಂದರೆ ಸರಿಯಾದ ನಂಬಿಕೆ, ಸರಿಯಾದ ಜ್ಞಾನ ಮತ್ತು ಸರಿಯಾದ ನಡವಳಿಕೆ. ಈ ಮೂರು ನಂಬಿಕೆಗಳ ಆಚರಣೆಯು ಮೋಕ್ಷಕ್ಕೆ ಕಾರಣವಾಗುತ್ತದೆ.

**ಐದು ವಚನಗಳು:** ಉತ್ತಮ ಶಿಸ್ತಿನ ಜೀವನಕ್ಕಾಗಿ ಮಹಾವೀರರು ಐದು ಪ್ರತಿಜ್ಞೆಗಳನ್ನು ಬೋಧಿಸಿದರು. ಅವುಗಳೆಂದರೆ ಅಹಿಂಸೆ (ಅಹಿಂಸೆ), ಸತ್ಯ (ಸತ್ಯ), ಅಸ್ತೇಯ (ಕಳ್ಳತನ ಮಾಡದಿರುವುದು), ಅಪರಿಗ್ರಹ (ಅನುಬಂಧ) ಮತ್ತು ಬ್ರಹ್ಮಚರ್ಯ (ಬ್ರಹ್ಮಚರ್ಯ).

**ಅಹಿಂಸೆ:** ಮಹಾವೀರರು ಅಹಿಂಸೆಗೆ (ಅಹಿಂಸೆ) ಒತ್ತು ನೀಡಿದರು. ಬದುಕಿರುವ, ಬಿಡದ ಜೀವಿಗಳಿಗೂ ಜೀವವಿದೆ ಎಂದು ಉಪದೇಶಿಸಿದರು. ಯಾವುದೇ ನೋವು ಅವರಿಗೆ ನೋವು ತರುತ್ತದೆ. ಹಾಗಾಗಿ ಕ್ರಿಯೆಯಾಗಲಿ, ಮನಸ್ಸಿನಲ್ಲಾಗಲಿ ಹಿಂಸಾತ್ಮಕವಾಗಿ ರಬಾರದು ಎಂದು ಸಲಹೆ ನೀಡಿದರು

**ವೇದಗಳ ನಿರಾಕರಣೆ:** ವೇದಗಳನ್ನು ಮಹಾವೀರರು ತಿರಸ್ಕರಿಸಿದರು. ವೇದಗಳು ಧರ್ಮನಿಷ್ಠ ಮತ್ತು ಸಾಮಾಜಿಕ ಉದ್ವಿಗ್ನತೆಯನ್ನು ಉಂಟುಮಾಡುತ್ತವೆ ಎಂದು ಅವರು ಬೋಧಿಸಿದರು. ಅವರು ವೈದಿಕ ದೇವರು, ದೇವತೆಗಳನ್ನು ನಿರಾಕರಿಸಿದರು, ಅವುಗಳನ್ನು ಕಾಲ್ಪನಿಕವಾಗಿ ವಿವರಿಸಿದರು.

**ಡೆಸ್ಟಿನಿ ಮ್ಯಾನ್:** ಮಹಾವೀರನು ಮನುಷ್ಯನು ತನ್ನ ಹಣೆಬರಹದ ವಾಸ್ತುಶಿಲ್ಪಿ ಎಂದು ಹೇಳಿದನು. ಅವನು ತನ್ನ ಕಾರ್ಯಗಳ ಮೂಲಕ ತನ್ನ ಜೀವನವನ್ನು ಉತ್ತಮ, ಸಂತೋಷದಿಂದ ಮಾಡಬಹುದು.



ಆ ಹಂತ ವನ್ನು ಪಡೆಯಲು ಯಾವುದೇ ದೇವರು ಅಥವಾ ದೇವತೆ ಸಹಾಯ ಮಾಡುವುದಿಲ್ಲ.

**ಕ್ರಿಯೆಯ ಸಿದ್ಧಾಂತ:** ಮಹಾವೀರರು 'ಕರ್ಮವಾದ' (ಕ್ರಿಯೆಯ ಸಿದ್ಧಾಂತ) ಬೋಧಿಸಿದರು. ಅದರಂತೆ, ಒಳ್ಳೆಯ ಕಾರ್ಯಗಳು ಒಳ್ಳೆಯ ಫಲಿತಾಂಶವನ್ನು ತರುತ್ತವೆ ಮತ್ತು ಕೆಟ್ಟ ಕಾರ್ಯಗಳು ಕೆಟ್ಟ ಫಲಿತಾಂಶವನ್ನು ನೀಡುತ್ತವೆ. ಮನುಷ್ಯನು ಸತ್ಕರ್ಮಗಳನ್ನು ಅನುಸರಿಸಿದರೆ, ಅವನು ಉತ್ತಮ ಫಲಿತಾಂಶವನ್ನು ಪಡೆಯುತ್ತಾನೆ ಮತ್ತು ಅವನ ಆತ್ಮವು ಮುಕ್ತಿ ಹೊಂದುತ್ತದೆ. ಕೆಟ್ಟ ಕರ್ಮಗಳು ಅವನನ್ನು ಮತ್ತೆ ಮತ್ತೆ ಜನ್ಮ ತೆಗೆದುಕೊಳ್ಳುವಂತೆ ಮಾಡುತ್ತದೆ ಮತ್ತು ಅವನ ಆತ್ಮವನ್ನು ಬಂಧನದಿಂದ ಬಿಡುಗಡೆ ಮಾಡಲಾಗುವುದಿಲ್ಲ.

**ಆತ್ಮ :** ಆತ್ಮವು ಮಾನವ ದೇಹದ ತಿರುಳು. ದೇಹವನ್ನು ಬಂಧನದಿಂದ ಮುಕ್ತಗೊಳಿಸುವುದು ಇದರ ಏಕೈಕ ಗುರಿಯಾಗಿದೆ. ಇದು ಒಳ್ಳೆಯ ಕಾರ್ಯಗಳನ್ನು ಆಶ್ರಯಿಸಲು ಮನುಷ್ಯನನ್ನು ಪ್ರೇರೇಪಿಸುತ್ತದೆ. ಇದು ಮಾನವನನ್ನು ಕ್ರಿಯೆಯ ಬಂಧನದಿಂದ ಬಿಡುಗಡೆ ಮಾಡುವ ಗುರಿಯನ್ನು ಹೊಂದಿದೆ. ಆತ್ಮವು ವಿಮೋಚನೆಗೊಂಡಾಗ, ಇವುಗಳು ಪುನರ್ಜನ್ಮವಲ್ಲ.

**ಜಾತಿ ವ್ಯವಸ್ಥೆ ನಿರಾಕರಣೆ:** ಮಹಾವೀರ್ ಜಾತಿ ವ್ಯವಸ್ಥೆಯನ್ನು ನಿರಾಕರಿಸಿದರು. ಜನರಲ್ಲಿ ಸಮಾನತೆಯನ್ನು ಸಾರಿದರು. ಅವರು ವರ್ಗ ರಹಿತ ಸಮಾಜದ ಸುಳಿವು ನೀಡಿದರು. ಇದು ಭಾರತೀಯ ಸಮಾಜಕ್ಕೆ ಒಂದು ದೊಡ್ಡ ಗೌರವವಾಗಿತ್ತು, ಇದನ್ನು ನಂತರ ವಿಶ್ವದ ಅನೇಕ ಮಹಾನ್ ಪುರುಷರು ಒತ್ತಿಹೇಳಿದರು.

**ಬ್ರಾಹ್ಮಣ ಪ್ರಾಬಲ್ಯಕ್ಕೆ ನಿರಾಕರಣೆ:** ಮಹಾವೀರನು ಬ್ರಾಹ್ಮಣರ ಶ್ರೇಷ್ಠತೆಯನ್ನು ನಿರಾಕರಿಸಿದನು. ಅವರು ಸಮಾಜದಲ್ಲಿ ಸಿದ್ಧಾಂತಗಳನ್ನು ತರುತ್ತಿದ್ದಾರೆ ಎಂದು ಅವರು ಖಂಡಿಸಿದರು. ಅವರು ಸಮಾಜದೊಳಗೆ ಭಿನ್ನಾಭಿಪ್ರಾಯ ತಂದಿದ್ದಾರೆ ಎಂದು ಆರೋಪಿಸಿದರು.

ಬ್ರಾಹ್ಮಣರು ಸಮಾಜ ದಲ್ಲಿ ಯಾರಿಗೂ ಶ್ರೇಷ್ಠರಲ್ಲ ಎಂದು ಅವರು ನಿರಾಕರಿಸಿದರು. ಆದ್ದರಿಂದ, ಜೈನ ಧರ್ಮವು ಬ್ರಾಹ್ಮಣ ಧರ್ಮದ ವಿರುದ್ಧದ ಮೊದಲ ಪ್ರತಿಭಟನಾ ಚಳುವಳಿಯಾಗಿದೆ. ಇದು ವೈದಿಕ ಧರ್ಮಕ್ಕೆ ಆಯಕಟ್ಟಿನ ಹೊಡೆತವನ್ನು ನೀಡಿತು, ಧಾರ್ಮಿಕ ಆಚರಣೆಗಳ ಕಾಗುಣಿತ ದಿಂದ ಜನರನ್ನು ಮುಕ್ತಗೊಳಿಸಿತು. ಪ್ರತಿ ಅರ್ಥದಲ್ಲಿ, ಮಹಾವೀರರು ಮನುಕುಲದ ವಿಮೋಚಕ ರಾದರು. ಜೈನ ಧರ್ಮ ಭಾರ ತೀಯ ಸಂಸ್ಕೃತಿಗೆ ಸಾಕಷ್ಟು ಕೊಡುಗೆ ನೀಡಿದೆ. ರಾಜಕೀಯ, ಪ್ರಾದೇಶಿಕ ಭಾಷೆ ಮತ್ತು ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರದಲ್ಲಿ ತನ್ನ ಹೆಜ್ಜೆ ಗುರುತುಗಳನ್ನು ಬಿಟ್ಟು ಸಮಾಜದ ಅವನತಿ ಮತ್ತು ವೈಶಿಷ್ಟ್ಯ ಪರಿವರ್ತನೆಯನ್ನು ಪರಿಶೀಲಿಸಿತು. ಇದು ವ್ಯಾಪಾರ ಸಮುದಾಯ, ದತ್ತಿ ಸಂಸ್ಥೆಗಳ ಬೆಳವಣಿಗೆಗೆ ಸಹಾಯ ಮಾಡಿತು, ಆ ಮೂಲಕ ಆರೋಗ್ಯಕರ ಸಮಾಜವನ್ನು ಸೃಷ್ಟಿಸುತ್ತದೆ.

### ಕನ್ನಡ ಭಾಷೆಗೆ ವಚನ ಸಾಹಿತ್ಯ, ದಾಸ ಸಾಹಿತ್ಯ ಸೇರಿದಂತೆ ಅನೇಕ ಸಾಹಿತ್ಯಗಳು ಕನ್ನಡಕ್ಕೆ ಶ್ರೀಮಂತ ಭಾಷೆಯನ್ನಾಗಿ ಮಾಡಿವೆ

# ಭಾಷೆಯಿಲ್ಲದಿದ್ದರೇ ಕಾಡು ಪ್ರಾಣಿಗಳಾಗಿ ಬಾಳುತ್ತಿದ್ದೇವು : ಸುರೇಶ ಚನ್ನಶೆಟ್ಟಿ

• **ಉದಯವಾಹಿನಿ, ಬೀದರ್**



ಉದಯವಾಹಿನಿ ಚಿತ್ರ

ಇಂದಿನ ಯುವಕರು ಮತ್ತು ಯುವತಿಯರು ಸಾಮಾಜಿಕ ಜಾಲತಾಣಗಳ ಮೂಲಕ ನಮ್ಮ ಭವ್ಯ ಭಾತರದ ದೇಶಿ ಸಂಸ್ಕೃತಿಯನ್ನು ಮರೆತು, ಪಾಶ್ಚಿಮಾತ್ಯ ಸಂಸ್ಕೃತಿಯ ಕಡೆಗೆ ವಾಲುತ್ತಿರುವುದು ವಿಷಾದಕರ ಸಂಗತಿಯಾಗಿದೆ ಎಂದು ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸುರೇಶ ಚನ್ನಶೆಟ್ಟಿ ಅವರು ತೀವ್ರ ಕಳವಳ ವ್ಯಕ್ತಪಡಿಸಿದರು.

ಅವರು ನಗರದ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಆವರಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಹಾಗೂ ಮಹರ್ಷಿ ವಾಲ್ಮೀಕಿ ಸೋಶಿಯಲ್ ಐಂಡ್ ಕಲ್ಚರಲ್ ಟ್ರಸ್ಟ್ (ರಿ) ಬೀದರ್ ಇವರ ಸಂಯುಕ್ತಾಶ್ರಯದಲ್ಲಿ 2020-21ನೇ ಸಾಲಿನ ಸಂಘ ಸಂಸ್ಥೆಗಳ ಗಿರಿಜನ ಉಪಯೋಜನೆಯಡಿ ಏರ್ಪಡಿಸಿದ ಜಿಲ್ಲಾ ಮಟ್ಟದ ಜನಪದ ಸಡಗರ ಹಾಗೂ ವಿಚಾರ ಸಂಕಿರಣ ಕಾರ್ಯಕ್ರಮವನ್ನು ಸಸಿಗೆ ನೀರುಣಿಸುವ ಮೂಲಕ ಉದ್ಘಾಟಿಸಿ ಮಾತನಾಡುತ್ತಿದ್ದರು.

ಪಾಶ್ಚಿಮಾತ್ಯ ಸಂಸ್ಕೃತಿಯಿಂದ ನಮ್ಮ ಜಾನಪದ ಸಂಸ್ಕೃತಿ ಕಡಿಮೆಯಾಗುತ್ತಿದೆ. ಭವ್ಯ ಭಾರತ ಅನೇಕ ಭಾಷೆಗಳ ದೇಶ, ಭಾಷೆಗಳೇ ಇಲ್ಲದೇ ಇದ್ದರೇ ನಾವು ಮಾನವರು ಕಾಡು ಪ್ರಾಣಿಗಳಾಗಿ ಬಾಳುತ್ತಿದ್ದೇವು ಎಂದ ಅವರು ಜಾನಪದ ಕಲಾವಿದರು ಜಾನಪದದ ಮೂಲಕ ನಮ್ಮ ಪ್ರಾಚೀನ ಸಂಸ್ಕೃತಿ ಪರಂಪರೆಗಳನ್ನು ಉಳಿಸಿಕೊಂಡು ಬಂದಿರುವರು. ಕನ್ನಡ ಭಾಷೆಗೆ ವಚನ ಸಾಹಿತ್ಯ, ದಾಸ ಸಾಹಿತ್ಯ ಸೇರಿದಂತೆ ಅನೇಕ ಸಾಹಿತ್ಯಗಳು ಕನ್ನಡಕ್ಕೆ ಶ್ರೀಮಂತ ಭಾಷೆಯನ್ನಾಗಿ ಮಾಡಿವೆ ಎಂದು ಕೊಂಡಾಡಿದರು.

**ಸುರೇಶ ಚನ್ನಶೆಟ್ಟಿ ಕಳವಳ**

ಈ ಸಮಾರಂಭದಲ್ಲಿ ಇತ್ತಿಚೆಗೆ ಕರ್ನಾಟಕ ಜಾನಪದ ಅಕಾಡೇಮಿಯ 2024ನೇ ಸಾಲಿನ ವಾರ್ಷಿಕ ಪ್ರಶಸ್ತಿ ಪುರಸ್ಕೃತರಾದ ಮಾರುತಿ ಕೋಳಿ ಚಾಂಬೋಳ, ಕರ್ನಾಟಕ ಸರಕಾರಿ ನೌಕರರ ಮಹಿಳಾ ಘಟಕದ ಬೀದರ ಜಿಲ್ಲಾಧ್ಯಕ್ಷೆ ಶ್ರೀಮತಿ ಬಿ.ಜೆ. ಪಾರ್ವತಿ ಸೋನಾರೆ, ಮತ್ತು ಕರ್ನಾಟಕ ಬಂಜಾರಾ ಭಾಷೆ ಮತ್ತು ಸಂಸ್ಕೃತಿ ಅಕಾಡೇಮಿಯ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ಆಶಾ ರಾಠೋಡ್ ಅವರುಗಳಿಗೆ ಶಾಲು ಹೊದಿಸಿ, ನೆನಪಿನ ಕಾಣಿಕೆ ನೀಡಿ, ವಿಶೇಷವಾಗಿ ಸನ್ಮಾನಿಸಿ, ಗೌರವಿಸಲಾಯಿತು.

ವಿಜಯಕುಮಾರ ಭಂಡೆ ಸ್ವಾಗತಿಸಿದರು, ಚಂದ್ರಕಾಂತ ಹಳ್ಳಿಖೇಡಕರ್ ಅಚ್ಚುಕಟ್ಟಾಗಿ ನಿರೂಪಿಸಿದರು. ಎಂ.ಪಿ.ಮುದಾಳೆ ವಂದಿಸಿದರು.

> **ಈ ಹಿಂದಿನ ಮಹಿಳೆಯರು ತಾವು ತೊಡುವ ಉಡುಪುಗಳು, ಆಭರಣಗಳು, ವೇಷ-ಭೂಷಣಗಳು ನಮ್ಮ ಜಾನಪದ ಸಂಸ್ಕೃತಿಯನ್ನು ಬಿಂಬಿಸುತ್ತಿದ್ದವು. ಆದರೇ ಇಂದಿನ ಯಾಂತ್ರಿಕ ಜೀವನದಲ್ಲಿ ಅವುಗಳೆಲ್ಲ ಬದಲಾವಣೆಗೊಂಡಿವೆ. ಜನಪದರು ಆಯಾ ಸ್ಥಳ ಅಲ್ಲಿಯ ನೆಲ, ಜಲ, ಭಾಷೆ, ಪರಿಸರ ಅಲ್ಲಿಯ ಜನ ಜೀವನ ಶೈಲಿ ವೃತ್ತಾಂತಗಳನ್ನು ತಮ್ಮ ಹಾಡುಗಳ ಮೂಲಕ ಒಗಟುಗಳ ಮೂಲಕ ವ್ಯಕ್ತಪಡಿಸುತ್ತಿದ್ದರು.**
>
> **-ಶ್ರೀಮತಿ ಪಾರ್ವತಿ ಸೋನಾರೆ**
> **ಕರ್ನಾಟಕ ಸರಕಾರಿ ನೌಕರರ ಮಹಿಳಾ ಘಟಕದ ಜಿಲ್ಲಾ ಅಧ್ಯಕ್ಷೆ**

> **ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಚಾರ್ಯ ಪ್ರೊ. ಮನೋಜಕುಮಾರ ಕುಲಕರ್ಣಿ ಅವರು ಮಾತನಾಡಿ, ಆಧುನಿಕ ಬದಲಾವಣೆಯ ಭರಾಟೆಯಲ್ಲಿ ನಾವು ಜೀವನವನ್ನು ಸಾಗಿಸುತ್ತಿದ್ದೇವೆ. ಒತ್ತಡದ ಬದುಕಿನಿಂದ ಶಾಂತಿ ನೆಮ್ಮದಿ ಕಳೆದುಕೊಂಡಿದ್ದೇವೆ. ಅವುಗಳನ್ನು ಪಡೆಯಲು ಜಾನಪದ ಹಾಡು ಆಲಿಸಬೇಕು. ಜಾನಪದ ಆಟಗಳನ್ನು ವಿಕ್ಷಿಸಬೇಕೆಂದ ಅವರು ಮಹಿಳೆಯರಿಂದಲೇ ಜಾನಪದ ಕಲೆ ಉಳಿಸಲು ಸಾಧ್ಯ ಎಂದರು.**

## ಪರೀಕ್ಷೆಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಸನ್ಮಾನ

• **ಉದಯವಾಹಿನಿ, ಬೆಳಗಾವಿ**


ಉದಯವಾಹಿನಿ ಚಿತ್ರ

ನಗರದ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಜಿಪಂ, ಡಿಡಿಪಿಯು ಇಲಾಖೆ ವತಿಯಿಂದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ರಾಜ್ಯ ಮತ್ತು ಜಿಲ್ಲೆಗೆ ರ್‍ಯಾಂಕ್ ಪಡೆದುಕೊಂಡ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭ ಹಮ್ಮಿಕೊಳ್ಳಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಮೊಹಮ್ಮದ ರೋಷನ್ ಅವರು ಮಕ್ಕಳ ಸಾಧನೆ ಜಿಲ್ಲೆಗೆ ಕಿರ್ತಿ ತಂದಿದೆ. ಪಿ.ಯು.ಸಿ ಅನ್ನುವುದು ಮುಂದಿನ ಶಿಕ್ಷಣದ ಟರ್ನಿಂಗ್ ಪಾಯಿಂಟ್ ಇದ್ದಂತೆ ಕಲಿಕೆಯು ಎಂದಿಗೂ ಮುಗಿಯದ ಪ್ರಕ್ರಿಯೆಯಾಗಿದ್ದು ಸಾಧನೆ ಇಲ್ಲಿಗೆ ಮುಗಿಯಿತು ಎಂದುಕೊಳ್ಳದೇ ಮುಂದಿನ ಭವಿಷ್ಯ ಕಟ್ಟಲು ಪ್ರಜ್ವಲ ಭವಿಷ್ಯ ನಿರ್ಮಿಸಲು ಶ್ರಮ ವಹಿಸಿ ಎಂದರು. ಎಲ್ಲಾ ಕ್ಷೇತ್ರಗಳಲ್ಲಿ ಹೆಣ್ಣು ಮಕ್ಕಳು ಉತ್ತಮ ಸಾಧನೆ ಮಾಡುತ್ತಿದ್ದಾರೆ ಅದಕ್ಕೆ ಪೋಷಕರ ಸಹಕಾರ ತುಂಬಾ ಮುಖ್ಯವಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಭೀಮಾಶಂಕರ ಗುಳೆದ ಅವರು ಮಾತನಾಡಿದರು. ಮುಂದಿನ ಭವಿಷ್ಯಕ್ಕಾಗಿ ಇನ್ನು ಹೆಚ್ಚಿನ ಪ್ರಯತ್ನ ಮಾಡಿ ಉನ್ನತ ಹುದ್ದೆಗಳನ್ನು ಪಡೆದುಕೊಂಡು ದೇಶಕ್ಕೆ ಕೊಡುಗೆಯನ್ನು ನೀಡಬೇಕು ಎಂದು ಮಕ್ಕಳಿಗೆ ಕಿವಿ ಮಾತು ತಿಳಿಸಿದರು.

ಜಿಪಂ ಸಿಇಒ ರಾಹುಲ್ ಶಿಂಧೆ ಅವರು, ಇಂದು ಸತ್ಕಾರ ಮಾಡಿಸಿಕೊಳ್ಳುವ ನೀವು ಮುಂದಿನ ದಿನಗಳಲ್ಲಿ ಎತ್ತರಕ್ಕೆ ಬೆಳೆಯಬೇಕು ನಿಮ್ಮ ಸಾಧನೆ ಇತರೆ ಮಕ್ಕಳಿಗೂ ಪ್ರೇರೇಪಣೆ ನೀಡಲಿ ಎಂದು ಹಾರೈಸಿದರು. ಅಲ್ಲದೇ ಮಕ್ಕಳಿಗೆ ಪ್ರೋತ್ಸಾಹ ನೀಡಿದ ಪೋಷಕರಿಗೆ ಹಾಗೂ ಶಿಕ್ಷಣ ಇಲಾಖೆಯ ಸಿಬ್ಬಂದಿಗಳಿಗೆ ಅಭಿನಂದನೆಗಳನ್ನು ತಿಳಿಸಿದರು.

## ಸಾಮಾನ್ಯ ಪ್ರವೇಶ ಪರೀಕ್ಷೆ: ಪೂರ್ವಸಿದ್ಧತಾ ಸಭೆ

• **ಉದಯವಾಹಿನಿ, ಗದಗ**

ಜಿಲ್ಲೆಯಲ್ಲಿ ಏಪ್ರಿಲ್ 16 ಮತ್ತು 17ರಂದು ಜರುಗುವ ಸಾಮಾನ್ಯ ಪ್ರವೇಶ ಪರೀಕ್ಷೆಗಳು ನಡೆಯಲಿದ್ದು ಪರೀಕ್ಷೆಗಳನ್ನು ಸುಗಮವಾಗಿ, ಸುವ್ಯವಸ್ಥಿತವಾಗಿ ಜರುಗಿಸಲು ಕ್ರಮ ವಹಿಸಬೇಕೆಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಅವರು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆ ಕುರಿತು ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪರೀಕ್ಷಾ ಸಮಯದಲ್ಲಿ ಯಾವುದೇ ಅಕ್ರಮ, ಅವ್ಯವಹಾರ, ಲೋಪದೋಷಗಳಾಗದಂತೆ ಅಚ್ಚುಕಟ್ಟಾಗಿ ಪರೀಕ್ಷಾ ಕಾರ್ಯ ನಿರ್ವಹಿಸಬೇಕು. ಪರೀಕ್ಷಾ ಕಾರ್ಯಗಳಿಗೆ ನಿಯೋಜಿಸಿದ ಅಧಿಕಾರಿಗಳು ತಮಗೆ ನಿಗದಿಪಡಿಸಿದ ಕರ್ತವ್ಯಗಳನ್ನು ಶಿಸ್ತು ಮತ್ತು ಜವಾಬ್ದಾರಿಯಿಂದ ನಿರ್ವಹಿಸಬೇಕೆಂದು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

ಪರೀಕ್ಷಾರ್ಥಿಗಳು ಹಾಗೂ ಪರೀಕ್ಷೆಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಹೊರತುಪಡಿಸಿ ಇತರ ಯಾವುದೇ ವ್ಯಕ್ತಿ ಅಥವಾ ಐದು ಐದಕ್ಕಿಂತ ಹೆಚ್ಚು ಜನರು ಗುಂಪು ಕೂಡುವುದು, ಅಥವಾ ವ್ಯಕ್ತಿಗಳ ಗುಂಪುಗಳ ಪ್ರವೇಶವನ್ನು ಹಾಗೂ ಅನಧಿಕೃತ ವ್ಯಕ್ತಿಗಳಿಗೆ ಪರೀಕ್ಷಾ ಕೇಂದ್ರಗಳ ಪ್ರವೇಶವನ್ನು ನಿರ್ಬಂಧಿಸಿದೆ.


ಉದಯವಾಹಿನಿ ಚಿತ್ರ

ಈ ಪ್ರದೇಶ ವ್ಯಾಪ್ತಿಯಲ್ಲಿ ಬರುವ ಝರಾಕ್ಸ್ ಅಂಗಡಿ, ಸೈಬರ್ ಸೆಂಟರ್, ಬುಕ್‌ಸ್ಟಾಲ್, ಫೋಟೊ ಕಾಪಿಯರ್ಗಳನ್ನು ಬಂದು ಮಾಡಲು ಆದೇಶಿಸಿದೆ. ಪರೀಕ್ಷಾ ಕೇಂದ್ರಗಳಲ್ಲಿ ಮೊಬೈಲ್ ಫೋನ್ ಮತ್ತು ಇತರೇ ಸಂಪರ್ಕ ಸಲಕರಣೆಗಳನ್ನು ತರುವುದನ್ನು ನಿಷೇಧಿಸಲಾಗಿದೆ. ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯ ಒಳಗೆ ಯಾವುದೇ ರೀತಿಯ ಕೈಗಡಿಯಾರವನ್ನು ಕಟ್ಟಿಕೊಂಡು ತೆಗೆದುಕೊಂಡು ಹೋಗುವಂತಿಲ್ಲ. ಅಭ್ಯರ್ಥಿಗಳು ಪರೀಕ್ಷಾ ಸಮಯದಲ್ಲಿ ಪರೀಕ್ಷಾ ಕೊಠಡಿಯ ಒಳಗೆ ಯಾವುದೇ ಆಧುನಿಕ ಎಲೆಕ್ಟ್ರಾನಿಕ್ಸ್ ಉಪಕರಣಗಳು, ಮೊಬೈಲ್ ಫೋನ್ , ಬ್ಲೂಟೂಥ್, ಸ್ಲೈಡ್ ರೂಲ್ಸ್, ಕ್ಯಾಲ್ಕ್ಯುಲೇಟರ್ , ವೈಟ್ ಫ್ಲುಯಿಡ್ , ವೈರ್ಲೆಸ್ ಸೆಟ್ಸ್, ಪೇಪರ್ ಚೀಟಿ, ಬುಕ್/ ಪುಸ್ತಕ ಇತ್ಯಾದಿಗಳನ್ನು ತರುವುದನ್ನು ನಿಷೇಧಿಸಲಾಗಿದೆ.

**ಪ್ರತಿಬಂಧಕಾಜ್ಞೆ ಜಾರಿ**

**ಪರೀಕ್ಷಾ ಕೇಂದ್ರಗಳಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ಪರಿಮಿತಿಯೊಳಗೆ ಏಪ್ರಿಲ್ 16 ಮತ್ತು 17 ರಂದು ಬೆ 8.30 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಪ್ರತಿಬಂಧಕಾಜ್ಞೆ ಜಾರಿಗೊಳಿಸಲಾಗಿದೆ.**

## ನನ್ನ ಮತ ಮಾರಾಟಕ್ಕಿಲ್ಲ ಜಾಗೃತಿ ಅಭಿಯಾನ

• **ಉದಯವಾಹಿನಿ, ಕಲಬುರಗಿ**



ಉದಯವಾಹಿನಿ ಚಿತ್ರ

ನಗರದ ನೂತನ ವಿದ್ಯಾಲಯ ಪದವಿ ಮಹಾವಿದ್ಯಾಲಯದಲ್ಲಿ ಭಾರತೀಯ ಚುನಾವಣಾ ಸುಧಾರಣಾ ಹೋರಾಟ ಸಮಿತಿ ಕಲಬುರಗಿ ವತಿಯಿಂದ ಆಯೋಜಿಸಿದ್ದ 'ನನ್ನ ಮತ ಮಾರಾಟಕ್ಕಿಲ್ಲ- ಮತದಾರರ ಜಾಗೃತಿ ಆಂದೋಲನ' ಕಾರ್ಯಕ್ರಮಕ್ಕೆ ನೂತನ ವಿದ್ಯಾಲಯ ಪದವಿ ಕಾಲೇಜಿನ ನಿವೃತ್ತ ಪ್ರಾಚಾರ್ಯರಾದ ಪ್ರೊ. ಯು.ಜಿ.ಸರದೇಶಪಾಂಡೆ ಅವರು, ಚಾಲನೆ ನೀಡದರು.

ಕಳೆದೆರಡು ದಶಕದಿಂದ ಚುನಾವಣೆಗಳಲ್ಲಿ ಹಣಬಲ ಹೆಚ್ಚುತ್ತಿದ್ದು ಇದರಿಂದ ಆಡಳಿತ ವ್ಯವಸ್ಥೆಯಲ್ಲಿ ಭ್ರಷ್ಟಾಚಾರ ಹೆಚ್ಚಲು ಕಾರಣವಾಗುತ್ತಿದೆ.

ಚುನಾವಣೆಗಳಲ್ಲಿ ಕೋಟಿಗಟ್ಟಲೆ ಖರ್ಚು ಮಾಡಿ ಆಯ್ಕೆಯಾದ ಬಹುತೇಕ ಶಾಸಕರು ಸಂಸದರು ಹಣ ಮಾಡುವ ದಂದೆಯಲ್ಲಿಯೇ ತೊಡಗುತ್ತಿದ್ದಾರೆ, ಹೊರತು ಅವರಿಗೆ ಸಾಮಾಜಿಕ ಕಳಕಳಿ ಕಡಿಮೆಯಾಗುತ್ತಿದೆ, ಇತ್ತೀಚಿಗೆ ರಾಜಕಾರಣ ಉದ್ಯಮವಾಗಿ ಮಾರ್ಪಾಟಾಗುತ್ತಿರುವುದು ವಿಷಾದನೀಯ. ಲೋಕಸಭೆ ಹಾಗೂ ವಿಧಾನ ಸಭೆಗಳಲ್ಲಿ ಬರಬರುತ್ತಾ ಕ್ರಿಮಿನಲ್ ಆರೋಪ ಹಿನ್ನೆಲೆಯುಳ್ಳ ವರ ಸಂಖ್ಯೆ ಹೆಚ್ಚುತ್ತಿದ್ದು ಇದರಿಂದ ಪ್ರಜಾಪ್ರಭುತ್ವಕ್ಕೆ ಗಂಡಾಂತರ ಕಾದಿದೆ ಎಂದರು.

ಕಾರ್ಯಕ್ರಮದಲ್ಲಿ ಪ್ರಸ್ತಾವಿಕವಾಗಿ ಮಾತನಾಡಿದ ಭಾರತೀಯ ಚುನಾವಣಾ ಸುಧಾರಣಾ ಹೋರಾಟ ಸಮಿತಿ ಸಂಸ್ಥಾಪಕರಾದ ರಮೇಶ ಆರ್ ದುತ್ತರಗಿ ದೇಶದಲ್ಲಿ ಹಾಗೂ ರಾಜ್ಯದಲ್ಲಿ ಚುನಾವಣೆಗಳು ಮುಕ್ತ ಹಾಗೂ ಪಾರದರ್ಶಕವಾಗಿ ನಡೆದಾಗ ಮಾತ್ರ ಪ್ರಜಾಪ್ರಭುತ್ವ ಬಲಗೊಳ್ಳುತ್ತದೆ.

ಸಮೃದ್ಧ ಭಾರತ ನಿರ್ಮಾಣವಾಗುತ್ತದೆ. ದೇಶ ಕಟ್ಟುವಲ್ಲಿ ಯುವಕರ ಜವಾಬ್ದಾರಿ ಅತ್ಯಂತ ಪ್ರಮುಖವಾಗಿದ್ದು ಯುವಕರು ತಮ್ಮ ಜವಾಬ್ದಾರಿಯನ್ನು ಅರಿತುಕೊಂಡು ಸಮಾಜ -ದೇಶ ಕಟ್ಟುವ ಕೆಲಸವನ್ನು ಮಾಡಬೇಕು.

ಇವತ್ತು ಸಮಾಜದಲ್ಲಿ ಕೊಲೆ ಮೋಸ ವಂಚನೆ ಅನ್ಯಾಯ ಅತ್ಯಾಚಾರ ಭ್ರಷ್ಟಾಚಾರಗಳು ಹೆಚ್ಚುತ್ತಿದ್ದು ಇವುಗಳ ವಿರುದ್ಧ ಪ್ರಜ್ಞಾವಂತರು ಧ್ವನಿ ಎತ್ತಬೇಕಾಗಿದೆ. ಇಂದು ನಾವು ವಿಜ್ಞಾನ ತಂತ್ರಜ್ಞಾನದಲ್ಲಿ ಆಕಾಶದಷ್ಟು ಎತ್ತರಕ್ಕೆ ಏರಿದ್ದೇವೆ, ಆದರೆ ಸಮಾಜದಲ್ಲಿ ನೈತಿಕ ಮೌಲ್ಯಗಳು ಕುಸಿಯುತ್ತಿರುವುದು ವಿಷಾದನೀಯ.

> **ಇತ್ತೀಚಿಗೆ ಬರು ಬರುತ್ತಾ ಸಮಾಜದಲ್ಲಿ ನೈತಿಕ ಮೌಲ್ಯಗಳು ಕುಡಿಯುತ್ತಿದ್ದು, ಇವತ್ತಿನ ಯುವ-ಜನಾಂಗಕ್ಕೆ ಶಿಕ್ಷಣದ ಜೊತೆಗೆ ನೈತಿಕ ಮೌಲ್ಯಗಳನ್ನು ತಿಳಿಸುವುದು ಅಗತ್ಯವಾಗಿದೆ ಎಂದ ಸರದೇಶಪಾಂಡೆ ಅವರು, ಸ್ವಾಸ್ಥ ಸಮಾಜದ ನಿರ್ಮಾಣ ಮಾಡುವುದು ಪ್ರತಿ ನಾಗರಿಕರ ಆದ್ಯ ಕರ್ತವ್ಯವಾಗಬೇಕಾಗಿದೆ**
>
> **-ಪ್ರೊ. ಯು.ಜಿ.ಸರದೇಶಪಾಂಡೆ**

## ಯತ್ನಾಳ ವಿರುದ್ಧ ಪಂಚಮಸಾಲಿ ಮುಖಂಡರ ಕಿಡಿ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ವಿಜಯಪುರ**

ಬಿಜೆಪಿಯಿಂದ ಉಚ್ಚಾಟಿತ ಬಸನಗೌಡ ಪಾಟೀಲ್ ಯತ್ನಾಳ ಬೆನ್ನಿಗೆ ನಿಂತಿರುವ ಕೂಡಲಸಂಗಮ ಜಯಬಸವ ಮೃತ್ಯುಂಜಯ ಸ್ವಾಮಿಗಳ ವಿರುದ್ಧ ಪಂಚಮಸಾಲಿ ಮುಖಂಡರು ಗುಡುಗಿದ್ದಾರೆ.

ವಿಜಯಪುರದ ಬಿಜೆಪಿ ಪಂಚಮಸಾಲಿ ಸಮಾಜದ ವಿಜುಗೌಡ ಪಾಟೀಲ, ಸಂಜಯ ಪಾಟೀಲ ಕನಮಡಿ, ಡಾ.ಸುರೇಶ ಬಿರಾದಾರ, ಭೀಮಾಶಂಕರ ಹದನೂರ, ರವಿಕಾಂತ ಬಗಲಿ, ಕಾಸುಗೌಡ ಬಿರಾದಾರ, ಸಂದೀಪ ಪಾಟೀಲ ಮೊದಲಾದವರು ಜಂಟಿ ಪತ್ರಿಕಾಗೋಷ್ಠಿ ನಡೆಸಿ ಶ್ರೀಗಳ ವಿರುದ್ಧವೇ ವಾಗ್ದಾಳಿ ನಡೆಸುವುದರ ಜೊತೆಗೆ ಯತ್ನಾಳ ವಿರುದ್ಧವೂ ಕಿಡಿಕಾರಿದ್ದಾರೆ. ಇದಲ್ಲದೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಬೆನ್ನಿಗೆ ನಿಂತಿದ್ದೇವೆ ಎನ್ನುವ ಸಂದೇಶ ಕೂಡಾ ರವಾನಿಸಿದ್ದಾರೆ.

ಬಿಜೆಪಿ ಮುಖಂಡ ಸಂಜಯ ಪಾಟೀಲ ಕನಮಡಿ ಮಾತನಾಡಿ, ನಾನು ಬಿಜೆಪಿಯ ನಿಷ್ಠಾವಂತ ಕಾರ್ಯಕರ್ತ, ಹಿಂದೂತ್ವವನ್ನೇ ಉಸಿರಾಗಿಸಿಕೊಂಡ ನಾಯಕ. ಆದರೆ ಯತ್ನಾಳರ ಹಿಂದೆ ಇರುವ ಪಂಚಮಸಾಲಿ ಶ್ರೀಗಳು ತಾವು ಹಿಂದೂ ಅಲ್ಲ ಎಂದು ಹೇಳಿಕೊಂಡಿದ್ದಾರೆ.

ಹಿಂದೂ ಒಂದೆಡೆ ಇರಲಿ ವೀರಶೈವ ಎಂಬ ಪದವನ್ನೇ ತಮ್ಮ ಪೀಠದ ಮುಂದೆ ಬಳಸಿಕೊಳ್ಳುತ್ತಿಲ್ಲ ಎಂದರು.

ಹಿಂದೂಧರ್ಮದ ಆಚರಣೆಗಳನ್ನು ಸಹ ಖಂಡಿಸಿದ್ದ ಪಂಚಮಸಾಲಿ ಶ್ರೀಗಳು ಹಿಂದೂ ಧರ್ಮವನ್ನು ಒಡೆದು ಪ್ರತ್ಯೇಕ ಲಿಂಗಾಯತ ಧರ್ಮದ ಹೋರಾಟದಲ್ಲಿ ಮುಂಚೂಣಿ ವಹಿಸಿ ಕಾಂಗ್ರೆಸ್ ನಾಯಕರಿಗೆ ಸಾಥ್ ನೀಡಿದ್ದರು.

ಈ ಹಿಂದೆ ವಿನಾಕಾರಣ ಕಲ್ಲು ನಾಗರಕ್ಕೆ ಹಾಲೆರೆಯುವುದು ಬೇಡ ಎಂದಿದ್ದ ಶ್ರೀಗಳು, ಈಗ ತಾವು ಬೆಂಬಲ ನೀಡುತ್ತಿರುವ ನಾಯಕರ ಭಾವಚಿತ್ರಕ್ಕೆ ದೊಡ್ಡ ಪ್ರಮಾಣದಲ್ಲಿ ಹಾಲೆರೆಯುವುದನ್ನು ಏಕೆ ನಿಲ್ಲಿಸಲು ಹೋಗಲಿಲ್ಲ ಎಂದು ಖಾರವಾಗಿ ಪ್ರಶ್ನಿಸಿದರು.

### ಹೊಲದಲ್ಲಿ ಮಹಿಳೆಯ ಮೃತದೇಹ ಪತ್ತೆ

• **ಉದಯವಾಹಿನಿ, ಕಮಲಾಪುರ**

ತಾಲ್ಲೂಕಿನ ಕಿಣ್ಣಿ ಸಡಕ್ ಗ್ರಾಮದ ಸೀಮಾಂತರದಲ್ಲಿರುವ ಹೊಲವೊಂದರ ಬಂದಾರಿನಲಿದ್ದ ತೊಗರಿಯ ಕೊಯ್ಲಿಯಲ್ಲಿ ಅಪರಿಚಿತ ಮಹಿಳೆಯ ಸುಟ್ಟು ಹೋದ ಸ್ಥಿತಿಯಲ್ಲಿದ್ದ ಮೃತ ದೇಹ ಪತ್ತೆಯಾಗಿದೆ.

ಈ ಕುರಿತು ಹೊಲದ ಮಾಲೀಕ ನೀಲಕಂಠ ಪಂಚಾಳ ಎಂಬುವವರು ಕಮಲಾಪುರ ಠಾಣೆಗೆ ದೂರು ನೀಡಿದ್ದಾರೆ, ಯಾರೋ ದುಷ್ಕರ್ಮಿಗಳು ಯಾವುದೋ ದುರುದ್ದೇಶದಿಂದ ಅಪರಿಚಿತ ಹೆಣ್ಣು ಮಗಳಿಗೆ ಎಲ್ಲಿಯೋ ಕೊಲೆ ಮಾಡಿ ಸಾಕ್ಷಿ ನಾಶಮಾಡುವ ಉದ್ದೇಶದಿಂದ ನಮ್ಮ ಹೊಲದ ತೊಗರಿಯ ಕೊಯ್ಲಿಯಲ್ಲಿ ಮಹಿಳೆಯ ಮೃತ ದೇಹ ಸುಟ್ಟು ಹಾಕಿರುತ್ತಾರೆ ಎಂದು ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

### ಫುಟ್‌ಪಾತ್ ಅತಿ ಕ್ರಮಣ ತೆರವಿಗೆ ಮನವಿ

• **ಉದಯವಾಹಿನಿ, ಗುಳೇದಗುಡ್ಡ**

ನಗರದ ಹೊರವಲಯದಲ್ಲಿನ ದ್ವಿಪಥ ರಸ್ತೆಯ ಎರಡೂ ಬದಿಯ ಪಾದಾಚಾರಿಗಳಿಗಾಗಿ ನಿರ್ಮಿಸಿದ ಪುಟಪಾತ್ ಮೇಲೆ ಕಟ್ಟಡ, ತಾತ್ಕಾಲಿಕ ಶೆಡ್ಡುಗಳನ್ನು ನಿರ್ಮಿಸಿ ಫುಟ್‌ಪಾತ್ ಅತಿಕ್ರಮಣ ಮಾಡಿದ್ದು ಇದನ್ನು ತೆರಗೊಳಿಸುಂತೆ ಆಗ್ರಹಿಸಿ ನಗರ ಸುಧಾರಣಾ ಸಮಿತಿ ತಹಶೀಲ್ದಾರ ಮಂಗಳಾ ಎಂ ಅವರಿಗೆ ಮನವಿ ಸಲ್ಲಿಸಿದರು.

ಪಟ್ಟಣ ಬಾದಾಮಿ ನಾಕಾದಿಂದ ಪ್ರಾರಂಭಗೊಂಡು ಭಂಡಾರಿ ಕಾಲೇಜ ವೃತ್ತದ ವರೆಗೂ ರಸ್ತೆಯ ಎರಡೂ ಬದಿಯಲ್ಲಿ ಕಾಲೇಜುಗಳಿವೆ. ವಿದ್ಯಾರ್ಥಿಗಳು ಮುಖ್ಯ ರಸ್ತೆಯ ಮೇಲೆ ಶಾಲೆಗೆ ತೆರಳುತ್ತಿದ್ದು, ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆ ಉಂಟಾಗುತ್ತದೆ.

ಫುಟ್‌ಪಾತ್ ಅತಿಕ್ರಮಣವನ್ನು ಅತೀ ಶೀಘ್ರವಾಗಿ ತೆರವುಗೊಳಿಸಿ ಮತ್ತು ದುರಸ್ತಿಗೊಳಿಸಿ ಪಾದಚಾರಿಗಳು ನಡೆದಾಡಲು ಅನುಕೂಲ ಮಾಡಿಕೊಡಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

### ಗ್ಯಾರಂಟಿ ಯೋಜನೆಗಳಿಂದ ಸರ್ಕಾರ ದಿವಾಳಿ

• **ಉದಯವಾಹಿನಿ, ರಾಯಬಾಗ**

ರಾಜ್ಯ ಸರ್ಕಾರವು ಗ್ಯಾರಂಟಿ ಯೋಜನೆಗಳಿಂದ ದಿವಾಳಿಯಾಗಿದೆ. ಸರ್ಕಾರವು ಭ್ರಷ್ಟಾಚಾರದಲ್ಲಿ ಮುಳಗಿದ್ದರಿಂದ ಅಭಿವೃದ್ಧಿಗಾಗಿ ಹಿನ್ನಡೆ ಉಂಟಾಗಿದೆ. ಇದರಿಂದ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ' ಎಂದು ಶಾಸಕ ಡಿ.ಎಂ.ಐಹೊಳೆ ಅವರು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಗುರುವಾರ ತಾಲ್ಲೂಕಿನ ಬೆಂಡವಾಡ ಗ್ರಾಮದಲ್ಲಿ ಲೋಕೋಪಯೋಗಿ ಇಲಾಖೆಯಡಿ ಮಂಜೂರಾದ 1 ಕೋಟಿ ಅನುದಾನದಲ್ಲಿ ಭಂಡವಾಡ- ಚಿಕ್ಕೋಡಿ ರೈಲ್ವೆ ಸ್ಟೇಷನ್ ರಸ್ತೆ ಕಾಮಗಾರಿ ಹಾಗೂ ಮಂಟೂರ ಗ್ರಾಮದಲ್ಲಿ ಸಮಾಜ ಕಲ್ಯಾಣ ಇಲಾಖೆಯಡಿ ಮಂಜೂರಾದ 20 ಲಕ್ಷ ಅನುದಾನದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ರಾಯಬಾಗ ಮತಕ್ಷೇತ್ರದ ಅಭಿವೃದ್ಧಿಗಾಗಿ ಸದಾ ಕಂಕಣಬದ್ಧವಾಗಿದ್ದು, ಎಲ್ಲಾ ಗ್ರಾಮಗಳಿಗೆ ಮೂಲಸೌಲಭ್ಯ ಕಲ್ಪಿಸಲಾಗುವುದು ಎಂದು ತಿಳಿಸಿದರು.

ಎಇಇ ಆರ್.ಬಿ.ಮನವಡ್ಡರ, ರಾಜೇಶ ಡಂಗ, ಶೋಭಾ ಮೇಗಾಡೆ, ಸುರೇಶ ಚೌಗುಲೆ, ಅಪ್ಪು ಬಾನೆ. ನಿಂಗಪ್ಪ ಪಕಾಂಡಿ, ಸಂಗಪ್ಪಾ ಬೆನ್ನಾಳೆ, ರೇವಣು ದುಪಾದುಳೆ, ಡಾ.ಅಪ್ಪಯ್ಯ ನಾಯಿಕ, ಮಹಾದೇವ ಸಾರಾಪೂರೆ, ಉಮೇಶ ಪೂಜೇರಿ, ಅಪ್ಪಾಸಾಬ ದೇಸಾಯಿ, ರಾವಸಾಬ ದೇಸಾಯಿ, ಭೀಮು ಹಳವರ, ಉದಯ ಉಪ್ಪಾರ, ಮುತ್ತಪ್ಪ ನಾಯಿಕ, ಗುರುನಾಥ ಹಂಜಿ, ರಾವಸಾಬ ಮೇಗಾಡೆ, ಶಿವಾನಂದ ಉಪ್ಪಾರ ಸೇರಿ ಅನೇಕರು ಇದ್ದರು.

## ಎಸ್.ಸಿ.ಪಿ. ಅನುದಾನ ದುರುಪಯೋಗ ಆರೋಪ: ತನಿಖೆ ಸೂಚನೆ

• **ಉದಯವಾಹಿನಿ, ತರೀಕೆರೆ**


ಉದಯವಾಹಿನಿ ಚಿತ್ರ

ಎಸ್.ಸಿ.ಪಿ.ಮತ್ತು ಟಿ.ಎಸ್.ಪಿ. ಅನುದಾನವನ್ನು ಪರಿಶಿಷ್ಟ ಜನಾಂಗದವರು ವಾಸಿಸುವ ಕಾಲೊನಿಗಳಿಗೆ ಬಳಸದೆ ಅನ್ಯ ಸ್ಥಳಕ್ಕೆ ಬಳಕೆಯಾಗಿರುವ ಬಗ್ಗೆ ಸ್ಥಳ ಪರಿಶೀಲಿಸಿ, ಸಮಗ್ರ ವರದಿ ಸಲ್ಲಿಸುವಂತೆ ಉಪ ವಿಭಾಗಾಧಿಕಾರಿ ಕೆ.ಜಿ. ಕಾಂತರಾಜ್ ಜಿಲ್ಲಾ ಪಂಚಾಯಿತಿ ಎಂಜಿನಿಯರ್ ವಿಭಾಗದ ಎಇಇಗೆ ಸೂಚಿಸಿದರು.

ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ನಡೆದ ತರೀಕೆರೆ ಉಪವಿಭಾಗ ಮಟ್ಟದ ಪ.ಜಾ/ಪ.ವ. (ದೌರ್ಜನ್ಯ ನಿಯಂತ್ರಣ) ಜಾಗೃತಿ ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಂಘಟನೆಯ ಮುಖಂಡ ದೋರನಾಳು ಸುನಿಲ್ ಮಾತನಾಡಿ, 2020-21ರಲ್ಲಿ ಎಸ್.ಇ.ಪಿಯ ಲಕ್ಷಾಂತರ ರೂ. ಹಣದಲ್ಲಿ 30ಕ್ಕೂ ಹೆಚ್ಚು ಹೈಮಾಸ್ಟ್ ದೀಪಗಳನ್ನು ತರೀಕೆರೆ ವ್ಯಾಪ್ತಿಯ ಪರಿಶಿಷ್ಟರ ಕಾಲೊನಿಗಳಿಗೆ ಅಳವಡಿಸಬೇಕಾಗಿತ್ತು. ಆದರೆ, ಎರಡು ಗ್ರಾಮ ಹೊರತುಪಡಿಸಿ ಇನ್ನುಳಿದ ಎಲ್ಲಾ ದೀಪಗಳನ್ನು ಇತರೆ ಸಮಾಜದವರು ವಾಸಿಸುವ ಸ್ಥಳಗಳಲ್ಲಿ ಅಳವಡಿಸಲಾಗಿದೆ ಎಂದು ಸಭೆಯಲ್ಲಿ ಆರೋಪಿಸಿದ್ದರು. ಸಮಿತಿ ಸದಸ್ಯ ಎಸ್.ಎನ್. ಸಿದ್ರಾಮಪ್ಪ ಈ ಬಗ್ಗೆ ಸಮರ್ಪಕ ತನಿಖೆ ನಡೆಸಿ, ತಪ್ಪಿತಸ್ಥ ಅಧಿಕಾರಿ ಮತ್ತು ಗುತ್ತಿಗೆದಾರರ ವಿರುದ್ಧ ಕ್ರಮಕ್ಕೆಗೊಳ್ಳಬೇಕೆಂದು ಧ್ವನಿಗೂಡಿಸಿದರು. ಶೀಘ್ರದಲ್ಲಿಯೇ ವರದಿ ಪಡೆದು ಕ್ರಮ ಜರುಗಿಸಲಾಗುವುದೆಂದು ಎ.ಸಿ ಕಾಂತರಾಜ್ ಹೇಳಿದರು.

ದಸಂಸ ಮುಖಂಡ ಎಚ್.ವಿ. ಬಾಲರಾಜ್ ಮಾತನಾಡಿ, ಖುಷಿಪುರ ಸರ್ವೆ ನಂ. 6ರಲ್ಲಿ ನಕಾಶೆ ಕಂಡ ಕಾಲು ದಾರಿಯನ್ನು ಅನ್ಯರು ಒತ್ತುವರಿ ಮಾಡಿದ್ದು, ಇದನ್ನು ತೆರವುಗೊಳಿಸಲು ಕೊಡಿ ಎಂದು ಮನವಿ ಮಾಡಿದರೂ ಯಾವುದೇ ಕ್ರಮಕೈಗೊಂಡಿಲ್ಲ ಎಂದರು. ಇದಕ್ಕೆ ಎ.ಸಿ ಕಾಂತರಾಜ್. ಎಡಿಎಲ್ಆರ್ ಮತ್ತು ಕಂದಾಯ ಅಧಿಕಾರಿಗಳಿಗೆ ಶೀಘ್ರದಲ್ಲಿಯೇ ದಿನಾಂಕ ನಿಗದಿ ಮಾಡಿಕೊಂಡು ಒತ್ತುವರಿ ತೆರವುಗೊಳಿಸಲು ಸೂಚಿಸಿದರು.

## ಬೀದಿಬದಿ ವ್ಯಾಪಾರಿಗಳಿಗೆ ತಕ್ಷಣ ಸೌಲಭ್ಯ ಕಲ್ಪಿಸಿ: ಡಿಸಿ

• **ಉದಯವಾಹಿನಿ, ಶಿವಮೊಗ್ಗ**

ಗಾಂಧಿಬಜಾರ್ ಸೇರಿದಂತೆ ನಗರದ ಜನನಿಬಿಡ ಪ್ರದೇಶ ಹಾಗೂ ರಸ್ತೆಯ ಇಕ್ಕೆಲಗಳಲ್ಲಿ ಬೀದಿಬದಿ ವ್ಯಾಪಾರಿಗಳು ವ್ಯವಹಾರ ನಡೆಸುತ್ತಿರುವ ಕಾರಣ ಸುಗಮ ಸಂಚಾರ ಮತ್ತು ಪಾದಚಾರಿಗಳ ಓಡಾಟಕ್ಕೆ ತೀವ್ರ ಅಡಚಣೆ ಆಗುತ್ತಿರುವ ಬಗ್ಗೆ ಸಾರ್ವಜನಿಕದಿಂದ ಬರುತ್ತಿರುವ ದೂರುಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಉದ್ದೇಶಿಸಲಾಗಿದೆ ಎಂದು ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ಹೇಳಿದರು.



ಬೀದಿಬದಿ ವ್ಯಾಪಾರಿಗಳಿಗೆ ಮೂಲ ಸೌಕರ್ಯಗಳು ಹಾಗೂ ಸಮಸ್ಯೆಯ ಪರಿಹಾರಕ್ಕೆ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ನಗರದಲ್ಲಿ ಬುಧವಾರ ಏರ್ಪಡಿಸಿದ್ದ ಸಮಾಲೋಚನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಗಾಂಧಿ ಬಜಾರಿನ ರಸ್ತೆಯ ಇಕ್ಕೆಲಗಳಲ್ಲಿ ವ್ಯವಹರಿಸುತ್ತಿರುವ ವ್ಯಾಪಾರಿಗಳು ಮುಂದಿನ 15 ದಿನಗಳಲ್ಲಿ ಈಗಾಗಲೇ ಸೂಚಿಸಲಾದ ಸ್ಥಳಕ್ಕೆ ಸ್ಥಳಾಂತರಗೊಳ್ಳುವಂತೆ ಸೂಚಿಸಿದರು.

ನಗರದ ಪ್ರಮುಖ ರಸ್ತೆಗಳಲ್ಲಿ ಬೀದಿಬದಿ ವ್ಯಾಪಾರ ನಡೆಸುತ್ತಿರುವವರ ಗುರುತಿಸಿ. ಅವರಿಗೆ ಅನುಕೂಲವಾಗುವಂತೆ ಲಭ್ಯವಾಗಬಹುದಾದ ಕನ್ಸರ್‌ವೆನ್ಸಿಗಳನ್ನು ಅಭಿವೃದ್ಧಿಪಡಿಸಿ, ನೀರು, ಶೌಚಾಲಯ ಮತ್ತು ವಿದ್ಯುತ್ ಸೌಕರ್ಯಗಳನ್ನು ಮುಂದಿನ 15 ದಿನಗಳೊಳಗಾಗಿ ಒದಗಿಸುವಂತೆ ಮಹಾನಗರಪಾಲಿಕೆಯ ಆಯುಕ್ತರಿಗೆ ಜಿಲ್ಲಾಧಿಕಾರಿ ಸೂಚಿಸಿದರು.


ಹಣ್ಣು-ಹೂವಿನ ವ್ಯಾಪಾರಿಗಳನ್ನು ಸಮೀಪದ ಕನ್ಸರ್‌ವೆನ್ಸಿ ರಸ್ತೆಗಳಿಗೆ ಹಾಗೂ ನಗರದ ಗೌರವ ಲಾಡ್ಜ್ ಸಮೀಪದ ನೂತನವಾಗಿ ನಿರ್ಮಿಸಲಾದ ಸಂಕೀರ್ಣಕ್ಕೆ ಸ್ಥಳಾಂತರಗೊಳ್ಳುವಂತೆ ಸೂಚಿಸಿದ ಅವರು. ನಗರದಲ್ಲಿ 14 ಸ್ಥಳಗಳ ಗುರುತಿಸಲಾಗಿದ್ದು, ಅವುಗಳನ್ನು ಅಭಿವೃದ್ಧಿಪಡಿಸಿ, ಬೀದಿಬದಿ ವ್ಯಾಪಾರಿಗಳ ಅನುಕೂಲಕ್ಕೆ ಒದಗಿಸಲು ಸೂಚಿಸಲಾಗಿದೆ ಎಂದರು. ಬೀದಿಬದಿ ವ್ಯಾಪಾರಿಗಳ ಸುರಕ್ಷತೆ ಹಾಗೂ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಶೀಘ್ರದಲ್ಲಿ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳ ಮತ್ತೊಂದು ಸಭೆ ಆಯೋಜಿಸಲಾಗುವುದು ಎಂದರು. ಉತ್ಪತ್ತಿ ಆದ ಕಸವನ್ನು ವ್ಯಾಪಾರಿಗಳು ಬೇರ್ಪಡಿಸಿ ಕೊಡಬೇಕು. ಎಲ್ಲೆಂದರಲ್ಲಿ ಕಸ ಬಿಸಾಕಬಾರದು ಎಂದು ಮನವಿ ಮಾಡಿದರು.

> **ಹೈಟೆನ್ಷನ್ ವಿದ್ಯುತ್ ತಂತಿ ಹಾದು ಹೋಗಿರುವ ಪ್ರದೇಶ ಹಾಗೂ ಫ್ಲೈಓವರ್ ಕೆಳಭಾಗದಲ್ಲಿ ಬೀದಿಬದಿ ವ್ಯಾಪಾರಿಗಳಿಗೆ ಸೌಲಭ್ಯ ಕಲ್ಪಿಸಿಕೊಡಬಹುದಾದ ಸಾಧ್ಯತೆಗಳ ಬಗ್ಗೆಯೂ ಪರಿಶೀಲಿಸುವಂತೆ ಸೂಚಿಸಿದ ಅವರು. ಬೀದಿಬದಿ ವ್ಯಾಪಾರಿಗಳಿಂದಲೂ ಅಹವಾಲುಗಳ ಆಲಿಸಿ, ಆದ್ಯತೆಯ ಮೇರೆಗೆ ಸಮಸ್ಯೆ ಇತ್ಯರ್ಥ ಪಡಿಸಲು ಕ್ರಮ ವಹಿಸುವಂತೆಯೂ ಸಲಹೆ ನೀಡಿದರು.**

### ಜನರು ಜೀವ ಭಯದಲ್ಲಿ ಇದ್ದರು ಸ್ಪಂದನೆ ನೀಡದ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು

# ಕಿಲ್ಲರ್ ಸೇತುವೆ: ಜೀವ ಭಯದಲ್ಲೆ ಸಂಚಾರ

• **ಉದಯವಾಹಿನಿ, ಬೀದರ್**


ಉದಯವಾಹಿನಿ ಚಿತ್ರ

ಗ್ಯಾರಂಟಿ ಯೋಜನೆಗಳು ಯಾರಿಗ ಬೇಕ್ರೀ ಇಲ್ಲಿ ಜೀವ ಹೋಗುತ್ತಿದೆ ನಿಮ್ಮ ಅಧಿಕಾರಿಗಳಿಗೆ ಇಲ್ಲಿ ಮೊದಲು ಕಳಿಸಿ ಎಂದು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿತ್ತಿರುವ ಗ್ರಾಮಸ್ಥರು.

ಹೌದು ಬೀದರ್ ಜಿಲ್ಲೆಯ ಹುಮನಾಬಾದ್ ಕ್ಷೇತ್ರ ಹಿಲಾಲಪುರ ಹಾಗೂ ಬೀದರ್ ದಕ್ಷಿಣ ಕ್ಷೇತ್ರದ ರಂಜೋಳಖೇಣಿ ಗ್ರಾಮದ ಮಧ್ಯೆ ಬರುವ ಸೇತುವೆ ಇದು. ಇದು ಕಾರಂಜಾ ಜಲಾಶಯದ ಹಿನ್ನೀರಿನ ಪ್ರದೇಶದ ಮಧ್ಯೆ ಅಡ್ಡಲಾಗಿ ನಿರ್ಮಿಸಿರುವ ಸೇತುವೆ ಬಿರುಕು ಬಿಟ್ಟಿರುವುದರಿಂದ ಸಾರ್ವಜನಿಕರು ಆತಂಕಕ್ಕೆ ಒಳಗಾಗಿದ್ದಾರೆ.

ಅಪಾಯಕ್ಕೆ ಆಹ್ವಾನ ನೀಡುತ್ತಿರುವ ಕಾರಂಜಾ ಹಿನ್ನೀರಿಗೆ ಅಡ್ಡಲಾಗಿ ನಿರ್ಮಿಸಿರುವ ಸೇತುವೆ ಸುಮಾರು 25 ವರ್ಷಗಳ ಹಿಂದೆ 1997 ರಲ್ಲಿ ನಿರ್ಮಿಸಲಾಗಿದ್ದ ಸೇತುವೆ ಇದಾಗಿದೆ.

ಕಟ್ಟಿರೊ ಸೇತುವೆ ಪಿಲ್ಲರ್ ಹಾಗೂ ಸೇತುವೆ ನಡುವೆ ದೊಡ್ಡ ಮಟ್ಟದ ಬಿರುಕು ಬಿಟ್ರು ಕ್ರಮಕ್ಕೆ ಮುಂದಾಗದ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳ ವಿರುದ್ಧ ಸುತ್ತಲಿನ ಗ್ರಾಮಗಳ ಜನರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹುಮನಾಬಾದ್ ಹಾಗೂ ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಿಗೆ ಸೇತುವೆ ಸಮಸ್ಯೆ ಬಗ್ಗೆ ತಿಳಿಸಿದ ತಕ್ಷಣ ಅಧಿಕಾರಿಗಳಿಗೆ ಸೇತುವೆ ರಿಪೇರಿ ಮಾಡಲು ತಿಳಿಸಿ ಮೂರು ತಿಂಗಳು ಕಳೆದರೂ ಕ್ಯಾರೆ ಎನ್ನದ ಅಧಿಕಾರಿಗಳ ಬೇಜವಾಬ್ದಾರಿತನ ಎದ್ದು ಕಾಣುತ್ತಿದೆ. ಈ ಸೇತುವೆ ಯಿಂದ ಮನ್ನಾಏಖೇಳ್ಳಿ - ಹಳ್ಳಿಖೇಡ್, ಹುಮನಾಬಾದ್, ಬೀದರ್ ಮಾರ್ಗ ಸಂಪರ್ಕಿಸುವ ಅನೇಕ ಗ್ರಾಮಗಳಿಗೆ ಸಂಪರ್ಕಿಸುವ ಮುಖ್ಯ ಸೇತುವೆಯಾಗಿದೆ ನಿತ್ಯ ಸಾವಿರಾರು ವಾಹನಗಳು ಓಡಾಟ ನಡೆಯುತ್ತೆ. ಸೇತುವೆ ನಡುವೆ 3 ಕಡೆಗಳಲ್ಲಿ ದೊಡ್ಡ ಗಾತ್ರದ ಬಿರುಕು ಉಂಟಾಗಿದೆ. ಕಬ್ಬಿಣದ ನಡುವೆ ಸಪೋರ್ಟ್‌ಗೆಂದು ಹಾಕಲಾಗದ ಕಾಂಕ್ರಿಟ್ ಕಿತ್ತುಹೋಗಿದ್ದು, ಕಬ್ಬಿಣ ಬೇರ್ಪಟ್ಟಿದೆ. ಯಾವುದೇ ಕ್ಷಣದಲ್ಲಾದರೂ ಅಪಘಾತ ಸಂಭವಿಸುವ ಸಾಧ್ಯತೆ ಇದೆ.

ಸದಾಕಾಲ ನೀರು ತುಂಬಿರೋ ಕಾರಂಜಾ ಹಿನ್ನೀರು, ಸ್ವಲ್ಪ ಯಾಮಾರಿದ್ರು ಜೀವಹಾನಿಯಾಗುವುದು ಖಚಿತ. ಈ ಲೋಕೋಪಯೋಗಿ ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು, ನಿಮ್ಮ ಗ್ಯಾರಂಟಿ ಯೋಜನೆಗಳು ಯಾರಿಗ ಬೇಕ್ರೀ ಮೊದಲು ಜೀವ ಉಳಿಸಿ ಸೇತುವೆ ರಿಪೇರಿ ಮಾಡಿಸಿ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಳಪೆ ಗುಣಮಟ್ಟದ ನಿರ್ಮಾಣ ಹಾಗೂ ನಿರ್ವಹಣೆ ಕೊರತೆಯಿಂದ ಸೇತುವೆ ನಡುವೆ ಬಿರುಕುಬಿಟ್ಟಂತಾಗಿದೆ. ದ್ವಿಚಕ್ರದಲ್ಲಿ ಓಡಾಡುವ ಜನ ಬಿರುಕು ಬಿಟ್ಟಿರುವ ಸೇತುವೆಯಲ್ಲಿ ಸಂಚರಿಸಲು ಹೆದರಿಕೊಳ್ಳುವಂತಹ ಪರಿಸ್ಥಿತಿ ಇದೆ. ಸರಕು ವಾಹನಗಳು ಅಥವಾ ಭಾರೀ ಗಾತ್ರದ ವಾಹನಗಳು ಬ್ರಿಡ್ಜ್ ದಾಟುವಾಗ ಅನಾಹುತ ಹೆಚ್ಚಾಗುವ ಅಪಾಯ ಎದ್ದುತೋರುತ್ತಿದೆ. ಕೂಡಲೇ ಅಧಿಕಾರಿಗಳು ಎಚ್ಚೆತ್ತುಕೊಳ್ಳಬೇಕಿದೆ.

> ■ **ಜನರು ಜೀವ ಭಯದಲ್ಲಿ ಇದ್ದರು ಸ್ಪಂದನೆ ನೀಡದ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು**
> ■ **ಬೀದರ್ ಜಿಲ್ಲೆಯ ಹುಮನಾಬಾದ್ ಕ್ಷೇತ್ರ ಹಿಲಾಲಪುರ ಹಾಗೂ ಬೀದರ್ ದಕ್ಷಿಣ ಕ್ಷೇತ್ರದ ರಂಜೋಳಖೇಣಿ ಗ್ರಾಮದ ಮಧ್ಯೆ ಬರುವ ಸೇತುವೆ**
> ■ **ನಿಮ್ಮ ಗ್ಯಾರಂಟಿ ಯೋಜನೆಗಳು ಯಾರಿಗ ಬೇಕ್ರೀ ಮೊದಲು ಜೀವ ಉಳಿಸಿ ಸೇತುವೆ ರಿಪೇರಿ ಮಾಡಿಸಿ!**

## ಗ್ರಾಮನೈರ್ಮಲ್ಯ ಯೋಜನೆಗೆ ಒಡಂಬಡಿಕೆ ಕಾರ್ಯಾಗಾರ

• **ಉದಯವಾಹಿನಿ, ಪುತ್ತೂರು**

ಗ್ರಾ.ಪಂ.ಗಳಿಂದ ಎಂಆರ್‌ಎಫ್ ಘಟಕಗಳಿಗೆ ಒಣ ತ್ಯಾಜ್ಯ ಪೂರೈಕೆ ಮಾಡಲು ನಿರ್ದಿಷ್ಟ ದಿನ ನಿಗದಿ ಮಾಡುವ ಬಗ್ಗೆ, ಕಸ ಸಾಗಾಟದ ವಾಹನ ಓಡಾಟದ ರೂಟ್ ಮ್ಯಾಪ್ ನಿರ್ಧಾರದ ಕುರಿತಂತೆ ಗ್ರಾ.ಪಂ. ಅಧ್ಯಕ್ಷ, ಪಿಡಿಓಗಳ ಸಭೆ ಕರೆಯುವಂತೆ ದ.ಕ.ಜಿ.ಪಂ. ಮುಖ್ಯ ಕಾರ್ಯನಿರ್ವಹಣ ಅಧಿಕಾರಿ ಡಾ। ಆನಂದ್ ಕೆ ಹೇಳಿದರು.

ಪುತ್ತೂರು ಪುರಭವನದಲ್ಲಿ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಸಮಗ್ರ ಘನತ್ಯಾಜ್ಯ ನಿರ್ವಹಣ ಕೇಂದ್ರದ ಮೂಲಕ ಒಣತ್ಯಾಜ್ಯ ನಿರ್ವಹಣೆಗಾಗಿ ಒಡಂಬಡಿಕೆ ನಡೆಸುವ ಸಮಾಲೋಚನ ಸಭೆ ಹಾಗೂ ಗ್ರಾ.ಪಂ. ಗಳಲ್ಲಿ ಗ್ರಾಮ ನೈರ್ಮಲ್ಯ ಯೋಜನೆಗಳನ್ನು ತಯಾರಿಸುವ ತರಬೇತಿ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ಎಂಆರ್‌ಎಫ್ ಘಟಕ ಕಸ ಸಾಗಾಟ ವಾಹನ ಬರುವ ದಿನ ಆಯಾ ಗ್ರಾ.ಪಂ.ಗೆ ತಿಳಿದಿರಬೇಕು. ಇಲ್ಲದಿದ್ದರೆ ಕಸ ಅಲ್ಲೇ ಬಾಕಿಯಾಗಬಹುದು. ಎಲ್ಲಾ ಗ್ರಾ.ಪಂ.ಗಳು ಕೊಂಡಿಯಾಗಿ ಕೆಲಸ ನಿರ್ವಹಿಸಿದರೆ ಮಾತ್ರ ಆಗ ಉತ್ತಮ ಫಲಿತಾಂಶ ದೊರೆಯಲು ಸಾಧ್ಯವಿದೆ ಎಂದರು. ತಾ.ಪಂ.ಇಓ ನವೀನ್ ಭಂಡಾರಿ ತಾಲ್ಲೂಕಿನಲ್ಲಿ ಸ್ವಚ್ಛತೆಯ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ವಿವರಿಸಿದರು. ಪರಿಸರ ಮಾಲಿನ್ಯ ಮಂಡಳಿಯ ಉಪ ಪರಿಸರ ಅಧಿಕಾರಿ ಡಾ। ಮಹೇಶ್ವರಿ ಸಿಂಗ್ ಅವರು ಏಕ ಬಳಕೆ ಪ್ಲಾಸ್ಟಿಕ್ ನಿಷೇಧ ಜಾರಿ ಕುರಿತು ಮಾಹಿತಿ ನೀಡಿದರು. ಬಳಿಕ ಸಂವಾದ ನಡೆಯಿತು. ಸುಳ್ಯ ತಾ.ಪಂ.ಇಓ ರಾಜಣ್ಣ, ಪುತ್ತೂರು ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ದೊಡ್ಡಮನಿ, ಸುಳ್ಯ ಉಪವಿಭಾಗದ ಚೈತ್ರ ಎಸ್ ಆರ್ ಉಪಸ್ಥಿತರಿದ್ದರು.



ಉದಯವಾಹಿನಿ ಚಿತ್ರ

> **ದ.ಕ.ಜಿಲ್ಲೆಯಲ್ಲಿ ನಾಲ್ಕು ಕಡೆಗಳಲ್ಲಿ ಎಂಆರ್‌ಎಫ್ ಘಟಕಗಳಿವೆ. 223 ಗ್ರಾ.ಪಂ.ಗಳನ್ನು ನಾಲ್ಕು ಘಟಕಗಳಿಗೆ ವಿಭಜಿಸಿ ಅಲ್ಲಿಂದ ಒಣ ಕಸ ಆಯಾ ಘಟಕಗಳಿಗೆ ಪೂರೈಕೆ ಮಾಡಲು ಯೋಜನೆ ರೂಪಿಸಲಾಗಿದೆ. 68 ಗ್ರಾ.ಪಂ.ಗಳಿಗೆ ಕೆದಂಬಾಡಿ ಘಟಕವೂ ಸಿದ್ಧವಾಗಿದ್ದು ಸದ್ಯವೇ ಕಾರ್ಯಾರಂಭಗೊಳ್ಳಲಿದೆ ಎಂದವರು ವಿವರಿಸಿದರು.**

**ಕೆಲಸ ನಿರ್ವಹಿಸಿದರೆ ಉತ್ತಮ ಫಲಿತಾಂಶ**

## ಭಾರತಕ್ಕೆ ಇಟಲಿ ಉಪ ಪ್ರಧಾನಿ ಭೇಟಿ

**ನವದೆಹಲಿ:** ಇಟಲಿಯ ಉಪ ಪ್ರಧಾನಿ ಮತ್ತು ವಿದೇಶಾಂಗ ವ್ಯವಹಾರಗಳ ಸಚಿವ ಆಂಟೋನಿಯೊ ತಜಾನಿ ಅವರು ನಾಳೆ ಭಾರತಕ್ಕೆ ಭೇಟಿ ನೀಡುತ್ತಿದ್ದಾರೆ.

ಎರಡು ದಿನಗಳ ಭಾರತ ಭೇಟಿ ಸಂದರ್ಭದಲ್ಲಿ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ವಿದೇಶಾಂಗ ಸಚಿವ ಎಸ್ ಜೈಶಂಕರ್ ಅವರನ್ನು ಭೇಟಿ ಮಾಡಿ ದ್ವಿಪಕ್ಷೀಯ ಸಂಬಂಧಗಳ ಬಗ್ಗೆ ಮಾತನಾಡದಲಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಅವರ ಮುಂಬರುವ ಭೇಟಿಯ ಮಾಧ್ಯಮ ಸಲಹೆಯನ್ನು ಹಂಚಿಕೊಂಡಿದೆ.


ತಜಾನಿ ನಾಳೆ ದೆಹಲಿಗೆ ಆಗಮಿಸಲಿದ್ದು, ಹೈದರಾಬಾದ್ ಹೌಸ್‌ನಲ್ಲಿ ಜೈಶಂಕರ್ ಮತ್ತು ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಅವರೊಂದಿಗೆ ವಾಣಿಜ್ಯ ಭವನದಲ್ಲಿ ಪ್ರತ್ಯೇಕ ಸಭೆ ನಡೆಸಲಿದ್ದಾರೆ. ಏಪ್ರಿಲ್ 12 ರಂದು ಮಧ್ಯಾಹ್ನ ರಾಷ್ಟ್ರಪತಿ ಭವನದಲ್ಲಿ ಮುರ್ಮು ಅವರನ್ನು ಭೇಟಿ ಮಾಡಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಗುಂಡಿಕ್ಕಿ ಕೇಂದ್ರ ಸಚಿವ ಜಿತನ್ ಮಾಂಝಿ ಮೊಮ್ಮಗಳ ಹತ್ಯೆ

**ಗಯಾ:** ಕೇಂದ್ರ ಸಚಿವ ಜಿತನ್ ರಾಮ್ ಮಾಂಝಿ ಮೊಮ್ಮಗಳನ್ನು ಗುಂಡಿಕ್ಕಿ ಹತ್ಯೆ ಮಾಡಿರುವ ಘಟನೆ ಬಿಹಾರದಲ್ಲಿ ನಡೆದಿದೆ. ಮೃತಳನ್ನು ಸುಷ್ಮಾದೇವಿ ಎಂದು ಗುರುತಿಸಲಾಗಿದೆ. ಸುಷ್ಮಾ ದೇವಿ ಅವರ ಪತಿ ರಮೇಶ್ ವಿರುದ್ಧ ಕೊಲೆ ಆರೋಪ ಹೊರಿಸಲಾಗಿದೆ. ಪ್ರಸ್ತುತ ಪೊಲೀಸರು ಈ ಪ್ರಕರಣದ ತನಿಖೆ ನಡೆಸುತ್ತಿದ್ದು, ಆರೋಪಿ ಪತಿಗಾಗಿ ದಾಳಿ ನಡೆಸುತ್ತಿದ್ದಾರೆ.

ಈ ಘಟನೆ ಅಟಾರಿ ಬ್ಲಾಕ್‌ನ ಟೆಟುವಾ ಗ್ರಾಮದಲ್ಲಿ ನಡೆದಿದೆ. ಸುಷ್ಮಾ ಅಟ್ಟಾರಿ ಬ್ಲಾಕ್‌ನಲ್ಲಿ ವಿಕಾಸ್ ಮಿತ್ರ ಆಗಿ ಕೆಲಸ ಮಾಡುತ್ತಿದ್ದರು. ಆರೋಪಿ ರಮೇಶ್ ಪಾಟ್ನಾದಲ್ಲಿ ಟ್ರಕ್ ಓಡಿಸುತ್ತಾನೆ. ಮಧ್ಯಾಹ್ನ 12 ಗಂಟೆ ಸುಮಾರಿಗೆ ಕೊಲೆ ನಡೆದಿದೆ ಎಂದು ಹೇಳಲಾಗುತ್ತಿದೆ. ಆರೋಪಿ ಪತಿ ಮನೆಯಲ್ಲಿಯೇ ಪತ್ನಿಯ ಮೇಲೆ ಗುಂಡು ಹಾರಿಸಿ, ದೇಶೀಯ ಪಿಸ್ತೂಲನ್ನು ಎಸೆದು ಪರಾರಿಯಾಗಿದ್ದಾನೆ.

ಘಟನೆಯ ನಂತರ ಗ್ರಾಮದಲ್ಲಿ ಅವ್ಯವಸ್ಥೆ ಉಂಟಾಯಿತು.



ಅವರಿಬ್ಬರೂ 14 ವರ್ಷಗಳ ಹಿಂದೆ ಅಂತರ್ಜಾತಿ ವಿವಾಹವಾಗಿದ್ದರು, ಮೃತರ ಸಹೋದರಿ ಮತ್ತು ಮಕ್ಕಳು ಮನೆಯಲ್ಲಿ ಇನ್ನೊಂದು ಕೋಣೆಯಲ್ಲಿದ್ದರು.

ಗುಂಡಿನ ಶಬ್ದ ಕೇಳಿ ಮೃತನ ಸಹೋದರಿ ಮತ್ತು ಮಕ್ಕಳು ಸ್ಥಳಕ್ಕೆ ಬಂದರು. ಅದೇ ಸಮಯದಲ್ಲಿ, ಗುಂಡೇಟಿನ ಸದ್ದು ಕೇಳಿ ಅಕ್ಕಪಕ್ಕದ ಮನೆಯವರು ಕೂಡ ಓಡಿ ಬಂದಿದ್ದಾರೆ. ರಕ್ತದ ಮಡುವಿನಲ್ಲಿದ್ದ ಆಕೆಯನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಲ್ಲಿ ವೈದ್ಯರು ಅವರು ಮೃತಪಟ್ಟಿದ್ದಾರೆಂದು ಘೋಷಿಸಿದರು. ಘಟನೆಯ ಬಗ್ಗೆ ಮಾಹಿತಿ ಬಂದ ತಕ್ಷಣ ಪೊಲೀಸರು ಸ್ಥಳಕ್ಕೆ ಧಾವಿಸಿ, ಶವವನ್ನು ವಶಕ್ಕೆ ಪಡೆದು ಮರಣೋತ್ತರ ಪರೀಕ್ಷೆಗೆ ಕಳುಹಿಸಿದ್ದು, ಪ್ರಕರಣದ ತನಿಖೆ ಆರಂಭಿಸಿದ್ದಾರೆ. ರಮೇಶ್ ಸಿಂಗ್ ಅವರ ಮನೆಗೆ ಬಂದು ಪತ್ನಿ ಸುಷ್ಮಾ ದೇವಿಯನ್ನು ಬಲವಂತವಾಗಿ ಕೋಣೆಗೆ ಕರೆದೊಯ್ದು ಬಾಗಿಲು ಲಾಕ್ ಮಾಡಿ ಗುಂಡು ಹಾರಿಸಿದ್ದಾರೆ ಎಂದು ಹೇಳಲಾಗುತ್ತಿದೆ. ಗುಂಡು ಸುಷ್ಮಾ ದೇವಿಯ ಎದೆಗೆ ತಗುಲಿತ್ತು. ಕೊಲೆ ಆರೋಪಿ ತಲೆಮರೆಸಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಆತನಿಗಾಗಿ ಪೊಲೀಸ್ ತಂಡ ಹುಡುಕಾಟ ನಡೆಸುತ್ತಿದೆ. ಶೀಘ್ರದಲ್ಲೇ ಆರೋಪಿ ಪತಿಯನ್ನು ಬಂಧಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

## 3ಡಿ ಪ್ರಿಂಟ್ ತಂತ್ರಜ್ಞಾನ ಬಳಸಿ 6 ಗಂಟೆಯಲ್ಲಿ ರೈಲು ನಿಲ್ದಾಣ ನಿರ್ಮಿಸಿದ ಜಪಾನ್

**ಟೋಕಿಯೊ:** ಕೇವಲ 6 ಗಂಟೆಗಳಲ್ಲಿ 3ಡಿ-ಪ್ರಿಂಟ್ ತಂತ್ರಜ್ಞಾನ ಬಳಸಿ ರೈಲು ನಿಲ್ದಾಣವನ್ನು ಜಪಾನ್ ನಿರ್ಮಿಸಿದೆ. ವಿಶ್ವದಲ್ಲೇ ಮೊದಲ ಬಾರಿಗೆ ಹೊಸ ಸಾಹಸವನ್ನು ಜಪಾನ್ ಮಾಡಿದೆ. ರೈಲು ಮೂಲಸೌಕರ್ಯ ನಾವೀನ್ಯತೆಯಲ್ಲಿ ಮಹತ್ವದ ಹೆಜ್ಜೆ ಇದಾಗಿದೆ. 1948 ರ ಹಿಂದಿನ ಹಳೆಯ ಮರದ ರಚನೆಯನ್ನು ಬದಲಾಯಿಸಿ, ಹೊಸ ಹಟ್ಸುಶಿಮಾ ನಿಲ್ದಾಣ ನಿರ್ಮಿಸಲಾಯಿತು. 2018 ರಿಂದಲೂ ಈ ನಿಲ್ದಾಣವು ಪ್ರತಿದಿನ ಸುಮಾರು 530 ಪ್ರಯಾಣಿಕರಿಗೆ ಸೇವೆ



ಸಲ್ಲಿಸುತ್ತಿದೆ. ಐತಿಹಾಸಿಕ ನಿರ್ಮಾಣವನ್ನು ವೀಕ್ಷಿಸಲು ನೂರಾರು ಸಂಖ್ಯೆಯಲ್ಲಿ ಸ್ಥಳೀಯರು ಜಮಾಯಿಸಿದ್ದರು. ಅಂತಿಮ ರೈಲು ರಾತ್ರಿ 11:57 ಕ್ಕೆ ಹೊರಟ ನಂತರ ಕಾರ್ಮಿಕರು ನಿರ್ಮಾಣ ಕೆಲಸ ಆರಂಭಿಸಿದರು. ಕೆಲವೇ ಗಂಟೆಗಳಲ್ಲಿ ನಿರ್ಮಾಣ ಕಾರ್ಯ ಮುಗಿಸಿದರು. 100 ಚದರ ಅಡಿಗಳಿಗಿಂತ ಸ್ವಲ್ಪ ಹೆಚ್ಚು ಅಳತೆಯ ಮುಖ್ಯ ರಚನೆಯನ್ನು ಮರುದಿನ ಬೆಳಗ್ಗೆ 5:45 ಕ್ಕೆ ಮೊದಲ ರೈಲು ಬರುವ ಮುನ್ನ ಪೂರ್ಣಗೊಳಿಸಿದರು. ಕಟ್ಟಡ ಪೂರ್ಣವಾಗಿ ನಿರ್ಮಾಣವಾಗಿದೆ. ಐಸಿ ಕಾರ್ಡ್ ರೀಡರ್ ಅಳವಡಿಕೆಯ ಸಣ್ಣಪುಟ್ಟ ಕೆಲಸಗಳಿವೆ. ನಿಲ್ದಾಣವು ಜುಲೈನಲ್ಲಿ ಪ್ರಯಾಣಿಕರಿಗೆ ಮುಕ್ತವಾಗುವ ನಿರೀಕ್ಷೆಯಿದೆ.

### ಶೇ.104 ಯುಎಸ್ ತೆರಿಗೆಗೆ ಚೀನಾ ಅಚ್ಚರಿಯ ಪ್ರತೀಕಾರ – ಇದು ಕ್ರಿಯೆಗೆ ತಕ್ಕ ಪ್ರತಿಕ್ರಿಯೆ

# ಮುಗಿಲು ಮುಟ್ಟಿದ ಟ್ರೇಡ್ ವಾರ್ ರಗಳೆ: ಚೀನಾ ತೀವ್ರ ಕಳವಳ

**ಬೀಜಿಂಗ್ :** ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪ್ರತಿಸುಂಕ ಆದೇಶ, ದಿನದಿಂದ ದಿನಕ್ಕೆ ಚಿತ್ರವಿಚಿತ್ರ ತಿರುವುಗಳನ್ನು ಪಡೆದುಕೊಳ್ಳುತ್ತಿದೆ. ಅಮೆರಿಕಾದ ನಿರ್ಧಾರದ ವಿರುದ್ಧ ಸಟೆದು ನಿಂತಿರುವ ಬಲಾಢ್ಯ ಚೀನಾಗೆ ಬೆಂಬಲವಾಗಿ, ಐರೋಪ್ಯ ಒಕ್ಕೂಟ ರಾಷ್ಟ್ರಗಳು ನಿಲ್ಲುವ ನಿರ್ಧಾರಕ್ಕೆ ಬಂದಿರುವುದು ದಿನದ ಲೇಟೆಸ್ಟ್ ಬೆಳವಣಿಗೆ.

ಚೀನಾವು ಅಮೆರಿಕದ ಸರಕುಗಳ ಮೇಲೆ ಗುರುವಾರದಿಂದ (ಏ. 10) ಜಾರಿಗೆ ಬರುವಂತೆ, ಶೇ. 84 ರಷ್ಟು ಸುಂಕವನ್ನು ಹೆಚ್ಚಿಸಲಿದೆ. ಇದು ಈ ಹಿಂದೆ ಘೋಷಿಸಿದ ಶೇ.34 ರಿಂದ ತೀವ್ರ ಏರಿಕೆಯಾಗಿದೆ ಎಂದು ಚೀನಾದ ಹಣಕಾಸು ಸಚಿವಾಲಯ ಸ್ಪಷ್ಟಪಡಿಸಿದೆ. ಆ ಮೂಲಕ, ಅಮೆರಿಕಾಗೆ ಅಕ್ಷರಸಃ ತಿರುಗೇಟು ನೀಡಿದೆ.

ಈ ಕ್ರಮವು ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಚೀನಾದ ವಸ್ತುಗಳ ಆಮದುಗಳ ಮೇಲೆ ವಿಧಿಸಿದ ದಿಗ್ಭ್ರಮೆಗೊಳಿಸುವ ಶೇ.104 ರಷ್ಟು ಸುಂಕಕ್ಕೆ ನೇರ ಪ್ರತೀಕಾರವಾಗಿದೆ, ಯುಎಸ್ ಹೊಸ ಸುಂಕ ಪದ್ಧತಿ ಇಂದಿನಿಂದಲೇ ಜಾರಿಗೆ ಬರಲಿದೆ. ಪ್ರತೀಕಾರ ತೆರಿಗೆಯನ್ನು ಕಮ್ಮಿ ಮಾಡದಿದ್ದಲ್ಲಿ ಸುಂಕದ ಪ್ರಮಾಣವನ್ನು ಹೆಚ್ಚಿಸುವುದಾಗಿ ಟ್ರಂಪ್ ಎಚ್ಚರಿಕೆ ನೀಡಿದ್ದರು. ನಮ್ಮ ನ್ಯಾಯಸಮ್ಮತ ಹಕ್ಕುಗಳು ಮತ್ತು ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಚೀನಾವು ದೃಢವಾದ ಮತ್ತು ನಿರ್ಣಾಯಕ



ಕ್ರಮಗಳನ್ನು ತೆಗೆದುಕೊಳ್ಳುವುದನ್ನು ಮುಂದುವರಿಸುತ್ತದೆ ಎಂದು ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ಲಿನ್ ಜಿಯಾನ್ ಹೇಳಿದ್ದಾರೆ.

ಸುಂಕಗಳನ್ನು ಬಲವಂತದ ಸಾಧನವಾಗಿ ಅಮೆರಿಕ ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಲಿನ್ ಆರೋಪಿಸಿದ್ದಾರೆ. ಬೀಜಿಂಗ್ ಇದನ್ನು ದಬ್ಬಾಳಿಕೆ ಮತ್ತು ಪ್ರಾಬಲ್ಯದ ಕೃತ್ಯಗಳು ಎಂದು ಕರೆದು ತೀವ್ರವಾಗಿ ವಿರೋಧಿಸುವುದಾಗಿ ಅವರು ಹೇಳಿದರು. ವಿಶ್ವದ ಎರಡು ಅತಿದೊಡ್ಡ ಆರ್ಥಿಕ ದೇಶಗಳ ನಡುವಿನ ಬಿಗಡಾಯಿಸುತ್ತಿರುವ ಈ ಬಿಕ್ಕಟ್ಟು ಜಾಗತಿಕ ವಾಣಿಜ್ಯ ಮಾರುಕಟ್ಟೆಗೆ ಬಲವಾದ ಏಟನ್ನು ಕೊಡುವ ಸಾಧ್ಯತೆಯಿದೆ.

ಚೀನಾದ ಸಾರ್ವಭೌಮತ್ವ, ಭದ್ರತೆ ಮತ್ತು ಅಭಿವೃದ್ಧಿ

- ಡೊನಾಲ್ಡ್ ಟ್ರಂಪ್ ಬೇಜವಾಬ್ದಾರಿ ಕ್ರಮಕ್ಕೆ ಚೀನಾ ತೀವ್ರ ಕಳವಳ ಮತ್ತು ವಿರೋಧ
- ವಿಶ್ವದ ಎರಡು ಅತಿದೊಡ್ಡ ಆರ್ಥಿಕ ದೇಶಗಳ ನಡುವಿನ ಬಿಗಡಾಯಿಸುತ್ತಿರುವ ಬಿಕ್ಕಟ್ಟು
- ಚೀನಾದ ಸಾರ್ವಭೌಮತ್ವ, ಭದ್ರತೆ ಮತ್ತು ಅಭಿವೃದ್ಧಿ ಹಿತಾಸಕ್ತಿಗಳಿಗೆ ಹಾನಿ

ಹಿತಾಸಕ್ತಿಗಳಿಗೆ ಹಾನಿ ಮಾಡಲು ಬಯಸುವ ಯಾವುದೇ ಪ್ರಯತ್ನವನ್ನು ನಾವು ಸಹಿಸುವುದಿಲ್ಲ ಎಂದು ಚೀನಾ, ನೇರವಾಗಿ ಹೇಳುವ ಮೂಲಕ ಶ್ವೇತ ಭವನದ ಆದೇಶಕ್ಕೆ ಡೋಂಟ್ ಕೇರ್ ಎಂದಿದೆ.

ಇದಕ್ಕೂ ಮುನ್ನ, ಚೀನಾವು ವಿಶ್ವ ವ್ಯಾಪಾರ ಸಂಸ್ಥೆಯಲ್ಲಿ ವಾಷಿಂಗ್ಟನ್ ನಿರ್ಧಾರವನ್ನು ಅಧಿಕೃತವಾಗಿ ತೀವ್ರವಾಗಿ ಖಂಡಿಸಿದೆ. ಟ್ರಂಪ್ ಅವರ ವ್ಯಾಪಕವಾದ ಪರಸ್ಪರ ಸುಂಕಗಳು ಜಾಗತಿಕ ವ್ಯಾಪಾರವನ್ನು ಮತ್ತಷ್ಟು ಅಸ್ಥಿರಗೊಳಿಸುತ್ತವೆ ಮತ್ತು ಡಬ್ಲ್ಯುಟಿಒ ನಿಯಮಗಳನ್ನು ಸ್ಪಷ್ಟವಾಗಿ ಉಲ್ಲಂಘಿಸುತ್ತವೆ ಎಂದು ಚೀನಾ ಎಚ್ಚರಿಸಿತು.

ಅಮೆರಿಕದ ಕ್ರಮವು ಬಹುಪಕ್ಷೀಯ ವ್ಯಾಪಾರ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತದೆ ಎಂದು ಚೀನಾ ವಾದಿಸಿದೆ.

**ಟ್ರೇಡ್ ವಾರ್ ನಿರ್ಣಾಯಕ ಘಟ್ಟಕ್ಕೆ**

**ಡೊನಾಲ್ಡ್ ಟ್ರಂಪ್ ಅವರು ಎಲ್ಲಾ ಚೀನೀ ವಸ್ತುಗಳ ಆಮದುಗಳ ಮೇಲೆ ದಿಗ್ಭ್ರಮೆಗೊಳಿಸುವಂತಹ ಶೇ.104 ರಷ್ಟು ಸುಂಕವನ್ನು ಘೋಷಿಸಿದ ನಂತರ ಚೀನಾ ಮತ್ತು ಅಮೆರಿಕ, ಪೂರ್ಣ ಪ್ರಮಾಣದಲ್ಲಿ ವ್ಯಾಪಾರ ಯುದ್ಧದ ಅಂಚಿಗೆ ಬಂದು ನಿಂತಿವೆ. ಹೆಚ್ಚುತ್ತಿರುವ ಬಿಕ್ಕಟ್ಟಿನಲ್ಲಿ ಎರಡೂ ದೇಶದವರು ತಮ್ಮ ನಿರ್ಧಾರದಿಂದ ಹಿಂದಕ್ಕೆ ಸರಿಯುವ ಯಾವುದೇ ಲಕ್ಷಣಗಳು ಕಾಣಿಸುತ್ತಿಲ್ಲ. ಅಮೆರಿಕದ ಒತ್ತಡವನ್ನು ಕೊನೆಯವರೆಗೂ ವಿರೋಧಿಸುವುದಾಗಿ ಚೀನಾ ಎಚ್ಚರಿಕೆ ಕೊಡುವ ಮೂಲಕ, ಟ್ರೇಡ್ ವಾರ್ ನಿರ್ಣಾಯಕ ಘಟ್ಟಕ್ಕೆ ತಲುಪುವ ಸಾಧ್ಯತೆಯಿದೆ.**

ಪರಸ್ಪರ ಸುಂಕ ಹಾಕಿಕೊಂಡರೆ ಅದು ವ್ಯಾಪಾರ ಅಸಮತೋಲನಕ್ಕೆ ಕಾರಣವಾಗುತ್ತದೆ, ಎಂದಿಗೂ ಪರಸ್ಪರ ಸೌಹಾರ್ದಯುತ ವಹಿವಾಟು ನಡೆಸಲು ಸಾಧ್ಯವಾಗುವುದಿಲ್ಲ.

ಅಮೆರಿಕಾದ ಈ ಅಹಂಕಾರದ ನಿರ್ಧಾರ, ಆ ದೇಶಕ್ಕೆ ಹಾನಿಯನ್ನು ಉಂಟು ಮಾಡುತ್ತದೆ ಎಂದು ಚೀನಾ, ಅಮೆರಿಕಾಗೆ ಎಚ್ಚರಿಕೆಯನ್ನು ನೀಡಿದ್ದಾರೆ.

### ಭಾರತ ಮೂಲದ ಉದ್ಯಮಿ ಅನುರಾಗ್ ಬಾಜಪೇಯಿ ಸೆರೆ

## ಅಮೆರಿಕದ ಹೈಟೆಕ್ ವೇಶ್ಯಾವಾಟಿಕೆ ಅಡ್ಡೆ ಮೇಲೆ ದಾಳಿ

**ಬೋಸ್ಟನ್:** ಅಮೆರಿಕದ ಬೋಸ್ಟನ್‌ನಲ್ಲಿ ಹೈಟೆಕ್ ವೇಶ್ಯಾವಾಟಿಕೆ ದಂಧೆಯ ಮೇಲೆ ದಾಳಿ ನಡೆಸಲಾಗಿದ್ದು, ಭಾರತ ಮೂಲದ ಉದ್ಯಮಿಯೊಬ್ಬರು ಸಿಕ್ಕಿಹಾಕಿಕೊಂಡಿರುವ ಘಟನೆ ವರದಿಯಾಗಿದೆ. ಸಿಕ್ಕಿಹಾಕಿಕೊಂಡಿರುವ ಭಾರತೀಯನನ್ನು ಅನುರಾಗ್ ಬಾಜಪೇಯಿ ಎಂದು ಗುರುತಿಸಲಾಗಿದೆ. ಇವರು ಭಾರತದಲ್ಲಿ ಪರಿಶುದ್ಧ ಮಿನರಲ್ ವಾಟರ್ ಕಂಪನಿಯಾದ ಗ್ರೇಡಿಯೆಂಟ್ ಕಂಪನಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ).

ಈ ಕೇಸ್‌ನಲ್ಲಿ ಹಲವಾರು ಉದ್ಯಮಿಗಳು, ಸ್ಥಳೀಯ ನಾಯಕರು ಸಿಕ್ಕಿಹಾಕಿಕಕೊಂಡಿದ್ದಾರೆ. ಎಲ್ಲರ ಮೇಲೆ ಚಾರ್ಜ್ ಶೀಟ್ ಜಡಿಯಲಾಗಿದೆ. ನ್ಯಾಯಲಯಕ್ಕೆ ಸಲ್ಲಿಸಲಾಗಿರುವ ಆರೋಪ ಪಟ್ಟಿಯಲ್ಲಿ ಡಜನ್ ಗಟ್ಟಲೆ ಹೆಸರುಗಳಿವೆ.

ಅವರಲ್ಲಿ ವೈದ್ಯರು, ಲಾಯರ್ ಗಳು, ಸರಕಾರಿ ಗುತ್ತಿಗೆದಾರರು, ಸರ್ಕಾರಿ ಅಧಿಕಾರಿಗಳು ಸೇರಿದಂತೆ ಅನೇಕರು ಇದ್ದಾರೆಂದು ಹೇಳಲಾಗದಿ. ಅವರಲ್ಲಿ ಅನುರಾಗ್ ಬಾಜಪೇಯಿ ಕೂಡ ಒಬ್ಬರು ಎಂದು ಹೇಳಲಾಗಿದೆ. ದಾಳಿ ನಡೆದ ಸಂದರ್ಭದಲ್ಲಿ ಅನುರಾಗ್ ಬಾಜಪೇಯಿ ಅವರು, ಏಷ್ಯಾದ ಮಹಿಳೆಯೊಂದಿಗೆ ಆಪ್ತ ಸಮಯ ಕಳೆಯಲು 600 ಡಾಲರ್ ಪಾವತಿಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ಅಮೆರಿಕದಲ್ಲಿ ಹಲವಾರು ವೇಶ್ಯಾವಾಟಿಕೆ ಅಡ್ಡೆಗಲ ಮೇಲೆ ಪೊಲೀಸರು ನಡೆಸಿದ್ದು ಅಲ್ಲಲ್ಲಿ ಭಾರತೀಯರು ಸಿಕ್ಕಿಬಿದ್ದಿದ್ದಾರೆ. ಕಳೆದ ವರ್ಷ ಆಗಸ್ಟ್ ನಲ್ಲಿ ಟೆಕ್ಸಾಸ್ ನಲ್ಲಿ ನಡೆಸಲಾಗಿದ್ದ ದಾಳಿಯಲ್ಲಿ ಏಳು ಮಂದಿ ಭಾರತೀಯರು ಸಿಕ್ಕಿಬಿದ್ದಿದ್ದರು. 2018ರಲ್ಲಿ ಅಮೆರಿಕದಲ್ಲಿ ವೇಶ್ಯಾವಾಟಿಕೆ ನಡೆಸುತ್ತಿದ್ದ ತೆಲುಗು ಮೂಲದ ದಂಪತಿಯನ್ನು ಬಂಧಿಸಲಾಗಿತ್ತು. ಈ ದಂಪತಿಯ ವಿರುದ್ಧ ತೆಲುಗು ಹಾಗೂ ಕನ್ನಡ ಚಿತ್ರರಂಗದಿಂದ ನಟಿಯರನ್ನು ಕರೆಯಿಸಿಕೊಂಡು ವೇಶ್ಯಾವಾಟಿಕೆ ನಡೆಸುತ್ತಿದ್ದುದು ಬೆಳಕಿಗೆ ಬಂದಿತ್ತು.

ಈಗಾಗಲೇ ತಿಳಿಸಿದಂತೆ, ಅನುರಾಗ್ ಅವರು ಗ್ರೇಡಿಯೆಂಟ್ ಮಿನರಲ್ ಕಂಪನಿಯ ಸಿಇಒ. ಇವರು ಉನ್ನತ ಶಿಕ್ಷಣ ಪಡೆದಿದ್ದೆಲ್ಲವೂ ಅಮೆರಿಕದಲ್ಲೇ. ಎಂಐಟಿಯಿಂದ ಮೆಕ್ಯಾನಿಕಲ್ ಇಂಜಿನಿಯರಿಂಗ್ ನಲ್ಲಿ ಪಿಎಚ್ ಡಿ ಪಡೆದಿರುವ ಇವರು, ಎಂಐಟಿಯಲ್ಲೇ ಸಂಶೋಧನೆಯಲ್ಲಿ ತೊಡಗಿಸಿಕೊಂಡಿದ್ದರು. ಮಿಸೌರಿ ವಿಶ್ವವಿದ್ಯಾಲಯದಲ್ಲಿಯೂ ಸಂಶೋಧನೆ ನಡೆಸುತ್ತಿದ್ದರು.



ಈಗ ಹೈಟೆಕ್ ವೇಶ್ಯಾವಾಟಿಕೆಯ ಜಾಲದಲ್ಲಿ ಅವರ ಬಂಧನವಾಗಿರುವುದರಿಂದ ಗ್ರೇಡಿಯೆಂಟ್ ಕಂಪನಿಯಿಂದ ಅನುರಾಗ್ ಅವರನ್ನು ಕಿತ್ತೊಗೆಯಬೇಕು ಎಂಬ ಆಗ್ರಹಗಳು ಕೇಳಿಬಂದಿವೆ. ಕಂಪನಿಯ ಆಡಳಿತ ಮಂಡಳಿಯಲ್ಲಿ ಅನುರಾಗ್ ಅವರನ್ನು ಕಿತ್ತೊಗೆಯಲು ಒತ್ತಡ ಹೆಚ್ಚಾಗುತ್ತಿದೆ.

- ಅಮೆರಿಕದ ಬೋಸ್ಟನ್ ನಲ್ಲಿ ಹೈಟೆಕ್ ವೇಶ್ಯಾವಾಟಿಕೆ ಅಡ್ಡೆ ಮೇಲೆ ದಾಳಿ.
- ಈ ಸಂದರ್ಭದಲ್ಲಿ ಭಾರತ ಮೂಲದ ಉದ್ಯಮಿಯೊಬ್ಬರ ಬಂಧನ.
- ಲಕ್ನೋ ಮೂಲದ ಅನುರಾಗ್ ಬಾಜಪೇಯಿ ಎಂಬುವರು ಅರೆಸ್ಟ್.
- ಅಮೆರಿಕದ ಮಿನರಲ್ ವಾಟರ್ ಸಂಸ್ಥೆಯಾದ ಗ್ರೇಡಿಯೆಂಟ್‌ನ ಸಿಇಒ ಆಗಿರುವ ಅನುರಾಗ್ ಬಾಜಪೇಯಿ.

## ಮೇ 09ರಂದು ಮಾಸ್ಕೋದಲ್ಲಿ ವಿಜಯೋತ್ಸವ ಪಥಸಂಚಲನ

### ವಿಜಯ ದಿನಾಚರಣೆಯಲ್ಲಿ ಭಾಗವಹಿಸಲು ಮೋದಿಗೆ ರಷ್ಯಾದಿಂದ ಆಹ್ವಾನ

**ಮಾಸ್ಕೋ:** ಮೇ 9 ರಂದು ಮಾಸ್ಕೋದಲ್ಲಿ ನಡೆಯಲಿರುವ ವಿಜಯ ದಿನಾಚರಣೆಯಲ್ಲಿ ಭಾಗವಹಿಸಲು ಪ್ರಧಾನಿ ನರೇಂದ್ರ ಮೋದಿ ಅವರನ್ನು ರಷ್ಯಾ ಸರ್ಕಾರ ಔಪಚಾರಿಕವಾಗಿ ಆಹ್ವಾನಿಸಿದೆ. ಎರಡನೇ ಮಹಾಯುದ್ಧದಲ್ಲಿ ನಾಜಿ ಜರ್ಮನಿಯ ಮೇಲೆ ರಷ್ಯಾ ಸೋವಿಯತ್ ಒಕ್ಕೂಟದ ವಿಜಯದ ನೆನಪಿಗಾಗಿ ಪ್ರತಿ ವರ್ಷ ಮೇ 9ರಂದು ವಿಜಯೋತ್ಸವ ಪಥಸಂಚಲನ ಆಯೋಜಿಸಲಾಗುತ್ತದೆ.

ರಷ್ಯಾದ ಉಪ ವಿದೇಶಾಂಗ ಸಚಿವ ಆಂಡ್ರೆ ರುಡೆಂಕೊ ಅವರು ಈ ಘೋಷಣೆ ಮಾಡಿದ್ದಾರೆ. ನವದೆಹಲಿಗೆ ಅಧಿಕೃತ ಆಹ್ವಾನವನ್ನು ಕಳುಹಿಸಲಾಗಿದೆ ಪ್ರಧಾನಿ ಮೋದಿವರನ್ನು ಬರಮಾಡಿಕೊಳ್ಳಲು ಉನ್ನತ ಮಟ್ಟದ ಭೇಟಿಗೆ ಸಿದ್ಧತೆಗಳು ಪ್ರಸ್ತುತ ನಡೆಯುತ್ತಿವೆ ಎಂದರು. ಮಾಸ್ಕೋದ ಐಕಾನಿಕ್ ರೆಡ್ ಸ್ಕ್ವೇರ್‌ನಲ್ಲಿ ನಡೆಯುವ ವಾರ್ಷಿಕ ಮಿಲಿಟರಿ ಮೆರವಣಿಗೆಯಲ್ಲಿ ಭಾಗವಹಿಸಲು ರಷ್ಯಾ, ಹಲವಾರು ಸ್ನೇಹಪರ ರಾಷ್ಟ್ರಗಳ ನಾಯಕರಿಗೆ ಇದೇ ರೀತಿಯ ಆಹ್ವಾನಗಳನ್ನು ನೀಡಿದೆ.

**ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಾಗಿ:** ಮೇ 9 ರಂದು ನಡೆಯುವ ವಿಜಯ ದಿನದ ಪರೇಡ್‌ನಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಾರತವನ್ನು



ಪ್ರತಿನಿಧಿಸಲಿದ್ದಾರೆ ಎಂದು ಭಾರತ ಸರ್ಕಾರದ ಮೂಲಗಳು ರಷ್ಯಾಗೆ ತಿಳಿಸಿವೆ. ಪ್ರಧಾನಿ ಮೋದಿ ಖುದ್ದು ಹಾಜರಾಗುವ ಸಾಧ್ಯತೆ ಕಡಿಮೆ ಇದೆ.

ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಈ ವರ್ಷದ ಕೊನೆಯಲ್ಲಿ ಭಾರತಕ್ಕೆ ಭೇಟಿ ನೀಡಲಿದ್ದಾರೆ ಎಂದು ಕಳೆದ ತಿಂಗಳು ಮಾಸ್ಕೋ ದೃಢಪಡಿಸಿದೆ. ಫೆಬ್ರವರಿ 2022 ರಲ್ಲಿ ರಷ್ಯಾ ಉಕ್ರೇನ್ ಮೇಲೆ ಪೂರ್ಣ ಪ್ರಮಾಣದ ಆಕ್ರಮಣವನ್ನು ಪ್ರಾರಂಭಿಸಿದ ನಂತರ ಭಾರತಕ್ಕೆ ಪುಟಿನ್ ಅವರ ಮೊದಲ ಪ್ರವಾಸ ಇದು.

ಪುಟಿನ್ ಭೇಟಿಯ ದಿನಾಂಕವನ್ನು ಅಂತಿಮಗೊಳಿಸಲಾಗಿಲ್ಲವಾದರೂ, ಇಬ್ಬರೂ ನಾಯಕರು ನಿಯಮಿತ ದೂರವಾಣಿ ಸಂಪರ್ಕದಲ್ಲಿದ್ದಾರೆ.

ಪ್ರಧಾನಿ ಮೋದಿ ಜುಲೈ 2024ರಲ್ಲಿ ಕೊನೆಯ ಬಾರಿಗೆ ರಷ್ಯಾಕ್ಕೆ ಭೇಟಿ ನೀಡಿದ್ದರು. ಮೊದಲು, ಅವರು 2019 ರಲ್ಲಿ ಆರ್ಥಿಕ ಸಮಾವೇಶದಲ್ಲಿ ಭಾಗವಹಿಸಲು ವ್ಲಾಡಿವೋಸ್ಟಾಕ್‌ಗೆ ಪ್ರಯಾಣಿಸಿದ್ದರು. 2024 ರ ಭೇಟಿಯ ಸಮಯದಲ್ಲಿ, ಪ್ರಧಾನಿ ಮೋದಿ ಅಧ್ಯಕ್ಷ ಪುಟಿನ್ ಅವರೊಂದಿಗೆ ವ್ಯಾಪಕ ಮಾತುಕತೆ ನಡೆಸಿದರು. ಭಾರತಕ್ಕೆ ಭೇಟಿ ನೀಡುವಂತೆ ರಷ್ಯಾದ ನಾಯಕರಿಗೆ ಆಹ್ವಾನ ನೀಡಿದರು.

ಅಂದಿನಿಂದ ಕ್ರೆಮ್ಲಿನ್ ಆಹ್ವಾನವನ್ನು ಸ್ವೀಕರಿಸಿದೆ. ಮೇ 9 ರಂದು ನಡೆಯುವ ವಿಜಯೋತ್ಸವವು ರಷ್ಯಾದ ಪ್ರಮುಖ ರಾಜ್ಯ ಸಮಾರಂಭಗಳಲ್ಲಿ ಒಂದಾಗಿದೆ.

**ಭಾರತವನ್ನು ಶ್ಲಾಘಿಸಿದ ರಷ್ಯಾ**

**ಜಾಗತಿಕ ಸಂಘರ್ಷಗಳ ಕುರಿತು ಭಾರತದ ನಿಲುವನ್ನು, ವಿಶೇಷವಾಗಿ ಉಕ್ರೇನ್ ಯುದ್ಧದ ಕುರಿತು ಅದರ ತಟಸ್ಥ ನಿಲುವನ್ನು ಮಾಸ್ಕೋ ಶ್ಲಾಘಿಸಿದೆ. ಉಕ್ರೇನ್ ಬಿಕ್ಕಟ್ಟಿನ ಬಗ್ಗೆ ಸಮತೋಲಿತ ನಿಲುವನ್ನು ಸ್ಥಿರವಾಗಿ ಕಾಯ್ದುಕೊಂಡಿದ್ದಕ್ಕಾಗಿ ಮತ್ತು ಮಾತುಕತೆ ಮೂಲಕ ಅದರ ಪರಿಹಾರಕ್ಕಾಗಿ ಪ್ರಯತ್ನಿಸಿದ್ದಕ್ಕಾಗಿ ಭಾರತವನ್ನು ಶ್ಲಾಘಿಸಿದೆ.**

## ಉಗ್ರ ಕಸಬ್‌ಗೆ ಬಿರಿಯಾನಿ ತಿನ್ನಿಸಿದ್ದನ್ನ ಮರೆತಿಲ್ಲ



**ನವದೆಹಲಿ:** 2008ರ ಮುಂಬೈ ದಾಳಿಯ ಉಗ್ರ ತಹವ್ವೂರ್ ರಾಣಾನನ್ನ ಕೊನೆಗೂ ಭಾರತಕ್ಕೆ ಕರೆತರಲಾಗುತ್ತಿದೆ. ಆದ್ರೆ ಈ ವಿಷಯದಲ್ಲೂ ಕಾಂಗ್ರೆಸ್-ಬಿಜೆಪಿ ನಡುವೆ ರಾಜಕೀಯ ಜಟಾಪಟಿ ನಡೆದಿದೆ. ಮುಂಬೈ ದಾಳಿಯ ಉಗ್ರರನ್ನು ಬಂಧಿಸುವ ವಿಚಾರದಲ್ಲಿ ಅಂದಿನ ಯುಪಿಎ ಸರ್ಕಾರದ ನಡೆಯನ್ನು ಕೇಂದ್ರ ಸಚಿವ ಪಿಯೂಷ್ ಗೋಯಲ್ ತೀವ್ರವಾಗಿ ಟೀಕಿಸಿದ್ದಾರೆ.

ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ತಾಜ್ ಹೋಟೆಲ್ ಮೇಲೆ ನಡೆದ ಭಯೋತ್ಪಾದಕ ದಾಳಿಯಲ್ಲಿ ಅಮಾಯಕರು ಪ್ರಾಣ ಕಳೆದುಕೊಂಡರು. ಆದ್ರೆ ಭಾಗಿಯಾಗಿರುವವರನ್ನು ಶಿಕ್ಷಿಸಲು ಹಿಂದಿನ ಯುಪಿಎ ಸರ್ಕಾರ ಏನೂ ಮಾಡಲಿಲ್ಲ. ಸೆರೆ ಸಿಕ್ಕಿದ್ದ ಏಕೈಕ ಉಗ್ರ ಅಜ್ಮಲ್ ಕಸಬ್‌ಗೆ ಬಿರಿಯಾನಿ ತಿನ್ನಿಸುವ ಕೆಲಸ ಮಾಡಿತ್ತು, ಇದನ್ನ ದೇಶದ ಜನ ಮರೆತಿಲ್ಲ ಎಂದು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಮುಂದುವರಿದು ನಮ್ಮ ದೇಶದ ಮೇಲೆ ದಾಳಿ ಮಾಡಿದವರಿಗೆ ನ್ಯಾಯ ದೊರಕಿಸಿಕೊಡುವ ಸಂಕಲ್ಪವನ್ನು ನರೇಂದ್ರ ಮೋದಿ ಅಂದೇ ಮಾಡಿದ್ದರು. ಅಂದು ಮೋದಿ ಮಾಡಿದ ಸಂಕಲ್ಪವನ್ನು ಈಡೇರಿಸಿದ್ದಾರೆ.

ಪ್ರತಿಯೊಬ್ಬ ಭಾರತೀಯ ಪ್ರಜೆಯೂ ಮೋದಿ ಬಗ್ಗೆ ಹೆಮ್ಮೆ ಪಡುತ್ತಾರೆ ಎಂದು ಶ್ಲಾಘಿಸಿದ್ದಾರೆ. ಇದೇ ವೇಳೆ ಶಿವಸೇನೆ ವಿರುದ್ಧವೂ ಕಿಡಿ ಕಾರಿದ ಸಚಿವರು, ಸಂಜಯ್ ರಾವತ್ ಅವರು, ಮುಸ್ಲಿಂ ವ್ಯಕ್ತಿ ಎಂತಹ ದೊಡ್ಡ ಅಪರಾಧದಲ್ಲಿ ತೊಡಗಿಸಿಕೊಂಡಿದ್ದರೂ ಸಮರ್ಥಿಸಿಕೊಳ್ಳುತ್ತಾರೆ. ಏಕೆಂದರೆ, ಉದ್ಧವ್ ಠಾಕ್ರೆ ಅವರ ಶಿವಸೇನೆಯು ಕಾಂಗ್ರೆಸ್‌ಗಿಂತ ಹೆಚ್ಚಿನ ತುಷ್ಟೀಕರಣದ ರಾಜಕೀಯದಲ್ಲಿ ತೊಡಗಿದೆ. ಪ್ರಧಾನಿ ಮೋದಿಯವರಂತೆ ಧನಾತ್ಮಕ ಚಿಂತನೆ ಹೊಂದಿಲ್ಲ ಎಂದಿದ್ದಾರೆ.

## ಬಂಕ್ ಮ್ಯಾನೇಜರ್‌ಗೆ ಗುಂಡಿಕ್ಕಿ ಹತ್ಯೆ

**ಬುಲಂದ್‌ಶಹರ್:** ಉ. ಪ್ರದೇಶದ ಸಿಕಂದರಾಬಾದ್‌ನಲ್ಲಿ ಪೆಟ್ರೋಲ್ ಪಂಪ್ ಮ್ಯಾನೇಜರ್ ಒಬ್ಬರನ್ನು ಗುಂಡಿಕ್ಕಿ ಹತ್ಯೆ ಮಾಡಿದ ಘಟನೆ ಗುರುವಾರ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ತಡರಾತ್ರಿ ಬೈಕ್‌ನಲ್ಲಿ ಬಂದ ಇಬ್ಬರು ವ್ಯಕ್ತಿಗಳು, ತಮ್ಮ ಬೈಕ್‌ಗೆ ಪೆಟ್ರೋಲ್ ತುಂಬಿಸಿದ ನಂತರ ಪ್ಲಾಸ್ಟಿಕ್ ಬಾಟಲಿಗೆ ಪೆಟ್ರೋಲ್ ಹಾಕುವಂತೆ ಹೇಳಿದ್ದಾರೆ. ಇದಕ್ಕೆ ಸಿಬ್ಬಂದಿ ನಿರಾಕರಿಸಿದ್ದಾರೆ.

ಬಳಿಕ ಪಂಪ್ ಮ್ಯಾನೇಜರ್ ರಾಜು ಶರ್ಮಾ(30) ಅವರ ಬಳಿ ಹೋಗಿ ಬಾಟಲಿಗೆ ಪೆಟ್ರೋಲ್ ಹಾಕುವಂತೆ ಒತ್ತಾಯಿಸಿದ್ದಾರೆ. ಶರ್ಮಾ ಕೂಡ ಇದಕ್ಕೆ ಒಪ್ಪಿಲ್ಲ. ಈ ವೇಳೆ ವಾಗ್ವಾದ ನಡೆದಿದ್ದು, ಅವರ ಮೇಲೆ ಗುಂಡು ಹಾರಿಸಿ ಸ್ಥಳದಿಂದ ಪರಾರಿಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಗುಂಡಿನ ದಾಳಿಯಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಶರ್ಮಾ ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಅಲ್ಲಿ ಅವರು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಈ ಸಂಬಂಧ ಇಬ್ಬರು ದುಷ್ಕರ್ಮಿಗಳ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಶ್ಲೋಕ್ ಕುಮಾರ್ ಅವರು ತಿಳಿಸಿದ್ದಾರೆ. ಸಿಸಿಟಿವಿ ಕ್ಯಾಮೆರಾ ದೃಶ್ಯಗಳ ಸಹಾಯದಿಂದ ಆರೋಪಿಗಳನ್ನು ಗುರುತಿಸಲಾಗಿದೆ. ಅವರನ್ನು ಬಂಧಿಸುವ ಪ್ರಯತ್ನಗಳು ನಡೆಯುತ್ತಿವೆ ಎಂದು ಅವರು ಹೇಳಿದ್ದಾರೆ.

## ಅನಾರೋಗ್ಯ ಪೀಡಿತ ಪತ್ನಿಯನ್ನು ಹತ್ಯೆಗೈದ ಪತಿ

**ನಾಸಿಕ್:** ನಾಸಿಕ್‌ನಲ್ಲಿ ನಡೆದ ವೃದ್ಧ ದಂಪತಿಯ ಆತ್ಮಹತ್ಯೆ ಪ್ರಕರಣ ಎಲ್ಲರ ಕಣ್ಣಲ್ಲೂ ನೀರು ಜಿನುಗುವಂತೆ ಮಾಡಿದೆ. ನಿವೃತ್ತ ಪ್ರಾಂಶುಪಾಲರೊಬ್ಬರು ತಮ್ಮ ಪತ್ನಿ ದೀರ್ಘಕಾಲದಿಂದ ಅನಾರೋಗ್ಯದಿಂದ ಬಳಲುತ್ತಿರುವುದನ್ನು ನೋಡಲಾಗದೆ ಆಕೆಯನ್ನು ಹತ್ಯೆ ಮಾಡಿ ಬಳಿಕ ತಾವು ಕೂಡ ಆತ್ಮಹತ್ಯೆ ಮಾಡಿಕೊಂಡು ಸಾವನ್ನಪ್ಪಿರುವ ಘಟನೆ ನಾಸಿಕ್?ನಲ್ಲಿ ನಡೆದಿದೆ. ಆಕೆ ದೀರ್ಘಕಾಲದಿಂದ ತಿನ್ನುತ್ತಿರುವ ನೋವು ನೋಡಲಾಗದೆ, ಜೀವಕ್ಕೆ ಜೀವಕೊಡುವ ಸಂಗಾತಿ ಜೀವ ತೆಗೆಯುವ ನಿರ್ಧಾರ ಮಾಡಿದ್ದಾರೆ.

ನಾಸಿಕ್‌ನ ಜೈಲ್ ರಸ್ತೆ ಪ್ರದೇಶದಲ್ಲಿ ನಡೆದ ಈ ಆಘಾತಕಾರಿ ಘಟನೆ ಎಲ್ಲರನ್ನೂ ಆಘಾತಕ್ಕೆ ದೂಡಿದೆ. ವ್ಯಕ್ತಿ ತಮ್ಮ ಪತ್ನಿಯನ್ನು ಕತ್ತು ಹಿಸುಕಿ ಕೊಂದು, ನಂತರ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೃತ ದಂಪತಿಗಳ ಹೆಸರುಗಳು ಮುರಳೀಧರ್ ಜೋಶಿ (78) ಮತ್ತು ಲತಾ ಜೋಶಿ, ಇಬ್ಬರೂ ನಿವೃತ್ತ ಶಿಕ್ಷಕರು. ಮೃತ ದಂಪತಿಗಳ ಹೆಸರುಗಳು ಮುರಳೀಧರ್ ಜೋಶಿ (78) ಮತ್ತು ಲತಾ ಜೋಶಿ, ಇಬ್ಬರೂ ನಿವೃತ್ತ ಶಿಕ್ಷಕರು. ಅವರ ಇಬ್ಬರೂ ಪುತ್ರರು ಮುಂಬೈನಲ್ಲಿ ಉನ್ನತ ಹುದ್ದೆಯಲ್ಲಿದ್ದಾರೆ.

ನಾಸಿಕ್‌ನ ಜೈಲ್ ರಸ್ತೆ ಪ್ರದೇಶದ ಕಟ್ಟಡವೊಂದರಲ್ಲಿ ಜೋಶಿ ದಂಪತಿಗಳು ಒಂಟಿಯಾಗಿ ವಾಸಿಸುತ್ತಿದ್ದರು. ಲತಾ ಜೋಶಿ 2017 ರಿಂದ ಮೆದುಳಿನ ಅಸ್ವಸ್ಥತೆಯಿಂದ ಬಳಲುತ್ತಿದ್ದರು ಮತ್ತು ಒಮ್ಮೆ ವೆಂಟಿಲೇಟರ್‌ನಲ್ಲಿ ಇರಿಸಲಾಗಿತ್ತು. ಆದಾಗ್ಯೂ, ಜೋಶಿ ದಂಪತಿಗಳು ಈ ದೀರ್ಘಕಾಲದ ಅನಾರೋಗ್ಯದಿಂದ ಬೇಸತ್ತು ತಮ್ಮ ಜೀವನವನ್ನು ಕೊನೆಗೊಳಿಸುವ ಈ ಕಠಿಣ ಕ್ರಮವನ್ನು ತೆಗೆದುಕೊಂಡಿದ್ದಾರೆ ಎನ್ನಲಾಗುತ್ತಿದೆ.

ಪತ್ನಿಯ ಮರಣದ ನಂತರ, ಮುರಳೀಧರ ಜೋಶಿ ಕೂಡ ತಮ್ಮ ಜೀವನವನ್ನು ಕೊನೆಗೊಳಿಸಿಕೊಂಡರು.

ಆತ್ಮಹತ್ಯೆ ಪತ್ರದಲ್ಲಿ ನಾನು ನನ್ನ ಹೆಂಡತಿಯನ್ನು ಸ್ವರ್ಗಕ್ಕೆ ಕಳುಹಿಸಿದೆ, ಈಗ ನಾನು ಅವಳೊಂದಿಗೆ ಹೋಗುತ್ತಿದ್ದೇನೆ ಎಂದು ಬರೆದಿದ್ದರು. ನಮ್ಮ ಸಾವಿಗೆ ಯಾರೂ ಕಾರಣರಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

### ಭಾರತದಿಂದ ರಫ್ತಾಗುವ ಉತ್ಪನ್ನಗಳಿಗೆ 26% ಹೆಚ್ಚುವರಿ ಸುಂಕವನ್ನು ಟ್ರಂಪ್ ನಿಗದಿಪಡಿಸಿದ್ದರು

# ಸುಂಕಾಸ್ತ್ರ ಜಾರಿಗೆ 90 ದಿನ ರಿಲೀಫ್ ಘೋಷಿಸಿದ ಟ್ರಂಪ್

**ವಾಷಿಂಗ್ಟನ್:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತ ಸೇರಿದಂತೆ ಹಲವು ದೇಶಗಳ ಮೇಲೆ ಹೇರಿದ್ದ ಪ್ರತಿಸುಂಕ ನೀತಿಯ ಜಾರಿಗೆ 90 ದಿನಗಳ 'ತಡೆ' ಘೋಷಿಸಿದ್ದಾರೆ. ಇದರೊಂದಿಗೆ 60ಕ್ಕೂ ಹೆಚ್ಚು ದೇಶಗಳು ಬೀಸುವ ದೊಣ್ಣೆಯಿಂದ ಬಚಾವಾಗಿವೆ.

ಟ್ರಂಪ್ ಆದೇಶದ ಪ್ರಕಾರ 60ಕ್ಕೂ ಹೆಚ್ಚು ದೇಶಗಳಿಂದ ಅಮೆರಿಕಕ್ಕೆ ರಫ್ತಾಗುವ ಉತ್ಪನ್ನಗಳ ಮೇಲೆ ಏ.9ರಿಂದ

- ಪ್ರತಿಸುಂಕ ನೀತಿಯ ಜಾರಿಗೆ 90 ದಿನಗಳ 'ತಡೆ' ಘೋಷಿಸಿದ್ದಾರೆ
- 60ಕ್ಕೂ ಹೆಚ್ಚು ದೇಶಗಳು ಬೀಸುವ ದೊಣ್ಣೆಯಿಂದ ಬಚಾವಾಗಿವೆ.
- ಭಾರತದಿಂದ ರಫ್ತಾಗುವ ಉತ್ಪನ್ನಗಳಿಗೆ 26% ಹೆಚ್ಚುವರಿ ಸುಂಕವನ್ನು ಟ್ರಂಪ್ ನಿಗದಿಪಡಿಸಿದ್ದರು.

ಹೆಚ್ಚುವರಿ ಸುಂಕ ಅನ್ವಯವಾಗಬೇಕಿತ್ತು. ಭಾರತದಿಂದ ರಫ್ತಾಗುವ ಉತ್ಪನ್ನಗಳಿಗೆ 26% ಹೆಚ್ಚುವರಿ ಸುಂಕವನ್ನು ಟ್ರಂಪ್ ನಿಗದಿಪಡಿಸಿದ್ದರು. ಆದರೆ, ಟ್ರಂಪ್ ನೀತಿಯಲ್ಲಿ ಹೊಸ ಮಾರ್ಪಾಡಿನಿಂದಾಗಿ, 3 ತಿಂಗಳ ಕಾಲ ಈ ದೇಶಗಳಿಗೆ ಸುಂಕಾಸ್ತ್ರದಿಂದ ರಿಲೀಫ್ ದೊರೆತಿದೆ.

ಅಮೆರಿಕದ ಜತೆ ಭಾರತ ಸೇರಿದಂತೆ ಹಲವು ದೇಶಗಳು ಸಂಧಾನಕ್ಕೆ ಮುಂದಾದ ಹಿನ್ನೆಲೆಯಲ್ಲಿ ತಾತ್ಕಾಲಿಕ ರಿಲೀಫ್ ನೀಡಿರುವುದಾಗಿ ಅವರು ಸಮರ್ಥಿಸಿಕೊಂಡಿದ್ದಾರೆ. ಜತೆಗೆ ಈ ಅವಧಿಯಲ್ಲಿ ಕೇವಲ ಶೇ. 10ರಷ್ಟು ಹೆಚ್ಚುವರಿ ಸುಂಕ ಮಾತ್ರ ಅನ್ವಯವಾಗಲಿದೆ ಎಂದಿದ್ದಾರೆ.

ಇದೇ ವೇಳೆ, ವಿದೇಶದಲ್ಲಿರುವ



ಕಂಪನಿಗಳಿಗೆ ಅಮೆರಿಕದಲ್ಲಿ ಘಟಕಗಳನ್ನು ಸ್ಥಾಪಿಸಿ ಉತ್ಪಾದನೆ ಆರಂಭಿಸಬೇಕೆಂದು ಟ್ರಂಪ್ ಕರೆ ನೀಡಿದ್ದಾರೆ. ಅಮೆರಿಕದ ಉತ್ಪನ್ನಗಳ ಮೇಲೆ ಚೀನಾ 84% ತೆರಿಗೆ ಹೇರಿ ಚೀನಾ ಗುರುವಾರ ಪ್ರತೀಕಾರಕ್ಕೆ ಮುಂದಾದ ಬೆನ್ನಲ್ಲೇ, ಟ್ರಂಪ್ ಸಹ ಮತ್ತಷ್ಟು ಸುಂಕದೊಂದಿಗೆ ತಿರುಗೇಟು ನೀಡಿದ್ದಾರೆ.

ಹಾಗೇನಾದರೂ ಶೇ.50ರಷ್ಟು ಹೆಚ್ಚುವರಿ ಸುಂಕ ಜಾರಿಗೆ ಬಂದರೆ ಅಮೆರಿಕವು ಚೀನಾದ ಮೇಲೆ ಹಾಕಿರುವ ಪ್ರತಿಸುಂಕದ ಪ್ರಮಾಣ ಶೇ.104 ಆಗುತ್ತದೆ. ಅಮೆರಿಕದ ಬೆದರಿಕೆ ತಂತ್ರಗಳಿಗೆ ನಾವು ಮಣಿಯುವುದಿಲ್ಲ. ಬ್ಲಾಕ್‌ಮೇಲ್ ಮಾಡುವ ಅಮೆರಿಕದ ಸ್ವಭಾವ ಮತ್ತೊಮ್ಮೆ ಜಗಜ್ಜಾಹೀರಾಗಿದೆ. ನಮ್ಮ ಹಕ್ಕು ಮತ್ತು ಹಿತಾಸಕ್ತಿಗಳನ್ನು ಕಾಯ್ದುಕೊಳ್ಳಲು ಪ್ರತಿಕ್ರಮಗಳನ್ನು ಕೈಗೊಳ್ಳುತ್ತೇವೆ. ಅಂತಾರಾಷ್ಟ್ರೀಯ ವ್ಯಾಪಾರ ಕ್ರಮವನ್ನು ಕಾಪಾಡಿಕೊಳ್ಳುವ ಗುರಿ ನಮ್ಮದು, ಎಂದು ಚೀನಾದ ವಾಣಿಜ್ಯ ಸಚಿವಾಲಯ ತಿರುಗೇಟು ನೀಡಿದೆ. ನಮ್ಮ ಮೇಲೆ ವಿಧಿಸಿರುವ ಪ್ರತಿಸುಂಕಕ್ಕೆ ಅಡಿಪಾಯವೇ ಇಲ್ಲ, ಏಕಪಕ್ಷೀಯ ಬೆದರಿಕೆ ತಂತ್ರವಾಗಿದೆ. ನಾವು ಎದಿರೇಟು ಕೊಡುತ್ತೇವೆ. ಪ್ರತಿ ಸುಂಕ ವಿಧಿಸುತ್ತೇವೆ. ಇನ್ನಷ್ಟು ಸುಂಕಗಳು ಹಿಂಬಾಲಿಸುತ್ತವೆ. ಅಮೆರಿಕದ ಏಕಸ್ವಾಮ್ಯ ಕೊನೆಗೊಳಿಸುವವರೆಗೂ ನಾವು ವಿರಮಿಸುವುದಿಲ್ಲ ಎಂದಿದೆ.

**ಚೀನಾಕ್ಕೆ 125% ತೆರಿಗೆ**

**ಆದರೆ, ಅಮೆರಿಕದ ವಿರುದ್ಧ ತೊಡೆ ತಟ್ಟಿರುವ ಚೀನಾಕ್ಕೆ ಮಾತ್ರ 90 ದಿನಗಳ 'ತಡೆ' ಅನ್ವಯಿಸುವುದಿಲ್ಲ ಎಂದು ಟ್ರಂಪ್ ಘೋಷಿಸಿದ್ದಾರೆ. ಅಲ್ಲದೆ, ಚೀನಾ ಸರಕುಗಳ ಮೇಲೆ 125% ಹೆಚ್ಚುವರಿಯಾಗಿ ಸುಂಕ ಹೇರಿದ್ದಾರೆ.**

**ಅಮೆರಿಕ-ಚೀನಾ ಸುಂಕ ಸಮರ ತೀವ್ರ**

**ಅಮೆರಿಕ ವಿಧಿಸಿರುವ ಪ್ರತಿಸುಂಕ ಜಾರಿಗೆ ಕ್ಷಣಗಣನೆ ಶುರುವಾಗಿರುವ ಹೊತ್ತಿನಲ್ಲಿಯೇ ಚೀನಾ ಮತ್ತು ಅಮೆರಿಕ ನಡುವಣ ಸುಂಕ ಸಮರ ತೀವ್ರ ಸ್ವರೂಪ ಪಡೆದಿದೆ. ನಮ್ಮ ಉತ್ಪನ್ನಗಳ ಮೇಲೆ ಹಾಕಿರುವ ಶೇ.34ರಷ್ಟು ಹೆಚ್ಚುವರಿ ಆಮದು ಸುಂಕವನ್ನು ಹಿಂತೆಗೆದುಕೊಳ್ಳದಿದ್ದರೆ ಜಾರಿಗೆ ಬರುವಂತೆ ಚೀನಾದ ಮೇಲೆ ಶೇ.50 ಹೆಚ್ಚುವರಿ ಸುಂಕ ವಿಧಿಸುತ್ತೇವೆ. ಜತೆಗೆ ಚೀನಾದೊಂದಿಗೆ ಎಲ್ಲಾ ಮಾತುಕತೆಗಳನ್ನೂ ಬಂದ್ ಮಾಡುತ್ತೇವೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದರು.**


## ಮತಾಂತರಗೊಂಡು ಪಿಯು ವಿದ್ಯಾರ್ಥಿಯನ್ನು ಮೂರನೇ ಮದುವೆಯಾದ 3 ಮಕ್ಕಳ ತಾಯಿ

**ಉತ್ತರ ಪ್ರದೇಶ:** ಮಹಿಳೆಯೊಬ್ಬಳು ಮತಾಂತರ ಗೊಂಡು ದ್ವಿತೀಯ ಪಿಯುಸಿ ವಿದ್ಯಾರ್ಥಿಯನ್ನು ಮೂರನೇ ಮದುವೆಯಾಗಿರುವ ಘಟನೆ ಉತ್ತರ ಪ್ರದೇಶ ಅಮ್ರೋಹಾದಲ್ಲಿ ನಡೆದಿದೆ. ಆಕೆಗೆ ಈಗಾಗಲೇ ಮೂವರು ಮಕ್ಕಳಿದ್ದಾರೆ. ಮೊದಲು ಶಬ್ನಮ್ ಎಂದು ಕರೆಯಲ್ಪಡುತ್ತಿದ್ದ ಆ ಮಹಿಳೆ ಈಗ ಶಿವಾನಿ ಎಂಬ ಹೆಸರಿನಿಂದ ಗುರುತಿಸಿಕೊಂಡಿದ್ದಾಳೆ. ಇದು ಆಕೆಗೆ ಮೂರನೇ ಮದುವೆ. ಶಿವಾನಿಯು ಪಕ್ಕದ ಮನೆಯ 12ನೇ ತರಗತಿ ವಿದ್ಯಾರ್ಥಿಯೊಂದಿಗೆ ಸಂಬಂಧ ಬೆಳೆಸಿಕೊಂಡಿದ್ದಳು, ಆಕೆ ಎರಡನೇ ಗಂಡನಿಗೆ ವಿಚ್ಛೇದನ ನೀಡಿ ಮೂವರು ಹೆಣ್ಣು ಮಕ್ಕಳನ್ನು ಆತನ ಕಸ್ಟಡಿಯಲ್ಲಿ ಬಿಟ್ಟು, ಸ್ಥಳೀಯದೇವಸ್ಥಾನವೊಂದರಲ್ಲಿ ವಿದ್ಯಾರ್ಥಿಯನ್ನು ಮದುವೆಯಾಗಿದ್ದಾಳೆ.



ಕೆಲವು ದಿನಗಳ ಹಿಂದೆ ಎರಡೂ ಕುಟುಂಬಗಳ ನಡುವೆ ಪಂಚಾಯಿತಿ ನಡೆದಿತ್ತು, ಮಹಿಳೆ ವಯಸ್ಕಳಾಗಿರುವುದರಿಂದ ಅವಳು ಬಯಸಿದ ಸ್ಥಳದಲ್ಲಿ ವಾಸಿಸಲು ಸ್ವತಂತ್ರಳು ಎಂದು ನಿರ್ಧರಿಸಲಾಯಿತು. ಶಿವಾನಿ ತನ್ನ ಸ್ವಂತ ಇಚ್ಛೆಯಿಂದ ಮದುವೆಯಾಗಿದ್ದು, ತನ್ನ ನಿರ್ಧಾರದಿಂದ ತೃಪ್ತಳಾಗಿದ್ದಾಳೆ ಎಂದು ಹೇಳಿದರು. ವಿದ್ಯಾರ್ಥಿ ಕೂಡ ಅದನ್ನೇ ಹೇಳಿದ್ದು, ತಾವು ಸಂತೋಷವಾಗಿದ್ದೇವೆ ಮತ್ತು ಹಸ್ತಕ್ಷೇಪ ಬಯಸುವುದಿಲ್ಲ ಎಂದು ಹೇಳಿದ್ದಾನೆ.

ಇದಕ್ಕೂ ಮೊದಲು, ಶಬ್ನಮ್ ಅಲಿಗಢದಲ್ಲಿ ವಿವಾಹವಾಗಿದ್ದರು, ಆದರೆ ನಂತರ ದಂಪತಿ ವಿಚ್ಛೇದನ ಪಡೆದರು. ಅವರ ಎರಡನೇ ಮದುವೆ ಸುಮಾರು ಎಂಟು ವರ್ಷಗಳ ಹಿಂದೆ ನಡೆದಿತ್ತು. ಒಂದು ವರ್ಷದ ಹಿಂದೆ, ಅವರ ಪತಿ ರಸ್ತೆ ಅಪಘಾತದಲ್ಲಿ ಗಾಯಗೊಂಡು ಅಂಗವಿಕಲರಾದರು, ನಂತರ ಆಕೆಯ ಸಂಬಂಧ ಬಾಲಕನೊಂದಿಗೆ ಶುರುವಾಗಿತ್ತು ಸಂಬಂಧ ಪ್ರಾರಂಭವಾಯಿತು. ಇಬ್ಬರೂ ಶಾಂತಿಯುತವಾಗಿ ಒಟ್ಟಿಗೆ ಬದುಕಬೇಕೆಂದು ನಾವು ಆಶಿಸುತ್ತೇವೆ ಎಂದು ಬಾಲಕನ ತಂದೆ ತಮ್ಮ ಮಗನ ನಿರ್ಧಾರವನ್ನು ಬೆಂಬಲಿಸುವುದಾಗಿ ಹೇಳಿದ್ದಾರೆ ಎಂದು ಸುದ್ದಿ ಸಂಸ್ಥೆ ಪಿಟಿಐ ವರದಿ ಮಾಡಿದೆ.




# ರಾಯುಡು ಚಳಿ ಬಿಡಿಸಿದ ಸಿಂಗ್ ಸಿಧು





ಇಂಡಿಯನ್ ಪ್ರೀಮಿಯರ್ ಲೀಗ್‌ಗೆ ಸಂಬಂಧಿಸಿದ ವಿಡಿಯೋವೊಂದು ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಈ ವಿಡಿಯೋದಲ್ಲಿ ಕಾಮೆಂಟೇಟರ್‌ಗಳಾದ ನವಜೋತ್ ಸಿಂಗ್ ಸಿಧು ಹಾಗೂ ಅಂಬಾಟಿ ರಾಯುಡು ಮಾತಿನ ಚಕಮಕಿ ನಡೆಸುತ್ತಿರುವುದು ಕಾಣಬಹುದು. ಅಷ್ಟಕ್ಕೂ ಇಬ್ಬರ ನಡುವಣ ವಾಕ್ಸಮರಕ್ಕೆ ಕಾರಣವೇನು ಎಂದು ನೋಡುವುದಾದರೆಚೆನ್ನೈ ಸೂಪರ್ ಕಿಂಗ್ಸ್ ಹಾಗೂ ಪಂಜಾಬ್ ಕಿಂಗ್ಸ್ ನಡುವಣ ಪಂದ್ಯದ ವೇಳೆ ನವಜೋತ್ ಸಿಂಗ್ ಸಿಧು ಹಾಗೂ ಅಂಬಾಟಿ ರಾಯುಡು ಕಾಮೆಂಟೇಟರ್‌ಗಳಾಗಿ ಕಾಣಿಸಿಕೊಂಡಿದ್ದರು. ಸಿಎಸ್‌ಕೆ ತಂಡವು ಶಿವಂ ದುಬೆ ವಿಕೆಟ್ ಕಳೆದುಕೊಳ್ಳುತ್ತಿದ್ದಂತೆ ಮಹೇಂದ್ರ ಸಿಂಗ್ ಧೋನಿ ಬ್ಯಾಟಿಂಗ್‌ಗೆ ಆಗಮಿಸಿದ್ದರು. ಧೋನಿ ಮೈದಾನಕ್ಕೆ ಎಂಟ್ರಿ ಕೊಡುತ್ತಿದ್ದಂತೆ ಸಿಧು, ಇವತ್ತು ಮಾಹಿ ಓಡುತ್ತಿದ್ದಾರೆ. ಇದರ ಉದ್ದೇಶ ಕೂಡ ಸ್ಪಷ್ಟವಾಗಿದೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ರಾಯುಡು ''ಹೌದು, ಧೋನಿ ಇಂದು ಬ್ಯಾಟ್ ಅಲ್ಲ, ಕತ್ತಿ ಹಿಡಿದುಕೊಂಡು ಬರುತ್ತಿರುದ್ದಾರೆ ಎಂದಿದ್ದಾರೆ. ಈ ಪ್ರತಿಕ್ರಿಯೆಗೆ ಕೋಪಗೊಂಡ ಸಿಧು, ''ಹೇ ಮನುಷ್ಯ, ಅವನು ಬ್ಯಾಟಿಂಗ್ ಮಾಡಲು ಬರುತ್ತಿದ್ದಾನೆ, ಯುದ್ಧ ಮಾಡಲು ಅಲ್ಲ'' ಮುಟ್ಟಿ ನೋಡಿಕೊಳ್ಳುವಂತಹ ಉತ್ತರ ನೀಡಿದ್ದಾರೆ. ಇದರಿಂದ ವಿಚಲಿತರಾದ ಅಂಬಾಟಿ ರಾಯುಡು, ನೀವು ಊಸರವಳ್ಳಿವಂತೆ ಪ್ರತಿ ಬಾರಿ ತಂಡವನ್ನು ಬದಲಾಯಿಸುತ್ತೀರಿ ಎಂದು ಕಾಲೆಳೆದಿದ್ದಾರೆ. ಅಂಬಾಟಿ ರಾಯುಡು ಅವರ ಈ ಪ್ರತಿಕ್ರಿಯೆಯಿಂದ ಕೋಪಗೊಂಡ ನವಜೋತ್ ಸಿಂಗ್ ಸಿಧು, ಊಸರವಳ್ಳಿ ಯಾರಿಗಾದರೂ ಆರಾಧ್ಯದೈವವಾಗಿದ್ದರೆ, ಅದು ನಿಮ್ಮದು ಎನ್ನುವ ಮೂಲಕ ಖಡಕ್ ಉತ್ತರ ನೀಡಿದ್ದಾರೆ. ಇದೀಗ ಈ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ.

# ಡೆಲ್ಲಿ ಕ್ಯಾಪಿಟಲ್ಸ್ ಬೌಲಿಂಗ್‌ಗೆ ಮಕಾಡೆ ಮಲಗಿದ ಆರ್‌ಸಿಬಿ

■ ಅಲ್ಪ ಮೊತ್ತದ ಟಾರ್ಗೆಟ್ ನೀಡಿದ ಬೆಂಗಳೂರು ■ ಕುಲ್‌ದೀಪ್ ಮಿಂಚಿನ ಬೌಲಿಂಗ್



ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಐಪಿಎಲ್ ಪಂದ್ಯ ಆಡುತ್ತಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಆರಂಭದಲ್ಲಿ ಘರ್ಜನೆ ಮಾಡಿ, ಪಂದ್ಯದ ನಡುವೆ ಪ್ರಮುಖ ವಿಕೆಟ್‌ಗಳನ್ನ ಕಳೆದುಕೊಂಡು ಅಲ್ಪಮೊತ್ತದ ಗುರಿ ನೀಡಿದೆ. ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 164 ರನ್‌ಗಳ ಟಾರ್ಗೆಟ್ ನೀಡಿದೆ.

ಎಂ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಟಾಸ್ ಗೆದ್ದ ಡೆಲ್ಲಿ ಕ್ಯಾಪಿಟಲ್ಸ್ ನಾಯಕ ಅಕ್ಷರ್ ಪಟೇಲ್, ಆರ್‌ಸಿಬಿಯನ್ನು ಬ್ಯಾಟಿಂಗ್‌ಗೆ ಆಹ್ವಾನ ಮಾಡಿದರು. ಬೆಂಗಳೂರು ಪರ ಆರಂಭಿಕ ಬ್ಯಾಟರ್ ಆಗಿ ಕ್ರೀಸ್‌ಗೆ ಆಗಮಿಸಿದ ಫಿಲಿಪ್ ಸಾಲ್ಟ್ ಹಾಗೂ ವಿರಾಟ್ ಕೊಹ್ಲಿ ಒಳ್ಳೆಯ ಆರಂಭ ಪಡೆದರೂ ಇನ್ನು ಕೆಲ ಸಮಯ ಕ್ರೀಸ್‌ನಲ್ಲಿ ಇರಬೇಕಿತ್ತು. ಆದರೆ ಆತುರದಿಂದಲೇ ಫಿಲಿಪ್ ಸಾಲ್ಟ್ ವಿಕೆಟ್ ಒಪ್ಪಿಸಿದ್ದಾರೆ.



ಡೆಲ್ಲಿ ನಾಯಕ ಅಕ್ಷರ್ ಪಟೇಲ್ ಬೌಲಿಂಗ್‌ನಲ್ಲಿ ಸಾಲ್ಟ್, ಜೋರಾಗಿ ಶಾಟ್ ಮಾಡಿ ರನ್ ಗಳಿಸಲು ಮುಂದಾಗಿ ಅರ್ಧ ಪಿಚ್‌ವರೆಗೆ ಹೋಗಿ ಹಿಂದಕ್ಕೆ ಬರಲು ಯತ್ನಿಸಿದರು. ಆದರೆ ಇನ್ನೊಂದು ಬದಿಯಲ್ಲಿದ್ದ ವಿರಾಟ್ ಕೊಹ್ಲಿ ರನ್ ಓಡಲು ಹೋಗಿ ಮತ್ತೆ ಹಿಂದಕ್ಕೆ ಬಂದರು. ತಕ್ಷಣ ಬಾಲ್ ವಿಕೆಟ್ ಕೀಪರ್ ಕೆ.ಎಲ್ ರಾಹುಲ್‌ಗೆ ಎಸೆದಿದ್ದರಿಂದ ಸ್ಟಂಪ್ ಮಾಡಿ ಸಾಲ್ಟ್ ಅವರನ್ನು 37 ರನ್‌ಗೆ ಔಟ್ ಮಾಡಿದರು.

3ನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಆಗಮಿಸಿದ ದೇವದತ್ ಪಡಿಕ್ಕಲ್ ಒಂದು ರನ್‌ಗೆ ಹೀಗೆ ಬಂದು ಹಾಗೇ ಹೊರ ನಡೆದರು. ಪಡಿಕ್ಕಲ್ ಬೆನ್ನಲ್ಲೇ ವಿರಾಟ್ ಕೊಹ್ಲಿ (22) ಕೂಡ ಮಿಚೆಲ್ ಸ್ಟಾರ್ಕ್‌ಗೆ ಕ್ಯಾಚ್ ಕೊಟ್ಟು ವಿಕೆಟ್ ಒಪ್ಪಿಸಿದರು. ರಜತ್ ಪಾಟಿದಾರ್ 25 ರನ್‌ಗಳಿಂದ ಡೆಲ್ಲಿ ಬೌಲರ್ಸ್‌ಗಳನ್ನು ಕಾಡಿದರು. ರಜತ್ ಒಂದು ಜೀವದಾನ ಪಡೆದರು ಅದನ್ನು ಸರಿಯಾಗಿ ಬಳಕೆ ಮಾಡಿಕೊಳ್ಳಲಿಲ್ಲ.

ಆಲ್‌ರೌಂಡರ್ ಕೃನಾಲ್ ಪಾಂಡ್ಯ ಹಾಗೂ ಟಿಮ್ ಡೇವಿಡ್ ಬೌಲರ್‌ಗಳಿಗೆ ಬೆವರಿಳಿಸಿ ಆರ್‌ಸಿಬಿಯ ರನ್‌ಗಳನ್ನು 150ರ ಗಡಿ ದಾಟಿಸಿದರು. ಪಾಂಡ್ಯ 18 ಎಸೆತಗಳಿಗೆ 18 ರನ್ ಗಳಿಸಿದ್ರೆ, ಡೇವಿಡ್ 20 ಬಾಲ್‌ಗಳಲ್ಲಿ 2 ಫೋರ್ ಹಾಗೂ 4 ಭರ್ಜರಿ ಸಿಕ್ಸರ್‌ಗಳಿಂದ 37 ರನ್‌ಗಳಿಸಿದರು. ಇವರ ಬ್ಯಾಟಿಂಗ್ ಬಲದಿಂದ ಆರ್‌ಸಿಬಿ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 164 ರನ್‌ಗಳ ಟಾರ್ಗೆಟ್ ನೀಡಿದೆ.

# ರಾಜಸ್ಥಾನ್ ರಾಯಲ್ಸ್ ಆಟಗಾರರಿಗೆ ದಂಡ



ರಾಜಸ್ಥಾನ್ ರಾಯಲ್ಸ್ ತಂಡದ ಆಟಗಾರರಿಗೆ ಬಿಸಿಸಿಐ ದಂಡ ವಿಧಿಸಿದೆ. ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ನಡೆದ ಗುಜರಾತ್ ಟೈಟಾನ್ಸ್ ವಿರುದ್ಧದ ಈ ಪಂದ್ಯದಲ್ಲಿ ನಿಗದಿತ ಸಮಯದೊಳಗೆ ರಾಜಸ್ಥಾನ್ ರಾಯಲ್ಸ್ ತಂಡವು 20 ಓವರ್‌ಗಳನ್ನು ಪೂರ್ಣಗೊಳಿಸಿರಲಿಲ್ಲ. ಹೀಗಾಗಿ ಆರ್‌ಆರ್ ತಂಡದ ನಾಯಕ ಸಂಜು ಸ್ಯಾಮ್ಸನ್‌ಗೆ 24 ಲಕ್ಷ ರೂ. ದಂಡ ವಿಧಿಸಲಾಗಿದೆ. ಐಪಿಎಲ್ ನಿಯಮದ ಪ್ರಕಾರ, ಪ್ರತಿ ತಂಡಗಳು 20 ಓವರ್‌ಗಳನ್ನು 1 ಗಂಟೆ 30 ನಿಮಿಷಗಳಲ್ಲಿ ಪೂರ್ಣಗೊಳಿಸಬೇಕು. ಒಂದು ವೇಳೆ ಇದಕ್ಕಿಂತ ಹೆಚ್ಚಿನ ಸಮಯ ತೆಗೆದುಕೊಂಡರೆ ಬೌಂಡರಿ ಲೈನ್‌ನಿಂದ ಓರ್ವ ಫೀಲ್ಡರ್‌ನನ್ನು ಕಡಿತ ಮಾಡಿ ಥರ್ಟಿ ಯಾರ್ಡ್ ಸರ್ಕಲ್‌ನಲ್ಲಿ ನಿಲ್ಲಿಸಬೇಕಾಗುತ್ತದೆ. ಅಲ್ಲದೆ ಹಾಗೆಯೇ ಈ ತಪ್ಪನ್ನು ಮಾಡಿದ ತಂಡದ ನಾಯಕನಿಗೆ 12 ಲಕ್ಷ ರೂ. ದಂಡ ವಿಧಿಸಲಾಗುತ್ತದೆ. ಇದೇ ತಪ್ಪನ್ನು 2ನೇ ಬಾರಿ ಪುನರಾವರ್ತಿಸಿದರೆ, ನಾಯಕನಿಗೆ 24 ಲಕ್ಷ ರೂ. ದಂಡ ವಿಧಿಸಲಾಗುತ್ತದೆ. ಅದರಂತೆ ಇದೀಗ ರಾಜಸ್ಥಾನ್ ರಾಯಲ್ಸ್ ತಂಡವು ಎರಡನೇ ಬಾರಿ ನಿಗದಿತ ಸಮಯದೊಳಗೆ 20 ಓವರ್‌ಗಳನ್ನು ಪೂರ್ಣಗೊಳಿಸಿಲ್ಲ. ಹೀಗಾಗಿ ಸಂಜು ಸ್ಯಾಮ್ಸನ್‌ಗೆ 24 ಲಕ್ಷ ರೂ. ದಂಡ ವಿಧಿಸಲಾಗಿದೆ.

ಐಪಿಎಲ್ ನಿಯಮದ ಪ್ರಕಾರ, 2 ಬಾರಿ ಸ್ಲೋ ಓವರ್ ತಪ್ಪು ಮಾಡಿದರೆ, ಆ ತಂಡದ ನಾಯಕನಿಗೆ 24 ಲಕ್ಷ ರೂ. ದಂಡ ವಿಧಿಸಲಾಗುತ್ತದೆ. ಇದರ ಜೊತೆಗೆ ಪ್ಲೇಯಿಂಗ್ ಇಲೆವೆನ್‌ನ 10 ಆಟಗಾರರಿಗೆ ತಲಾ 6 ಲಕ್ಷ ಅಥವಾ ಪಂದ್ಯದ ಶುಲ್ಕದ 25% ದಂಡವನ್ನು ವಿಧಿಸಲಾಗುತ್ತದೆ.

# ಒಲಿಂಪಿಕ್ಸ್‌ನಲ್ಲಿ ಕೇವಲ 6 ತಂಡಗಳಿಗೆ ಮಾತ್ರ ಅವಕಾಶ

2028 ರಲ್ಲಿ ಲಾಸ್ ಏಂಜಲೀಸ್‌ನಲ್ಲಿ ನಡೆಯಲಿರುವ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಕೇವಲ 6 ಕ್ರಿಕೆಟ್ ತಂಡಗಳಿಗೆ ಮಾತ್ರ ಅವಕಾಶ ದೊರೆಯಲಿದೆ. 128 ವರ್ಷಗಳ ಇತಿಹಾಸ ಹೊಂದಿರುವ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಇದೇ ಮೊದಲ ಬಾರಿ ಕ್ರಿಕೆಟ್ ಅನ್ನು ಪರಿಚಯಿಸಲಾಗುತ್ತಿದ್ದು, ಅದರಂತೆ ಪುರುಷರು ಮತ್ತು ಮಹಿಳೆಯರ ಎರಡೂ ವಿಭಾಗಗಳಲ್ಲಿ ತಲಾ ಆರು ತಂಡಗಳು ಭಾಗವಹಿಸಲಿವೆ ಎಂದು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ದೃಢಪಡಿಸಿದೆ.

ಇನ್ನು ಈ ಕ್ರೀಡಾಕೂಟದಲ್ಲಿ ಕ್ರಿಕೆಟ್ ಅನ್ನು ಟಿ20 ಮಾದರಿಯಲ್ಲಿ ಆಯೋಜಿಸಲಾಗುತ್ತದೆ. ಹೀಗಾಗಿ ಐಸಿಸಿ ಟಿ20 ತಂಡಗಳ ಶ್ರೇಯಾಂಕಗಳ ಆಧಾರದ ಮೇಲೆ ತಂಡಗಳು ಅರ್ಹತೆ ಪಡೆಯಲಿವೆ. ಅಂದರೆ ಒಲಿಂಪಿಕ್ಸ್ ಅರ್ಹತೆಗೆ ನಿಗದಿ ಮಾಡಲಾದ ಸಮಯದ ವೇಳೆ ಐಸಿಸಿ ತಂಡಗಳ ಶ್ರೇಯಾಂಕವನ್ನು ಪರಿಗಣಿಸಿ 6 ತಂಡಗಳನ್ನು ಆಯ್ಕೆ ಮಾಡಲಾಗುತ್ತದೆ. ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) 12 ಪೂರ್ಣ ಸದಸ್ಯರ ತಂಡಗಳನ್ನು ಒಲಿಂಪಿಕ್ಸ್ ಸಮಿತಿಗೆ ಶಿಫಾರಸ್ಸು ಮಾಡಲಿದ್ದು, ಈ ತಂಡಗಳ ಶ್ರೇಯಾಂಕದ ಆಧಾರ ಮೇಲೆ 6 ತಂಡಗಳನ್ನು ಒಲಿಂಪಿಕ್ಸ್ ಅಂಗಳದಲ್ಲಿ ಕಣಕ್ಕಿಳಿಸಲಾಗುತ್ತದೆ ಎಂದು ವರದಿಯಾಗಿದೆ.



**ಐಸಿಸಿ ಪೂರ್ಣ ಸದಸ್ಯ ತಂಡಗಳು**

ಭಾರತ, ಅಫ್ಘಾನಿಸ್ತಾನ್, ಆಸ್ಟ್ರೇಲಿಯಾ, ಬಾಂಗ್ಲಾದೇಶ್, ಇಂಗ್ಲೆಂಡ್, ಐರ್ಲೆಂಡ್, ನ್ಯೂಝಿಲೆಂಡ್, ಪಾಕಿಸ್ತಾನ್, ಸೌತ್ ಆಫ್ರಿಕಾ, ಶ್ರೀಲಂಕಾ, ವೆಸ್ಟ್ ಇಂಡೀಸ್, ಝಿಂಬಾಬ್ವೆ, ಇದಾಗ್ಯೂ ಯಾವುದಾದರೂ ಸಹ ಸದಸ್ಯ ರಾಷ್ಟ್ರದ ತಂಡ ಮುಂದಿನ 2 ವರ್ಷಗಳ ಒಳಗೆ ಐಸಿಸಿ ಟಿ20 ತಂಡಗಳ ಶ್ರೇಯಾಂಕ ಪಟ್ಟಿಯ ಟಾಪ್-6 ನಲ್ಲಿ ಕಾಣಿಸಿಕೊಂಡರೆ ಅವರು ಅರ್ಹತೆ ಪಡೆಯಲಿದ್ದಾರೆ.

## ಪಾಕಿಸ್ತಾನಕ್ಕೆ ಚಿಂತೆ ಶುರು

**ಪಾಕಿಸ್ತಾನ್ ತಂಡಕ್ಕೆ ನಡುಕ ಶುರು**

ಪ್ರಸ್ತುತ ಟಿ20 ತಂಡಗಳ ಶ್ರೇಯಾಂಕ ಪಟ್ಟಿಯಲ್ಲಿ ಭಾರತ ತಂಡ ಅಗ್ರಸ್ಥಾನದಲ್ಲಿದ್ದರೆ, ಆಸ್ಟ್ರೇಲಿಯಾ ದ್ವಿತೀಯ ಸ್ಥಾನದಲ್ಲಿ ಕಾಣಿಸಿಕೊಂಡಿದೆ. ಇನ್ನು ಇಂಗ್ಲೆಂಡ್ ಮತ್ತು ನ್ಯೂಝಿಲೆಂಡ್ ತಂಡಗಳು ಕ್ರಮವಾಗಿ 3ನೇ ಮತ್ತು 4ನೇ ಸ್ಥಾನಗಳಲ್ಲಿದೆ. ಐದನೇ ಸ್ಥಾನದಲ್ಲಿ ವೆಸ್ಟ್ ಇಂಡೀಸ್ ತಂಡವಿದ್ದರೆ, ಆರನೇ ಸ್ಥಾನದಲ್ಲಿ ಸೌತ್ ಆಫ್ರಿಕಾ ತಂಡವಿದೆ.

ಇನ್ನು ಪಾಕಿಸ್ತಾನ್ ತಂಡ 7ನೇ ಸ್ಥಾನದಲ್ಲಿದೆ. ಅಂದರೆ ಒಲಿಂಪಿಕ್ಸ್‌ಗೆ ಅಗ್ರ 6 ತಂಡಗಳು ಮಾತ್ರ ಅರ್ಹತೆ ಪಡೆಯಲಿದೆ. ಮುಂದಿನ ಒಂದು ವರ್ಷದೊಳಗೆ ಪಾಕಿಸ್ತಾನ್ ತಂಡ ಟಾಪ್-6 ನಲ್ಲಿ ಕಾಣಿಸಿಕೊಳ್ಳದಿದ್ದರೆ, ಒಲಿಂಪಿಕ್ಸ್‌ನಿಂದ ಹೊರಬೀಳುವುದು ಖಚಿತ. ಹೀಗಾಗಿ ಪಾಕ್ ಪಡೆಗೆ ಮುಂಬರುವ ಟಿ20 ಸರಣಿಗಳು ತುಂಬಾ ಮಹತ್ವದ್ದಾಗಿ ಪರಿಣಮಿಸಿದೆ.



# ಅಖಿಲ್ ಅಕ್ಕಿನೇನಿಗೆ ಶ್ರೀಲೀಲಾ ಜೋಡಿ

## ಹಳ್ಳಿ ಹುಡುಗಿ ಗೆಟಪ್‌ನಲ್ಲಿ ಕಿಸ್ ನಟಿ

ಕನ್ನಡದ ಕಿಸ್ ನಟಿ ಶ್ರೀಲೀಲಾ ತೆಲುಗು ಹಾಗೂ ಬಾಲಿವುಡ್‌ನಲ್ಲಿ ಬ್ಯುಸಿಯಾಗಿದ್ದಾರೆ. 'ಪುಷ್ಪ 2' ಕಿಸ್ಸಿಸ್ ಹಾಡಿನ ಸಕ್ಸಸ್ ಹಾಗೂ 'ರಾಬಿನ್‌ಹುಡ್' ಚಿತ್ರದ ಬಳಿಕ ಮತ್ತೊಂದು ಬಗ್ಗೆ ಗುಡ್ ನ್ಯೂಸ್ ಕೊಟ್ಟಿದ್ದಾರೆ. ರಗಡ್ ಅವತಾರ ತಾಳಿರೋ ಅಖಿಲ್ ಜೊತೆ ಹಳ್ಳಿ ಹುಡುಗಿಯ ಗೆಟಪ್‌ನಲ್ಲಿ ಶ್ರೀಲೀಲಾ ಎಂಟ್ರಿ ಕೊಟ್ಟಿದ್ದಾರೆ. ಚಿತ್ರದ ಟೈಟಲ್ ಸಮೇತ ಫಸ್ಟ್ ಲುಕ್ ರಿವೀಲ್ ಆಗಿದೆ. ಹೆಚ್ಚು ಗ್ಲ್ಯಾಮರಸ್ ಪಾತ್ರಗಳಿಂದ ಗುರುತಿಸಿಕೊಂಡಿದ್ದ ಶ್ರೀಲೀಲಾ 'ಭಗವಂತ ಕೇಸರಿ' ಚಿತ್ರದ ಬಳಿಕ ಮತ್ತೊಮ್ಮೆ ಹಳ್ಳಿ ಹುಡುಗಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಹೊಸ ಸಿನಿಮಾದಲ್ಲಿ ಖಡಕ್ ಆಗಿ ಡೈಲಾಗ್ ಹೊಡೆದು ರಗಡ್ ಅವತಾರ ತಾಳಿರೋ ಅಖಿಲ್‌ಗೆ ಶ್ರೀಲೀಲಾ ನಾಯಕಿಯಾಗಿದ್ದಾರೆ.

ಈ ಸಿನಿಮಾಗೆ 'ಲೆನಿನ್' ಎಂದು ಟೈಟಲ್ ಇಡಲಾಗಿದೆ. ಈ ಚಿತ್ರದ ಮೊದಲ ಝಲಕ್ ನೋಡಿ ಫ್ಯಾನ್ಸ್ ಮೆಚ್ಚುಗೆ ಸೂಚಿಸಿದ್ದಾರೆ.

ಈ ಸಿನಿಮಾವನ್ನು ಮುರುಳಿ ಕಿಶೋರ್ ಅಬ್ಬರು ನಿರ್ದೇಶನ ಮಾಡುತ್ತಿದ್ದಾರೆ. ಸಿತಾರಾ ಸಂಸ್ಥೆ ಜೊತೆ ಅನ್ನಪೂರ್ಣ ಸ್ಟುಡಿಯೋ ಜಂಟಿಯಾಗಿ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದೆ. ಅಂದಹಾಗೆ, ಉಸ್ತಾದ್ ಭಗತ್ ಸಿಂಗ್, ಆಶಿಕಿ 3, ಮಾಸ್ ಜಾತ್ರಾ, ಜ್ಯೂನಿಯರ್ ಸೇರಿದಂತೆ ಹಲವು ಸಿನಿಮಾಗಳು ನಟಿಯ ಕೈಯಲ್ಲಿವೆ.


# ಪ್ರಭಾಸ್ ಚಿತ್ರದಿಂದ ರಶ್ಮಿಕಾ ಔಟ್..?

ಕೊಡಗಿನ ಬೆಡಗಿ ರಶ್ಮಿಕಾ ಮಂದಣ್ಣ ನಟಿಸಿದ 'ಸಿಕಂದರ್' ಸಿನಿಮಾ ಗಲ್ಲಾಪೆಟ್ಟಿಗೆಯಲ್ಲಿ ಕಲೆಕ್ಷನ್ ಮಾಡೋದ್ರಲ್ಲಿ ಸೋತಿದೆ. ಈ ಬೆನ್ನಲ್ಲೇ ಪ್ರಭಾಸ್ ನಟನೆಯ 'ಸ್ಪಿರಿಟ್' ಚಿತ್ರದಿಂದ ರಶ್ಮಿಕಾ ಹೊರಬಿದ್ದಿದ್ದಾರೆ ಎನ್ನಲಾದ ಸುದ್ದಿಯೊಂದು ಈಗ ಚರ್ಚೆಗೆ ಗ್ರಾಸವಾಗಿದೆ. ಸಲ್ಮಾನ್ ಜೊತೆ ಬ್ಯಾಕ್ ಟು ಬ್ಯಾಕ್ 3 ಸಕ್ಸಸ್‌ಫುಲ್ ಸಿನಿಮಾ ಕೊಟ್ಟು ಗೆದ್ದ ರಶ್ಮಿಕಾ ಮಂದಣ್ಣ ಇದ್ರೂ ಕೂಡ 'ಸಿಕಂದರ್' ಚಿತ್ರ ಗೆಲ್ಲೋದ್ರಲ್ಲಿ ವಿಫಲವಾಯ್ತು. ಈ ಸೋಲಿನ ಕಹಿಯ ಬೆನ್ನಲ್ಲೇ ಮತ್ತೊಂದು ಶಾಕಿಂಗ್ ನ್ಯೂಸ್ ಸಿಕ್ಕಿದೆ. ಪ್ರಭಾಸ್ ನಟನೆಯ 'ಸ್ಪಿರಿಟ್' ಚಿತ್ರಕ್ಕೆ ರಶ್ಮಿಕಾನೇ ನಾಯಕಿ ಎಂಬ ವಿಚಾರ ದಟ್ಟವಾಗಿ ಕೇಳಿ ಬಂದಿತ್ತು. ಸಿಕಂದರ್ ಸೋಲಿನ ಹಿನ್ನೆಲೆ ಚಿತ್ರತಂಡ ಬೇರೆ ನಾಯಕಿಯನ್ನು ಆಯ್ಕೆ ಮಾಡಿಕೊಳ್ಳಲು ನಿರ್ಧರಿಸಿದೆ ಎನ್ನಲಾಗಿದೆ. ಸದ್ಯ ಈ ಸುದ್ದಿ ಕೇಳಿ ಶ್ರೀವಲ್ಲಿ ಫ್ಯಾನ್ಸ್‌ಗೆ ಬೇಸರದಲ್ಲಿದ್ದಾರೆ. 'ಅನಿಮಲ್' ಖ್ಯಾತಿಯ ಸಂದೀಪ್ ರೆಡ್ಡಿ ವಂಗಾ ನಿರ್ದೇಶನದ 'ಸ್ಪಿರಿಟ್' ಸಿನಿಮಾ ಇದೇ ಮೇ ರಿಂದ ಶುರುವಾಗಲಿದೆ. ಥೈಲ್ಯಾಂಡ್‌ನಲ್ಲಿ ಶೂಟಿಂಗ್ ಮಾಡಲು ಚಿತ್ರತಂಡ ತೀರ್ಮಾನಿಸಿದೆ. ಮುಂದಿನ ರಿಲೀಸ್‌ಗೆ ತಂಡ ಯೋಜನೆ ಹಾಕಿಕೊಂಡಿದೆ. ದಿ ರಾಜಾ ಸಾಬ್ ಸಿನಿಮಾ ಮುಗಿಸಿ ಸದ್ಯದಲ್ಲೇ ಪ್ರಭಾಸ್ ಸ್ಪಿರಿಟ್ ತಂಡವನ್ನು ಸೇರಿಕೊಳ್ಳಲಿದ್ದಾರೆ.



# ಅಟ್ಲಿ, ಅಲ್ಲು ಅರ್ಜುನ್ ಸಿನಿಮಾಗೆ ಸಮಂತಾ ನಾಯಕಿ

ಅಲ್ಲು ಅರ್ಜುನ್ 'ಪುಷ್ಪ 2' ಸಕ್ಸಸ್ ಬಳಿಕ 'ಜವಾನ್' ಡೈರೆಕ್ಟರ್ ಅಟ್ಲಿ ಜೊತೆ ಕೈಜೋಡಿಸಿದ್ದಾರೆ. ಇಬ್ಬರ ಪ್ರಾಜೆಕ್ಟ್ ಬಗ್ಗೆ ಈಗಾಗಲೇ ಅಧಿಕೃತವಾಗಿ ಘೋಷಣೆ ಕೂಡ ಆಗಿದೆ. ಈ ಬೆನ್ನಲ್ಲೇ ಅಲ್ಲು ಅರ್ಜುನ್‌ಗೆ ನಾಯಕಿಯಾಗಿ ಸಮಂತಾ ಜೊತೆಯಾಗ್ತಿದ್ದಾರೆ ಎನ್ನಲಾದ ಸುದ್ದಿಯೊಂದು ಈಗ ಚರ್ಚೆಗೆ ಗ್ರಾಸವಾಗಿದೆ. ಅಲ್ಲು ಅರ್ಜುನ್‌ಗಾಗಿ ಭಿನ್ನವಾಗಿರೋ ಕಥೆಯನ್ನೇ ಅಟ್ಲಿ ಹೆಣೆದಿದ್ದಾರೆ. ಎಂದೂ ನಟಿಸಿರದ ವಿಭಿನ್ನ ಪಾತ್ರದ ಮೂಲಕ ಬರಲು ನಟ ರೆಡಿಯಾಗಿದ್ದಾರೆ. 800 ಕೋಟಿ ರೂ. ವೆಚ್ಚದಲ್ಲಿ ಸಿನಿಮಾ ನಿರ್ಮಾಣ ಆಗ್ತಿದೆ. ಹೀಗಿರುವಾಗ ಈ ಚಿತ್ರಕ್ಕೆ ಸಮಂತಾ ಹೀರೋಯಿನ್ ಎಂದು ಗುಸು ಗುಸು ಶುರುವಾಗಿದೆ. ಅದಕ್ಕೆ ಪೂರಕವೆಂಬಂತೆ ಚೆನ್ನೈನಲ್ಲಿರುವ ಡೈರೆಕ್ಟರ್ ಅಟ್ಲಿ ಆಫೀಸ್‌ಗೆ ಸಮಂತಾ ಭೇಟಿ ಕೊಟ್ಟಿರುವ ವಿಡಿಯೋ ಕೂಡ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಹೀಗಾಗಿ ಅಲ್ಲು ಅರ್ಜುನ್‌ಗೆ ಸಮಂತಾ ನಾಯಕಿ ಎಂಬ ವಿಚಾರ ಫ್ಯಾನ್ಸ್‌ಗೆ ದಟ್ಟವಾಗಿದೆ. ಈ ಹಿಂದೆ ಅಲ್ಲು ಅರ್ಜುನ್ ಜೊತೆ ಹಲವು ಪ್ರಾಜೆಕ್ಟ್‌ಗಳಲ್ಲಿ ಸಮಂತಾ ನಟಿಸಿದ್ದಾರೆ. ಡೈರೆಕ್ಟರ್ ಅಟ್ಲಿ ಜೊತೆಗೆ ಕೆಲಸ ಮಾಡಿ ಕೂಡ ಅವರು ಪಳಗಿದ್ದಾರೆ.



ಸಿನಿ ವಾಹಿನಿ

# ಏ.16ರಿಂದ ಬಿಲ್ಲ ರಂಗ ಭಾಷಾ

'ಮಾರ್ಕ್' ಸಿನಿಮಾದ ಸಕ್ಸಸ್ ಬಳಿಕ ಸುದೀಪ್ 'ಬಿಲ್ಲ ರಂಗ ಭಾಷಾ' ಚಿತ್ರಕ್ಕಾಗಿ ತಯಾರಿ ಮಾಡಿಕೊಳ್ಳಿದ್ದಾರೆ. ಹೀಗಿರುವಾಗ ಈ ಸಿನಿಮಾದ ಶೂಟಿಂಗ್ ಆರಂಭ ಆಗೋದು ಯಾವಾಗ ಎಂಬುದರ ಬಗ್ಗೆ ಖುದ್ದು ಸುದೀಪ್ ಸೋಷಿಯಲ್ ಮೀಡಿಯಾದಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

'ಬಿಲ್ಲ ರಂಗ ಭಾಷಾ' ಸಿನಿಮಾ ಕುರಿತ ಅಪ್‌ಡೇಟ್‌ಗಾಗಿ ಕಾಯುತ್ತಿದ್ದ ಫ್ಯಾನ್ಸ್‌ಗೆ ಸುದೀಪ್ ಸಿಹಿಸುದ್ದಿ ಕೊಟ್ಟಿದ್ದಾರೆ. ಏ.16ರಂದು ಏನು ನಡೆಯಲಿದೆ ಗೊತ್ತೆ 'ಬಿಲ್ಲ ರಂಗ ಭಾಷಾ' ಚಿತ್ರದ ಶೂಟಿಂಗ್ ಆರಂಭವಾಗಲಿದೆ. ಸಿನಿಮಾದ ಸೆಟ್, ತಾರಾಗಣ ಮತ್ತು ಇತರೆ ವಿಚಾರಗಳನ್ನು ನಂತರ ತಿಳಿಸಲಾಗುವುದು ಎಂದು ಸುದೀಪ್ ಪೋಸ್ಟ್ ಮಾಡಿದ್ದಾರೆ. ನಟನ ಅಪ್‌ಡೇಟ್ ಕೇಳಿ ಫ್ಯಾನ್ಸ್ ಥ್ರಿಲ್ ಆಗಿದ್ದಾರೆ.



## ಚಿತ್ರದ ಶೂಟಿಂಗ್ ಆರಂಭ


ಇತ್ತೀಚೆಗೆ ಸುದೀಪ್ ಕಟ್ಟುಮಸ್ತಾದ ವರ್ಕೌಟ್ ಫೋಟೋವನ್ನು ಹಂಚಿಕೊಂಡು ಏ.16ಕ್ಕೆ ಅಪ್‌ಡೇಟ್ ಸಿಗಲಿದೆ ಎಂದು ನಟ ಸೋಷಿಯಲ್ ಮೀಡಿಯಾದಲ್ಲಿ ಸುಳಿವು ನೀಡಿದ್ದರು. ಇದೀಗ ಒಂದು ವಾರದ ಮುಂಚಿತವಾಗಿಯೇ ನಟ ಮಾಹಿತಿ ಹಂಚಿಕೊಂಡಿದ್ದಾರೆ. ಏ.16ರಿಂದ ಶೂಟಿಂಗ್ ಶುರು ಎಂದಿದ್ದಾರೆ. ಆದರೀಗ ಏ.16ರಂದು ಶೂಟಿಂಗ್‌ನಲ್ಲಿ ಭಾಗಿಯಾಗಲಿರೋ ಸುದೀಪ್ ಲುಕ್ ಹೇಗಿರಲಿದೆ ಎಂಬುದರ ಬಗ್ಗೆ ಫ್ಯಾನ್ಸ್‌ಗೆ ಕುತೂಹಲವಿದೆ. ಅಂದಹಾಗೆ, 'ಬಿಲ್ಲ ರಂಗ ಭಾಷಾ' ಚಿತ್ರಕ್ಕಾಗಿ ಡೈರೆಕ್ಟರ್ ಅನೂಪ್ ಭಂಡಾರಿ ಜೊತೆ ಸುದೀಪ್ ಕೈಜೋಡಿಸಿದ್ದಾರೆ. 'ವಿಕ್ರಾಂತ್ ರೋಣ' ಚಿತ್ರದ ಬಳಿಕ ಮತ್ತೆ ಈ ಕಾಂಬಿನೇಷನ್ ಒಂದಾಗಿದೆ.

# ವಿದ್ಯಾಪತಿಗೆ ನಡುಕ ಹುಟ್ಟಿಸಿದ ಗರುಡ!

ಧನಂಜಯ ನಿರ್ಮಾಣ ಮಾಡಿರುವ 'ವಿದ್ಯಾಪತಿ' ಚಿತ್ರ ಬಿಡುಗಡೆಯಾಗಿದೆ. ಸಾಕಷ್ಟು ಪಾತ್ರಗಳಲ್ಲಿ ಅಭಿನಯಿಸುತ್ತಾ, ಇತ್ತೀಚಿನ ದಿನಗಳಲ್ಲಿ ನಾಯಕ ನಟನಾಗಿ ಚಾಲ್ತಿಯಲ್ಲಿರುವ ನಾಗಭೂಷಣ್ ಈ ಚಿತ್ರದಲ್ಲಿ ನಾಯಕನಾಗಿ ಅಭಿನಯಿಸಿದ್ದಾರೆ. ನಾಗಭೂಷಣ್ ಈ ಸಿನಿಮಾ ನಾಯಕ ಎಂಬ ಸುದ್ದಿ ಹೊರ ಬಿದ್ದಾಕ್ಷಣವೇ ಬಹುತೇಕರ ಕಲ್ಪನೆ ಹಾಸ್ಯದ ಚೌಕಟ್ಟಿನಲ್ಲಿಯೇ ಗಿರಕಿ ಹೊಡೆದಿತ್ತು. ಆದರೆ ಟ್ರೈಲರ್ ಬಿಡುಗಡೆಗೊಳ್ಳುತ್ತಲೇ ಒಂದಿಡೀ ಚಿತ್ರಣವೇ ಬದಲಾಗಿ ಹೋಗಿತ್ತು. ಯಾಕೆಂದರೆ, ಅಲ್ಲಿ ಸುಳಿದಿದ್ದು ಭಿನ್ನ ಕಥನ, ಅದಕ್ಕೆ ತಕ್ಕುದಾದ ಪಾತ್ರಗಳ ಸುಳಿವು.

## ವಿಲನ್ ಆಗಿ ಅಬ್ಬರ

ಹಾಸ್ಯವೆಂಬುದು ಈ ಸಿನಿಮಾದ ಕಥೆಯ ಆತ್ಮವೆಂಬುದು ನಿಜ. ಆದರೆ, ಅದರಾಚೆಗೂ ಹಬ್ಬಿಕೊಂಡಿರುವ ಬೆರಗಿನ ದೃಶ್ಯಗಳನ್ನು ಕಂಡು ಪ್ರೇಕ್ಷಕರು ಥ್ರಿಲ್ ಆಗಿದ್ದಾರೆ. ಇಶಾಂ ಹಾಗೂ ಹಸೀಮ್ ಸಿದ್ಧಪಡಿ ಸಿದ್ದ ಕಥೆ ಕೇಳಿಯೇ ಡಾಲಿ ಧನಂಜಯ ಈ ಸಿನಿಮಾವನ್ನು ನಿರ್ಮಾಣ ಮಾಡಲು ಮುಂದಾಗಿದ್ದರು. ತನ್ನ ಗೆಳೆಯ ನಾಗಭೂಷಣ್ ನಾಯಕನಾಗಿ ನಟಿಸುತ್ತಿರೋದರಿಂದ ನಿರ್ಮಾಣದ ಕಾಳಜಿಯೂ ಡಾಲಿಗಿತ್ತು. ಕಡೆಗೂ ನಿರ್ದೇಶಕರು ನಿರೀಕ್ಷೆಗೂ ಮೀರಿ ಈ ಚಿತ್ರವನ್ನು ಕಟ್ಟಿಕೊಟ್ಟಿದ್ದರ ಬಗೆಗಿನ ಹೆಮ್ಮೆಯ ಭಾವ ಧನಂಜಯ ಮಾತುಗಳಲ್ಲಿ ಧ್ವನಿಸುತ್ತಿತ್ತು. ಅಂಥಾದ್ದೊಂದು ಮೆಚ್ಚುಗೆಯೀಗ ಸಿನಿಮಾ ನೋಡಿದವರೆಲ್ಲರಲ್ಲೂ ಮೂಡಿಕೊಂಡಿದೆ.



ಅದುವೇ 'ವಿದ್ಯಾಪತಿ'ಯ ಯಶಸ್ಸಿನ ಮುನ್ಸೂಚನೆಯಂತೆಯೂ ಕಾಣಿಸುತ್ತಿದೆ. ಈ ಸಿನಿಮಾದಲ್ಲಿ ಹಲವಾರು ಆಕರ್ಷಣೆಗಳಿದ್ದಾವೆ. ಅದರಲ್ಲಿ ಪ್ರಧಾನವಾಗಿ ಹಾಸ್ಯದೊಂದಿಗೆ ಮಾಸ್ ಸನ್ನಿವೇಶಗಳೂ ಕೂಡ ಸ್ಥಾನ ಪಡೆದುಕೊಳ್ಳುತ್ತವೆ.


Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news



ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966